ಶ್ರೀ ಕೆ. ಪುಟ್ಟಸ್ವಾಮಿ.—ಹೀಗೆ ನಿರ್ಣಯವಿದ್ದರೂ ಕೂಡ ಸರ್ಕಾರದವರು ಅದಕ್ಕೆ ಗಮನ ಕೊಟ್ಟಿಲ್ಲ. ಈಗಲೂ ಸಹ ಮಾನ್ಯ ಮರಿಯಪ್ಪನವರು ಅರ್ಥ ಮಂತ್ರಿಯವರು ಆಗಿದ್ದರೂ ಕೂಡ ಸಂಬಳ ಸಾರಿಗೆ ಜಾಸ್ತಿ ಮಾಡತಕ್ಕಂಥ ಸ್ಕೇಷಲ್ ಪೇ, ಅಲೋಯನ್ಸ್ 150-350 ರೂಪಾಯಿವರೆಗೆ ಕೊಡಬೇಕು ಎಂದು ಆರ್ಡರ್ ಮಾಡುವುದಕ್ಕೆ ಕಾರಣ ಏನು ? ಪ್ರಜಾಪ್ರಭುತ್ವಕ್ಕೆ ಬೆಲೆ ಕೊಟ್ಟಿದ್ದಾರೆಯೇ ? ಈ ಸಭೆಯ ನಿರ್ಣಯಕ್ಕೆ ಬೆಲೆ ಕೊಟ್ಟಿದ್ದಾರೆಯೇ ? ಈ ನಿರ್ಣಯಕ್ಕೆ ಸರ್ಕಾರದ ಪ್ರತಿಕ್ರಿಯೆ ಏನು ಇದೆ ಎಂದು ಒಂದು ಪ್ರಶ್ನೆ ಕೇಳುತ್ತೇನೆ. ಇದೊಂದು ವಿಚಾರವಾಯಿತು, ಇನ್ನೊಂದು ವಿಚಾರ ಹೇಳಬಯಸುತ್ತೇನೆ. ಕಳೆದ ವರ್ಷದ ಬಡ್ಜೆಟ್ ಅಧಿವೇಶನದ ಭಾಷಣದಲ್ಲಿ ಶ್ರೀ ಮರಿಯಪ್ಪನವರು ಸಂಬಳ ಸಾರಿಗೆಗಳನ್ನು ಪುನರ್ ವಿಮರ್ಶೆ ಮಾಡಲಾಗುವುದು ಎಂಬ ಸಂತೋಷವಾಗುವ ವಿಚಾರವನ್ನು ಈ ಸಭೆಗೆ ಹೇಳಿದರು. ನನಗಂತೂ ಅವರ ಮಾತಿನಿಂದ ತುಂಬ ಸಂತೋಷವಾಗುತ್ತದೆ. ಶ್ರೀ ಮರಿಯಪ್ಪನವರ ಮನೋಭಾವವನ್ನು ನಾನು ಚೆನ್ನಾಗಿ ತಿಳಿದಿದ್ದೇನೆ. ಅವರು ಯಾವುದೇ ಕಾರ್ಯ ಮಾಡುವುದಕ್ಕೆ ಮನಸ್ಸು ಮಾಡಿದರೆ ಆ ಕಾರ್ಯ ಸಾಧಿಸಬಲ್ಲ ಶಕ್ತಿ ಅವರಲ್ಲಿ ಇದೆ. ಅದನ್ನು ಕಾರ್ಯರೂಪಕ್ಕೆ ತರುತ್ತಾರೆ ಎಂದು ನಾನು ನಂಬಿದ್ದೇನೆ. ಆದರೆ ಈ ವಿಚಾರದಲ್ಲಿ ಅವರು ನಿರಾಶೆ ಉಂಟಾಗುವಂತೆ ಮಾಡಿದ್ದಾರೆಂದು ಹೇಳಲು ನನಗೆ ತುಂಬ ವಿಷಾದವಾಗುತ್ತದೆ. ಸಂಬಳ ಸಾರಿಗೆಯ ವಿಚಾರ ಪ್ರಸ್ತಾಪಮಾಡಿ ಅವರು ಈ ರೀತಿ ಹೇಳಿದ್ದಾರೆ:

"Government had promised to consider this question as speedily as possible. Accordingly an Official Committee was set up to evolve common scales of pay. The Government took into consideration the needs of the new State and its financial capacity and published their final decision on 25th January 1957. The notable feature in the evolution of the new scales is that a ratio of 1 : 30 between the lowest and the highest paid employees of the Government is maintained as far as possible. As the Hon'ble Members are aware no such principle had ever entered into the evolution of pay scales on any previous occasion. This is in accordance with the new trends. It is only time and the financial capacity that will enable the Government to further reduce this ratio."

ಕನಿಷ್ಠ ಮತ್ತು ಪರಮಾವಧಿ ಸಂಬಳ ಪ್ರಮಾಣ 1 : 30 ಯಾವ ಆಧಾರದ ಮೇಲೆ ಮಾಡಿದ್ದಾರೆ ? ದೇಶದಲ್ಲಿರತಕ್ಕ ಜನತೆಯ ಮನೋಭಾವನೆಗೆ ಅನುಗುಣವಾಗಿದೆಯೇ ? ಸರ್ಕಾರಕ್ಕೆ ಹಣದ ಸೌಲಭ್ಯ ಒದಗಿದ ಹಾಗೆ 1 : 30 ಪ್ರಮಾಣವನ್ನು ಇನ್ನೂ ಕಡಿಮೆ ಮಾಡುತ್ತೇವೆಂದು ಅವರು ಹೇಳಿದ್ದಾರೆ. ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಸ್ಥಾಪನೆ ಮಾಡುವುದಕ್ಕೆ ದೀಕ್ಷೆ ತೆಗೆದುಕೊಂಡ ರಾಜಕೀಯ ಪಕ್ಷದ ರಾಷ್ಟ್ರನೀತಿಯಾಗಿರತಕ್ಕಂಥ ದೇಶದಲ್ಲಿ ಈ ಮಾತು ಎಲ್ಲರಿಗೂ ಒಂದು ಭರವಸೆ, ಸಂತೋಷವಾಗುವಂಥ ಮಾತು ಆದರೆ ಈ ನೀತಿಯನ್ನು ಅನುಸರಿಸಿದ್ದಾರೆಯೇ ? ಏನು ಮಾಡಿದ್ದಾರೆ ? ಈ ನೀತಿ ಎಷ್ಟು ಸುಲಭವಾಗಿ ಬಡ್ಜೆಟ

ಭಾಷಣದಲ್ಲಿ ಈಚೆಗೆ ಬಂತೋ ಅಷ್ಟೇ ಸುಲಭವಾಗಿ ಅದನ್ನು ಗಾಳಿಗೆ ಬಿಟ್ಟಿದ್ದಾರೆ. ಇದು ಸರಿಯಲ್ಲ. ಹೇಳುವುದು ಒಂದು ಮಾಡುವುದು ಮತ್ತೊಂದು, ಆದರೆ ಜನರ ನಂಬಿಕೆ ಕಳೆದುಕೊಳ್ಳುತ್ತಾರೆ. ಆದಷ್ಟು ಜಾಗ್ರತೆ ಸರ್ಕಾರದವರು ಇದನ್ನು ಗಮನದಲ್ಲಿ ತೆಗೆದುಕೊಂಡು ಜನರ ನಂಬಿಕೆ ಹೋಗದಹಾಗೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸರ್ಕಾರ special pay ಕೊಟ್ಟಿದ್ದಾರೆ. ಈ ಸ್ಪೆಷಲ್ ಪೇ ಕಡ್ಡಾಯವಾಗಿ ಕೊಡಲೇಬೇಕು ಎಂದು ಇಂಡಿಯಾ ಸರ್ಕಾರದವರು ಹೇಳತಕ್ಕ appointment ಆಗಿರಲಿಲ್ಲ. ಕೊಡಬಹುದು ಅಥವಾ ಕೊಡದೇಇರಬಹುದಾಗಿತ್ತು. 1957-58ನೆಯ ಸಾಲಿನ ಬಡ್ಜೆಟ್ ಭಾಷಣದಲ್ಲಿ ಈ ಸಭೆಯ ಮುಂದೆ ಯಾವ ನೀತಿಯನ್ನು ಇಟ್ಟಿರೋ, ಯಾವುದು ಈ ಸಭೆಗೆ ಒಪ್ಪಿಗೆಯಾಯಿತೋ ಅಂಥಾದ್ದು ಈಗ ಎಲ್ಲಿ ಹೋಯಿತು ? ಹೋದ ವರ್ಷದ ಬಡ್ಜೆಟ್ ಭಾಷಣ ಮಾಡುತ್ತಾ ಯಾವ ಉದ್ದೇಶವನ್ನು ನಮ್ಮ ಮುಂದೆ ಇಟ್ಟಿರುವಿರೋ ಹಾಗೂ ಅದಕ್ಕೆ ಈ ಸಭೆಯು ಅನುಮತಿ ಕೊಟ್ಟಿದೆಯೋ ಅಂಥ ಒಪ್ಪಿರತಕ್ಕಂಥ ನೀತಿ ಏನು ಆಯಿತು ?

4 P.M.

ಈ ಸಭೆ ಒಪ್ಪಿರತಕ್ಕ ನೀತಿಯನ್ನು ಅಷ್ಟುಸುಲಭವಾಗಿ ಗಾಳಿಗೆ ಬಿಟ್ಟಿರಲ್ಲಾ, ಅದು ಸರಿಯೆ ಎಂದು ಈ ದಿವಸ ಪ್ರಶ್ನೆಮಾಡುತ್ತೇನೆ.

ಇನ್ನೊಂದು ವಿಚಾರ ಶ್ರೀಮಾನ್ ಮರಿಯಪ್ಪನವರು 1956 ನೆಯ ಇಸವಿಯಲ್ಲಿ ಪ್ರಸ್ತಾಪಮಾಡಿದ್ದರು. ಅದನ್ನು ಪುನಃ ಈ ಸಮಯದಲ್ಲಿ ಪ್ರಸ್ತಾಪಮಾಡಬೇಕೆಂದು ಇಚ್ಛಿಸುತ್ತೇನೆ. ಆ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಮುಂಚೆ ಒಂದು ವಿವರಣೆಯನ್ನು ಹೇಳಬೇಕಾದದ್ದು ಅಗತ್ಯ. ಸರ್ಕಾರದ ಮಂತ್ರಿಗಳು ದೇಶದಲ್ಲಿ ಪ್ರವಾಸ ಮಾಡುತ್ತಾರೆ. ಅದಕ್ಕೆ ಎಷ್ಟೋ ಖರ್ಚಾಗಿದೆ, ಅದು ದುಬಾರಿ ಎಂದು ನಾನು ಹೇಳುತ್ತಿಲ್ಲ. ಆ ಗೋಜಿಗೆ ಹೋಗುವುದಿಲ್ಲ. ಅವರು ಪ್ರವಾಸಮಾಡಿದ್ದು ಹೆಚ್ಚು ಅಥವಾ ಕಡಮೆ, ಹಣ ಅನಾವಶ್ಯಕವಾಗಿ ಖರ್ಚಾಯಿತೆ ಅಥವಾ ಇಲ್ಲವೆ ಎಂಬ ಪ್ರಶ್ನೆಗೆ ನಾನು ಕೈ ಹಾಕುವುದಿಲ್ಲ. ಏಕೆ ಪ್ರವಾಸ ಹೋಗಬೇಕಾಗುತ್ತದೆ ಎಂಬ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳೂ ಮತ್ತು ಮರಾಮತ್ ಇಲಾಖೆ ಸಚಿವರೂ ಒಂದು ಸಲ ಹೇಳಿದರು, ಸದಸ್ಯರು ಬಂದು ಬನ್ನಿ ಎಂದು ಕರೆಯುತ್ತಾರೆ, ಏನುಮಾಡುವುದು ಎಂದು ಹೇಳಿದರು. ಸದಸ್ಯರು ಮಂತ್ರಿಗಳನ್ನು ಕರೆಯುವುದು ಸಾಮಾನ್ಯವಾಗಿ ರೂಢಿಯಲ್ಲಿರುವುದು ; ಬೇಕಾದ್ದನ್ನು ಅವರು ಮಂತ್ರಿಗಳಿಗೆ ಹೇಳಲೇಬೇಕು. ಮಂತ್ರಿಗಳು ಪ್ರವಾಸ ಮಾಡುವಾಗ ಅದಕ್ಕೆ ವ್ಯವಸ್ಥೆಮಾಡಿಕೊಳ್ಳಬೇಕಾದದ್ದು ಅವರಿಗೆ ಬಿಟ್ಟಿದೆ. ಆದರೆ ಅದನ್ನು ಈ ಸಭೆಯಲ್ಲಿ ಪ್ರಸ್ತಾಪಿಸುವಾಗ, ಸದಸ್ಯರು ಬಂದು ಒತ್ತಾಯ ಮಾಡುತ್ತಾರೆ, ಹೋಗಬೇಕಾಗುತ್ತದೆ ಎಂದು ಹೇಳುವುದು ಅಷ್ಟು ಒಳ್ಳೆಯದಲ್ಲ ಎಂಬ ಭಾವನೆಯಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ತು ಇಲಾಖೆಯ ಮಂತ್ರಿಗಳು).—ಅವಕಾಶಕೊಟ್ಟರೆ ಒಂದು ವಿಚಾರವನ್ನು ಈ ಸಂಬಂಧದಲ್ಲಿ ತಿಳಿಸುತ್ತೇನೆ. ಶ್ರೀಮಾನ್ ಶಿವಪ್ಪನವರು ಮೂರುತಿಂಗಳಿಂದ ಕರೆಯುತ್ತಿದ್ದರು, ನಾಲ್ಕುಸಲ ನನ್ನಲ್ಲಿ ಬಂದಿದ್ದರು, ಮೂರು ತಿಂಗಳು ಕಾದಿದ್ದರು, ಅನಂತರ ನಾನು ಅವರ ಕಡೆ ಪ್ರವಾಸ ಹೋಗಬೇಕಾಗಿ ಬಂದಾಗ ಟೂರ್ ಪ್ರೋಗ್ರಾಂನಲ್ಲಿ ಅವರು ಕರೆದಿದ್ದ ಜಾಗವನ್ನು ಸೇರಿಸಿಕೊಂಡು ಹೋದೆ ಎಂದು ನಾನು ಒಂದು ಸಲ ಹೇಳಿದ್ದೇನೆ. ಅಷ್ಟೇ ಹೊರತು ಸದಸ್ಯರು, ಸಾರ್ವಜನಿಕರು ಕರೆಯುತ್ತಾರೆ, ಹೋಗಬೇಕಾಗುತ್ತದೆ ಎಂದು ಹೇಳಲಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಆ ರೀತಿ ಆರೋಪ ಮಾಡುವುದು ಸರಿಯಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಮಂತ್ರಿಗಳು ವಿವರಣೆ ಕೊಟ್ಟಿದ್ದಕ್ಕೆ ಕೃತಜ್ಞನಾಗಿದ್ದೇನೆ. ಈ ವಿಚಾರದಲ್ಲಿ ಮಂತ್ರಿಗಳದು ತಪ್ಪಿಲ್ಲವೆಂದು ಮುಖ್ಯಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಈ ವಿಚಾರದಲ್ಲಿ ಹಿಂದೆ ಶ್ರೀ ಮರಿಯಪ್ಪನವರು ಹೀಗೆ ಹೇಳಿದ್ದಾರೆ :

"Sir, there has been incessant criticism with regard to the T.A. and D.A. drawn by the Ministers, not only during the Budget debate but even during the other Sessions of this House. Have we reacted favourably to that ? What is the reply that the Hon'ble the Finance Minister has given to such criticism where there is some element of truth ? Sir, Government can only be democratic, and we would certainly be helping the formation of true democratic atmosphere in the country only when the Ministry and the Ruling Party react favourably to the criticism that is based on facts and where there is an element of truth in it. Sir, it is not enough if we merely say that large number of people request us to go about this country. It was always there even when we were in power. That request is impossible to fulfil. Are we not responsible to this House ? Are we not answerable at the bar of public opinion ? Therefore with regard to T.A. and D.A. it is much better that we cut down considerably if only to fulfil the expectations of the leading members of the Opposition."

ಅವರು ಹೇಳುವುದೆಲ್ಲಾ ಒಪ್ಪತಕ್ಕದ್ದೇ ಆಗಿದೆ. Have we reacted to this ? ನಾವು ಜವಾಬ್ದಾರಿಯುತರಾದವರು. ನಮಗೆ ತಮ್ಮ ರೆಪ್ಯುಟೇಷನ್ ಅನ್ನು ಸ್ವಲ್ಪವಾದರೂ ಕಡಮೆ ಮಾಡಬೇಕೆಂಬ ಉದ್ದೇಶವಿಲ್ಲ. ಕಾಂಗ್ರೆಸ್ 'ಆಡಳಿತದ ಪ್ರಗತಿ, ರೆಪ್ಯುಟೇಷನ್ ಹೆಚ್ಚಬೇಕು ಎನ್ನುವ ಒಂದು ಉದ್ದೇಶದಿಂದ ನಾನು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಸದಸ್ಯರೇನಾದರೂ ಹೇಳಿದರೆ ಅವರ ಸಲಹೆಗಳನ್ನು ಗಮನಿಸಿ ಸೂಕ್ತಕ್ರಮ ಕೈಕೊಳ್ಳಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಹೇಳುವುದನ್ನೆಲ್ಲಾ ಮಾಡಬೇಕೆಂದು ಹೇಳುವುದಿಲ್ಲ. ನಾವು ಹೇಳುವುದನ್ನೆಲ್ಲಾ ಮಾಡಬೇಕೆಂದು ನಿರೀಕ್ಷೆ ಮಾಡುವುದಿಲ್ಲ. ಆದರೆ ಸದಸ್ಯರು ಹೇಳಿದಂಥ ಅಭಿಪ್ರಾಯಗಳಿಗೆ ಸಾಕಷ್ಟು ಮನ್ನಣೆ ಕೊಡಬೇಕಾದದ್ದು ತಮ್ಮ

(ಶ್ರೀ ಕೆ. ಪುಟ್ಟಸ್ವಾಮಿ)

ಆದ್ಯ ಕರ್ತವ್ಯ. ಪ್ರಜಾಪ್ರಭುತ್ವದಲ್ಲಿ ತಮಗೆ ನಂಬಿಕೆಯಿದೆ, ಇರುವುದರಿಂದ ಸಭಾಸದಸ್ಯರು ಮಾಡಿದಂಥ ದೇಶೋಪಕಾರಿಯಾಗುವ ಅಭಿಪ್ರಾಯಗಳಿಗೆ ಹೆಚ್ಚು ಮಾನ್ಯತೆ ಕೊಡಬೇಕೆಂದು ಸರ್ಕಾರದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಸ್ವಾಮಿ, ನಮ್ಮ ಆರ್ಥಿಕ ನೀತಿಯಿಂದ, ಉದ್ದೇಶ ಸಾಧನೆಯಾಗಿದೆಯೆ ಎಂಬುದನ್ನು ಪ್ರಸ್ತಾಪಮಾಡುತ್ತೇನೆ. ಆಯವ್ಯಯ ಪಟ್ಟಿಯಲ್ಲಿ ಪೊಲಿಟಿಕಲ್ ಪೆನ್ಷನ್ಸ್ ಎಂಬ ಒಂದು ಬಾಬಿದೆ. ಅದಕ್ಕೆ ಈಗ ಸರ್ಕಾರದವರು 2 ಲಕ್ಷ 80 ಸಾವಿರ ರೂಪಾಯಿಗಳನ್ನೋ ಏನೋ ಒದಗಿಸಿದ್ದಾರ, ಟೆರಿಟೋರಿಯಲ್ ಅಂಡ್ ಪೊಲಿಟಿಕಲ್ ಪೆನ್‌ಷನ್‌ಗೆ ಇಷ್ಟು ಹಣ ಆಯವ್ಯಯದಲ್ಲಿ ಕಾಣಿಸಿದ್ದಾರೆ. ಇದು ಸರಿಯೆ ? ಯಾರ್ಯಾರಿಗೆ ಎಷ್ಟೆಷ್ಟು ಕೊಡುತ್ತಿದ್ದೀರಿ ? ಇದನ್ನು ನಾನು ಬಲ್ಲೆ. ಕೆಲವರು ಈ ಹಣದಿಂದ ಜೀವನ ಮಾಡಬೇಕಾದ ಅಗತ್ಯವಿದೆಯೆಂದು ವರ್ಷಕ್ಕೆ ಸುಮಾರು 40 ಸಾವಿರ ರೂಪಾಯಿಗಳನ್ನು ಕೆಲವರಿಗೆ ಕೊಡುತ್ತಿದ್ದೀರಿ. ಬೇಕಾದಷ್ಟು ಶ್ರೀಮಂತರಿಗೆ ವರ್ಷಕ್ಕೆ ಲಕ್ಷಾಂತರ ರೂಪಾಯಿಗಳ ಉತ್ಪನ್ನವಿರುವವರಿಗೆ ನೀವು ವರ್ಷಕ್ಕೆ 40 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಅದನ್ನು ಸಭೆಯ ಅನುಮತಿಯಿಂದ ಕೊಡಬೇಕಾಗಿತ್ತು. ಒಂದು ಯಾವುದೋ ಒಪ್ಪಂದಕ್ಕೆ ಸಿಕ್ಕಿ ಕೊಡಬೇಕಾಗಿಲ್ಲ. ಈ ರಾಜ್ಯದಲ್ಲಿ ರಾಜಕೀಯ ಬದಲಾವಣೆಯಾದಾಗ ಏನೋ ಒಂದು ಒಪ್ಪಂದವಾಗಿದೆ, ಅದರ ಪ್ರಕಾರವಾಗಿ ಕೊಡಬೇಕಾಗಿದೆ ಎಂದರೆ ಅದು ಬೇರೆ ಮಾತಾಗುತ್ತದೆ. ಆ ರೀತಿ ನಾವು ಒಪ್ಪಂದಕ್ಕೆ ಸಿಕ್ಕಿಲ್ಲ. ಒಪ್ಪಂದಕ್ಕೆ ಇದು ಸಂಬಂಧಿಸಿಲ್ಲ. ಆದರೂ ಕೂಡ ಪ್ರತಿವರ್ಷ ಈ ಸಭೆಯ ಮುಂದಿಟ್ಟು ಸಭೆಯ ಒಪ್ಪಿಗೆಪಡೆದು ಕೊಡುತ್ತಿದ್ದೀರಿ. ಇದರಲ್ಲಿ ಅನುಸರಿಸಿರುವ ನೀತಿಯೇನು ? ಸಮಾಜವಾದಿ ಸಮಾಜ ರಚನೆ ಮಾಡಬೇಕೆಂದಿರುವಾಗ ಲಕ್ಷಾಂತರ ರೂಪಾಯಿಗಳ ವರಮಾನವಿರುವವರಿಗೆ ಯಾವ ಒಂದು ಒಪ್ಪಂದವೂ ಇಲ್ಲದೆ ಪ್ರತಿವರ್ಷ 40 ಸಾವಿರ ರೂಪಾಯಿಗಳನ್ನು ಒಬ್ಬೊಬ್ಬರಿಗೆ ಕೊಡಬೇಕಾದ ಕಾರಣವೇನು ? ಈ ಪ್ರಶ್ನೆ 1952 ನೆಯ ಇಸವಿಯಲ್ಲೇ ಈ ಸಭೆಯ ಮುಂದೆ ಬಂದಿತ್ತು. ಆಗ ಆರ್ಥಿಕ ಸಚಿವರೂ ಮತ್ತು ಮುಖ್ಯಮಂತ್ರಿಗಳೂ ಆಗಿದ್ದಂಥ ಶ್ರೀಮಾನ್ ಹನುಮಂತಯ್ಯನವರು ಈ ವಿಚಾರ ಪ್ರಸ್ತಾಪ ಮಾಡಿದರು, ಪ್ರಸ್ತಾಪಮಾಡಿ ಬಹಳ ತೃಪ್ತಿಕರವಾದ ಮತ್ತು ಆಶಾದಾಯಕವಾದ ಭಾವನೆಯನ್ನು ವ್ಯಕ್ತಪಡಿಸಿದರು. ಅವರ ಧೈರ್ಯ ಮತ್ತು ಸಾಹಸದಲ್ಲಿ ಬಹಳ ನಂಬಿಕೆಯಿರುವವನು ನಾನು. ಆದರೆ ಅವರ ಧೈರ್ಯ ಎಲ್ಲಿ ಹೋಯಿತು ? ಅವರ ಸಾಹಸದಿಂದ ಏನೂ ಪ್ರಯೋಜನವಾಗಲಿಲ್ಲ.

ಸಭೆಯ ಮುಂದೆ ಆ ವಿಚಾರವನ್ನು ಪ್ರಸ್ತಾಪ ಮಾಡಿದಾಗ ನನಗಾದರೂ ಎನ್ನಿಸಿತು, ಏಕೆ ಅದು ಬಡ್ಜೆಟ್ಟಿನಲ್ಲಿ ಸೇರಿಸಲ್ಪಟ್ಟಿದೆ ಎಂದು. ಈಗಾಗಲೇ ನಾಲ್ಕೈದು ವರ್ಷಗಳಾಗಿದ್ದರೂ ಸಹ ಆ ಕಾರ್ಯವನ್ನು ಇವರು ಮಾಡಿಲ್ಲ. ಅನಂತರ ಎಷ್ಟೋ ಬದಲಾವಣೆಯಾಗಿದೆ. ನಮ್ಮ ದೇಶದ, ರಾಷ್ಟ್ರದ ನೀತಿಯನ್ನೇ ನಾವು ಬೇರೆ ರೀತಿ ಬದಲಾಯಿಸಿದ್ದೇವೆ. Socialistic Pattern of Society ಎನ್ನುವ ನೀತಿಯನ್ನು ನಾವೀಗ ಒಪ್ಪಿಕೊಂಡಿದ್ದೇವೆ. ಆ ನೀತಿಯನ್ನು ಒಪ್ಪಿಕೊಂಡಿರತಕ್ಕ ರಾಜಕೀಯಪಕ್ಷ ಆಡಳಿತ ನಡೆಸುತ್ತಿದೆ. ಆದರೆ ಇದು ಇನ್ನೂ ಫಲಕಾರಿಯಾಗಲಿಲ್ಲ. ಈ ವರ್ಷವೂ ಕೂಡ 2,61,000 ಗಳನ್ನು ಅದಕ್ಕಾಗಿ ಇಟ್ಟಿದ್ದಾರೆ. ಅದನ್ನು ಕೊಡಬೇಕಾದ ಅಗತ್ಯವಿದೆಯೋ ಇಲ್ಲವೇ, ಅದನ್ನು ತಪ್ಪಿಸಬೇಕಾಗಿದೆಯೋ ಎಂದು ನೋಡಬೇಕು. ಶ್ರೀಮಾನ್ ಹನುಮಂತಯ್ಯನವರಿಗಿಂತಲೂ ಹೆಚ್ಚಿಗೆ ಹೇಳುವುದಕ್ಕೆ ನನಗೆ ಶಕ್ತಿ ಇಲ್ಲ. ಅವರು ಹಿಂದೆ ಹೇಳಿರುವುದನ್ನು ಈ ಸಭೆಯ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

"The House is aware, Sir, that very many people still live in the past so far as their mental outlook is concerned though physically they may be said to live in the present. My anxiety is not to rub any section of the people on the wrong side. My policy is to persuade people to see the reasonableness of the constitutional provisions. It is with that view, Sir, the other day I made a statement on the floor of this House that I am having talks with the concerned personages to enable me to take a decision with harmony and in friendship. Personally, I see no reason whatever why we should pay Rs. 40,000 to each of the sisters of His Highness the Maharaja, because they are married to Princes who are themselves getting considerable sums in the shape of Privy Purse."

ಶ್ರೀ ಕೆ. ಎ. ಪಾಟೀಲ್ (ತಾಳೀಕೋಟೆ).—ನಲವತ್ತು ಸಾವಿರ ರೂಪಾಯಿ ಒಬ್ಬರಿಗೆ ಕೊಡತ್ತಾರೆಂದು ತಿಳಿಸಿದಿರಿ. ಯಾರಿಗೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಯಾರುಯಾರಿಗೆ ಎಷ್ಟೆಷ್ಟು ಕೊಡುತ್ತಾರೆನ್ನುವುದನ್ನು ನಿರ್ಧರವಾಗಿ ಹೇಳುವ ಶಕ್ತಿ ಇರುವುದು ಆರ್ಥಿಕ ಮಂತ್ರಿಗಳಿಗೆ ಮಾತ್ರ. ನನ್ನ ಹತ್ತಿರ ಆ ವಿವರಗಳಿಲ್ಲ.

Sri K. HANUMANTHAIYA (Ramanagara).—If you look into the Budget, you will find names and amounts also.

Sri K. PUTTASWAMY.—

"...... When we want political and economic equality to prevail in this country, it appears to me that to perpetuate this inequality would be doing violence to the spirit of the Constitution; not only to the spirit of the Constitution, but to the definite provisions of the Constitution. Therefore, I request this House to give me some time to move in the matter so as to bring agreement. It is easy for us to simply vote down this Demand.

It is in our power. Nobody can come in the way. But when we are strong, when the Constitution has made us sovereign, let us conduct ourselves with that dignity which power casts on our shoulders. Let us move in a manner befitting the sovereign dignity that the House today enjoys.

"I hope, Sir, that with the good-will and co-operation of this House, we may be able to do things along the lines I have suggested. I have to mention one more fact. The Leader of the country, Pandit Jawaharlal Nehru, has said that he is not in favour of these hereditary things being continued. I am not flattering myself or this House when I say that all of us are informed by the same spirit. Merely because a person is born in a particular family, he should not have the advantage of money as well as status. It is against this psychology that the Constitution has made provisions in the Preamble and in the Directive principles of State Policy. I am sure, Sir, those people who think I am doing things rather in a revolutionary manner, will see I am not revolutionary at all. I am merely a humble and sincere servant of the Constitution. I hope those people who are upset by some of the measures that we have taken in keeping with the spirit of the Constitution will see reason. It is with this view that I beg this House to give me some time so that I may do their behest."

[Page 1150 - Vol. VII (18th June to 16th July 52] First Session of the Second L.A., 1952.]

Sri K. HANUMANTHAIYA.—On a point of personal explanation, Sir. I have carried on correspondence. It is in the files and I am sure the Hon'ble the Finance Minister will be able to give a comprehensive reply on the point.

Sri K. PUTTASWAMY.—The proof of the pudding is in the eating!

[MR. SPEAKER in the Chair]

ಕರ್ತವ್ಯಲೋಪಮಾಡಿದಾರೆಂದು ನಾನು ಹೇಳಲಿಲ್ಲ. ಯಾರೇ ಆಗಲಿ ಈ ವಿಚಾರದ ಕಡೆಗೆ ಗಮನಕೊಟ್ಟಿಲ್ಲವೆಂದು ಹೇಳಿಲ್ಲ. ಶ್ರೀಮಾನ್ ಕೆ. ಹನುಮಂತಯ್ಯನವರು 'I am not revolutionary' ಎಂದು ಹೇಳಿದ್ದಾರೆ. ಆ ವಿಚಾರವನ್ನು ನಾನು ನಂಬಲಿಲ್ಲ. ಅವರು revolutionary ಎಂದು ನಾನು ತಿಳಿದಿದ್ದೆ. Revolutionary ಆಗಿದರೆ ಬಹಳ ಬೇಗ ಫೈಸಲ್ ಆಗಬಹುದಾಗಿತ್ತು. ಕಾರಣಾಂತರದಿಂದ ಅದು ಆಗಲಿಲ್ಲ. ಈಗಲೂ ಕೂಡ ಆಗಿಲ್ಲ. Vote down ಮಾಡಬಾರದು, ಅದಕ್ಕೆ ಟೈಮ್ ಕೊಡಿ ಎಂದು ಕೇಳಿದರು. ಈಗಲಾದರೂ ನಾನು ಹೇಳುತ್ತೇನೆ. ಸಭೆಯವರು ಈ ವಿಚಾರವನ್ನು ಗಮನಿಸಬೇಕು. ಸರ್ಕಾರದವರು ಈ ವಿಚಾರದಲ್ಲಿ ತಮ್ಮ ನಿಲುವು ಏನು ಎನ್ನುವುದನ್ನು ತಿಳಿಸಬೇಕು. Vote down ಮಾಡುವ ಪರಿಸ್ಥಿತಿ ಬಂದಿಲ್ಲ. ಅಂಥ ಪರಿಸ್ಥಿತಿಯನ್ನು ತರಬೇಡಿ ಎಂದು ನಾನು ಸರ್ಕಾರದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಅದೇ ವಿಚಾರವನು ಇನ್ನೂ ಪ್ರಸ್ತಾಪ ಮಾಡಬೇಕೆಂದು ಬಯಸುತ್ತೇನೆ. ನಾನು ಹೇಳುತ್ತಿರುವುದು ಕೂಡ ಪ್ರಜಾಸತ್ತೆಗೆ ಸರ್ಕಾರದ ಪ್ರತಿಕ್ರಿಯೆ ಹೇಗಿದೆ ಎಂದು. ಇದನ್ನು ತಿದ್ದುಪಡಿಮಾಡಬೇಕಾದುದು ಅಗತ್ಯವೆಂದು ಕೆಲವು ವಿಚಾರಗಳನ್ನು ಹೇಳುತ್ತಿದ್ದೇನೆ.

ಶೇಷಾದ್ರಿಪುರಂ ಪೋಲೀಸ್ ಸ್ಟೇಷನ್ನಿನಲ್ಲಿ ನಡೆಯಿತು ಎಂದು ಹೇಳಲಾದ ಮುನಿಯಮ್ಮನ ಪ್ರಸಂಗ ಈ ಸಭೆಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಬಹಳ ಚರ್ಚೆಯಾಗಿದೆ. ಸರ್ಕಾರದವರು ಪ್ರಜಾಶಕ್ತಿಯ ಪ್ರತಿಕ್ರಿಯೆಯನ್ನು ಈ ಪ್ರಶ್ನೆ ಬಂದಾಗ ತೋರಿಸಿದರೇ ಎನ್ನುವ ವಿಚಾರವನ್ನು ನಾನೀಗ ಪ್ರಶ್ನೆಮಾಡುತ್ತಿದ್ದೇನೆ. ಆ ವಿಚಾರದಲ್ಲಿ ಆಗಿರತಕ್ಕ ಪ್ರಚಾರ ಅಷ್ಟು ಸರಿಯಾದುದಲ್ಲ, ನಿಖರವಾದುದಲ್ಲ, ಯಾರಿಗೂ ಕೂಡ ತೊಂದರೆಯಾಗಿಲ್ಲ, ಮುನಿಯಮ್ಮನಿಗೆ ಪೋಲೀಸಿನವರು ಯಾವ ವಿಧದಲ್ಲಿಯೂ ತೊಂದರೆ ಕೊಟ್ಟಿಲ್ಲ ಎಂದು ಕೇಳಿ ತಿಳಿದಿದ್ದೇನೆ. ಅದು ಬೇರೆ ಮಾತು. ಆದರೆ ಸರ್ಕಾರದಿಂದ ಏನು ನಿರೀಕ್ಷೆಮಾಡಿದ್ದೆವು ಎಂಬುದನ್ನು ಹೇಳುತ್ತೇನೆ. ಈ ಸಭೆಯು ಫೆಬ್ರವರಿ 22ನೆ ತಾರೀಖು ಸೇರಿದ್ದು ಇದುವರೆಗೂ ನಡೆಯುತ್ತಿದೆ. ಪತ್ರಿಕೆಗಳಲ್ಲಿ ಮುನಿಯಮ್ಮನ ಸಾವಿನ ವಿಚಾರ ಬಂತು. ಹೇಳಿಕೆ ಪ್ರತಿ ಹೇಳಿಕೆಗಳು ಬಂದುವು. ಇವೆಲ್ಲ ಎರಡು ಮೂರುದಿವಸ ಬಂದವು. ಇದು ಸಣ್ಣ ವಿಚಾರವಲ್ಲ. ಒಬ್ಬ ಮಹಿಳೆಯ ವಿಚಾರದಲ್ಲಿ, ಯಾರು ಜನರ ಮಾನ ಮತ್ತು ಪ್ರಾಣಗಳನ್ನು ರಕ್ಷಣೆಮಾಡಬೇಕೋ ಅವರ ಮೇಲೆಯೇ ಇಂದು ಅಪವಾದ ಬಂದಿದೆ. ಅದು ನಿಜವಲ್ಲ. ನಿಜವಲ್ಲದೆ ಇದ್ದರೂ ಕೂಡ ವಿರೋಧಪಕ್ಷದವರು ಈ ವಿಚಾರದಲ್ಲಿ ಒಂದು ನಿಲುವಳಿ ಸೂಚನೆಯನ್ನು ತರುವವರೆಗೂ ಕೂಡ ಏಕೆ ಈ ಸಭೆಗೆ ವಿಷಯವನ್ನು ತಿಳಿಸಲಿಲ್ಲವೆಂದು ನಾನು ಪ್ರಶ್ನೆಮಾಡುತ್ತೇನೆ. ಪತ್ರಿಕೆಗಳಲ್ಲಿ ಹೇಳಿಕೆಗಳು ಬಂದಾಗ, ಕಳವಳಕರವಾದಂಥ ಹೇಳಿಕೆಗಳು ಬಂದಾಗ, ಮಹಿಳೆಯರ ಮಾನ ಮತ್ತು ಪ್ರಾಣ ರಕ್ಷಣೆ ಸರಿಯಾಗಿ ನಡೆದಿಲ್ಲವೆಂದು ದೂರುಬಂದಾಗ ಸರ್ಕಾರದವರು ಈ ಸಭೆಯ ಮುಂದೆ ಒಂದು ಹೇಳಿಕೆಯನ್ನು ಕೊಟ್ಟಿದ್ದರೆ, ನಿಲುವಳಿ ಸೂಚನೆಯನ್ನು ತರುವಂಥ, ಅಥವ ಅಲ್ಪಕಾಲಾವಧಿ ಪ್ರಶ್ನೆಯನ್ನು ತರುವಂಥ ಸಂದರ್ಭ ಬರುತ್ತಿರಲಿಲ್ಲ. ಹೀಗೆ ಹೆಚ್ಚು ಜನರ, ಸದಸ್ಯರ ಮನಸ್ಸನ್ನು ಕಲಕುವಂಥದಕ್ಕೆ ಅವಕಾಶ ಇರುತ್ತಿರಲಿಲ್ಲ ಅದೂ ಅಲ್ಲದೆ ಸಂಸ್ಥಾನದ ಜನರು

(SRI K. PUTTASWAMY)

ಗೃಹಮಂತ್ರಿಗಳಿಂದ ಒಂದು ಹೇಳಿಕೆಯನ್ನು ನಿರೀಕ್ಷೆ ಮಾಡಿದ್ದರು. ಆ ಹೇಳಿಕೆಯನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಅವರು ಪ್ರಜಾಸತ್ತೆಗೆ ತೋರಿಸಬೇಕಾದ ಈ ಪ್ರತಿಕ್ರಿಯೆ democratic response ಯನ್ನು ಮಾಡಲಿಲ್ಲವಲ್ಲ ಎನ್ನುವುದನ್ನು ನಾನು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ. ಇನ್ನಾದರೂ ಕೂಡ ಇಂಥ ಸಮಾಚಾರಗಳು ತಿಳಿದಾಗ ಸರ್ಕಾರ ದವರು ಎಚ್ಚರದಿಂದ್ದರೆ ಎಷ್ಟೋ ಕ್ಷೇಮವಾಗುತ್ತ ದೆಂದು ಸೂಚಿಸುತ್ತೇನೆ.

* ಶ್ರೀ ಸಿ. ಎಂ. ಪೂಣಚ್ಚ (ಒಳಾಡಳಿತ ಮತ್ತು ಕೈಗಾರಿಕಾ ಶಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರು ಅವಕಾಶ ಕೊಡುವುದಾದರೆ ಒಂದು ವಿಷಯವನ್ನು ತಿಳಿಸುತ್ತೇನೆ. ಮಾನ್ಯ ಸಭೆಗೆ ತಿಳಿದಹಾಗೆ ಈ ವಿಷಯ ಸಭೆಯ ಗಮನಕ್ಕೆ ಮತ್ತು ಸರ್ಕಾರದ ಗಮನಕೆ ಪ್ರಥಮತಃ ಬಂದದ್ದು ಫೆಬ್ರವರಿ 28ನೆಯ ತಾರೀಖಿನ ದಿನ. ಫೆಬ್ರವರಿ 27ನೆಯ ತಾರೀಖು ಮುನಿಯಮ್ಮ ಎಂಬಾಕೆ ತೀರಿಹೋದಮೇಲೆ 28ನೆಯ ತಾರೀಖು ಈ ವಿಷಯ ತಿಳಿಯಿತು. ತಾವೆಲ್ಲ ತಿಳಿದ ಹಾಗೆ ವಿಚಾರಣೆ ನಡೆಯುತ್ತ ಇರುವ ಸಂದರ್ಭದಲ್ಲಿ ಯಾವ ಪ್ರಕಾರವಾದ ಹೇಳಿಕೆಯನ್ನು ಕೊಡಬಹುದಾಗಿತ್ತು ಎಂದು ಮಾನ್ಯ ಸದಸ್ಯರು ಗ್ರಹಿಸಿದರೋ ನನಗೆ ತಿಳಿಯದು. ವಿಚಾರಣೆ ನಡೆಯುತ್ತಿರುವಾಗ ಹೇಳಿಕೆಯನ್ನು ಕೊಡಬಹುದೇ, ಕೊಡಬಾರದೇ, ಎಷ್ಟರ ಮಟ್ಟಿಗೆ ಇದರಲ್ಲ ಸಬ್‌ಜುಡಿಸ್ ಆಗುತ್ತದೆ ಎನ್ನುವಂಥ ಪ್ರಶ್ನೆಯಮೇಲೆ ದೀರ್ಘವಾಗಿ ಚರ್ಚೆ ನಡೆದಿರುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಈ ಸಂದರ್ಭದಲ್ಲಿ ಒಂದು ಹೇಳಿಕೆ ಕೊಡುವಂಥಾದ್ದು ನನ್ನ ನಿರೀಕ್ಷೆಯಲ್ಲಿ ಇದ್ದೂ ಕೂಡ ಅಂಥದಕ್ಕೆ ಅವಕಾಶವನ್ನುಂಟುಮಾಡಿಕೊಳ್ಳಲಿಕ್ಕೆ ನಾನಾ ವಿಧದ ತೊಂದರೆಗಳೂ ಅಡಚಣೆಗಳೂ ಇವಂಥಾದ್ದು ಸಭೆಯ ಮಾನ್ಯ ಸದಸ್ಯರಿಗೆ ಕೂಡ ತಿಳಿದಿದೆ ಯಾವ ಸಂದರ್ಭದಲ್ಲಿ ಹೇಳಿಕೆಯನ್ನು ಕೊಡಬಹುದಾಗಿತ್ತು ಎನ್ನುವುದು ಸ್ಪಷ್ಟವಾಗಿಲ್ಲ.

Sri K. HANUMANTHAIYA.—Sir, this is a very important matter. Only the Hon'ble Minister must take it more seriously. There are two ways of making a statement. There is what is called the routine way of making statements—to enquire from the department and concerned officers and make a statement. This case, so far as I know, has disturbed not only the Members of the Opposition but all of us. The reputation of the party in power is at stake. This routine reply that nothing else need be done does not satisfy. As a matter of fact, there is a great deal of truth in what has been said on the floor of this House by the members of the Opposition and the members of the Treasury Benches. A remedy has to be applied. A mere routine reply hushing up matters will not do credit to any one of us.

Sri C. M. POONACHA.—I must submit that Hon'ble Member Sri Hanumanthaiya seems to have taken an extreme view of the matter and then he is perhaps suffering under a certain amount of exaggerated notion. I completely discountenance the statement that he has made. I am absolutely satisfied with the investigations. I have made and I am going to make a statement in the course of the Budget debate. I will certainly place the entire facts before the House. And there is absolutely nothing to hide facts and shelve the issues.

Sri K. HANUMANTHAIYA.—I would emphatically state that he is again labouring under a complacency and this matter will pursue like the very ghost of Muniamma.

ಶ್ರೀ ಕೆ. ಪುಟ್ಟಸ್ವಾಮಿ.—ಇದನ್ನು ಚರ್ಚಾಸ್ಪದ ಮಾಡುವ ದೃಷ್ಟಿಯಿಂದ ಮಾಡಲಿಲ್ಲ, ನಾನಾದರೂ ಪ್ರಜಾಸತ್ತಾತ್ಮಕವಾದಂಥ ಸರ್ಕಾರ ಯಾವರೀತಿ ಪ್ರತಿಕ್ರಿಯೆ ತೋರಿಸಬೇಕು ಎನ್ನುವುದನ್ನು ಪ್ರಸ್ತಾಪ ಮಾಡುತ್ತೇನೆ. ಟೀಕೆಗಳಿಗೆ ಸರ್ಕಾರದಿಂದ ಡೆಮಾಕ್ರೆಟಿಕ್ ರೆಸಪಾನ್ಸ್ ಏನಿದೆ? ನಾವು ಮಾಡಿದಂಥ ಟೀಕೆಗಳಿಗೆ, ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ, ಸರ್ಕಾರ ಯಾವರೀತಿ ಮಾನ್ಯತೆ ಮಾಡುತ್ತಾ ಇದೆ?

ಈ ಸಭೆಯಲ್ಲಿ ಉತ್ತರಗಳನ್ನು ಕೊಡುತ್ತಾ ಇರತಕ್ಕಂಥ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ತೋಟಿ, ತಳವಾರರಿಗತಕ್ಕಂಥ ಈ ದೇಶದಲ್ಲಿ, ಅವರಿಗೆ ಕ್ರಮವಾಗಿ ಮಿರಾಸೆಕೊಡುತ್ತಿದೆಯೇ ಎಂಬ ವಿಷಯದಲ್ಲಿ ಒಂದು ನಿರ್ಣಯ ಈ ಸಭೆಯ ಮುಂದೆ ಬಂದಿತು. ಚರ್ಚೆಗೆ ಆ ನಿರ್ಣಯವನ್ನು ತೆಗೆದುಕೊಂಡ ದಿವಸ ರೆವಿನ್ಯೂ ಮಂತ್ರಿಗಳು ಸಭೆಯಲ್ಲಿ ಹಾಜರಿರಲಿಲ್ಲ. ಮಾನ್ಯ ಎಲ್.ಎಸ್.ಜಿ. ಮಂತ್ರಿಗಳು ಉತ್ತರ ಕೊಡುವುದಕ್ಕೆ ಎದ್ದರು. ಅಂತಹ ಫಿರ್ಯಾದು ಬಂದಿಲ್ಲ ಎಂದು ಹೇಳಿದರು. ಪ್ರಶ್ನೆಯಲ್ಲಿ ಕೇಳಿರುವುದು ಮಿರಾಸೆ ಸರಿಯಾಗಿ ಕೊಡುತ್ತಾ ಇದೆಯೇ ಎಂದು. ಅವಕ್ಕೆ ಉತ್ತರವಾಗಿ ಸರಿಯಾಗಿ ಕೊಡುತ್ತಾ ಇಲ್ಲ ಎಂದು ಹೇಳುವುದು ಬಿಟ್ಟು, ಫಿರ್ಯಾದು ಬಂದಿಲ್ಲ ಎಂದರೆ ಏನು ಅರ್ಥ? ಈ ವಿಚಾರದಲ್ಲಿ ಸಭೆಯಲ್ಲಿ ಬೇಕಾದಷ್ಟು ಚರ್ಚೆಯಾಗಿದೆ. ಇದು ಎಲ್ಲರಿಗೂ ಗೊತ್ತಿರುವ ಅಂಶ. ಈ ಗೊತ್ತಿರುವ ಅಂಶದಮೇಲೆ ಪುಂಖಾನು ಪುಂಖಾನುವಾಗಿ ಉಪಪ್ರಶ್ನೆಗಳನ್ನು ಕೇಳಿದರೆ, ಯಾವ ಪ್ರಶ್ನೆಗೂ ಅದೇ ಉತ್ತರ. ಇದು ಒಂದು ದೊಡ್ಡ ಸಮಸ್ಯೆಯಾಗಿರುವಾಗ ಯಾವ ರೀತಿಯಾಗಿ ಪರಿಹಾರಮಾಡುತ್ತಾರೆ ಎಂಬುದನ್ನು ಅವರು ಹೇಳಲಿಲ್ಲ. ನಮ್ಮಲ್ಲಿ ಈ ಮನೋಭಾವನೆ ಇರಕೂಡದು. ರೆವಿನ್ಯೂ ಮಂತ್ರಿಗಳು ಇರುವ ವಿಚಾರವನ್ನು ಒಪ್ಪಿಕೊಂಡರು. ಈ ಪ್ರಶ್ನೋತ್ತರಕಾಲ ಎನ್ನುವುದು ಒಂದು ಸವಾಲು ಒಂದು ಜವಾಬು ಎನ್ನುವುದಲ್ಲ. ಅಥವಾ ಈ ಸಭೆಯನ್ನು ನಗೆಗಡಲಿನಲ್ಲಿ ಮುಳುಗಿಸುವುದಕ್ಕೆ ಇರುವ ಕಾಲವಲ್ಲ. ಇರತಕ್ಕಂಥ ವಿಚಾರವನ್ನು ಸಚಿವರು ಹೇಳಬೇಕು. ಈ ಪ್ರಶ್ನೋತ್ತರ ಕಾಲದಲ್ಲಿ ಸದಸ್ಯ

ರಿಗೆ ಪ್ರಶ್ನೆ ಹಾಕುವ ಹಕ್ಕು ಇರುವುದು ಒಂದು ಅಮೂಲ್ಯವಾದ ಹಕ್ಕು. ಆಡಳಿತದಲ್ಲಿ ನಡೆಯುತಕ್ಕಂಥ ವಿಚಾರಗಳನ್ನು ಎತ್ತಿ ತೋರಿಸುವುದಕ್ಕೆ ಇರುವ ಸದವಕಾಶ. ಅನ್ನ ಬೆಂದಿದೆಯೋ ಎಂದು ತಿಳಿದುಕೊಳ್ಳುವುದಕ್ಕೆ ಒಂದು ಕಾಳು ಅಗುಳನ್ನು ನೋಡುತ್ತೇವೆ. ಹಾಗೆಯೆ ಆಡಳಿತ ಹೇಗೆ ನಡೆಯುತ್ತಿದೆ ಎಂದು ಈ ಕಾಲದಲ್ಲಿ ಪರೀಕ್ಷಿಸುತ್ತೇವೆ. ಪ್ರಶ್ನೆಗೆ ಯಾವ ರೀತಿ ಉತ್ತರ ಬರುತ್ತದೆ ಎನ್ನುವುದರ ಮೇಲೆ ಸರ್ಕಾರದ ಅಡಳಿತ ಸರಿಯಾಗಿ ನಡೆಯುತ್ತಿದೆಯೆ ಇಲ್ಲವೆ ಎನ್ನುವುದನ್ನು ಊಹೆ ಮಾಡುತ್ತೇವೆ. ಆದ್ದರಿಂದ ಈ ಪ್ರಶ್ನೆಯನ್ನು ಹಾಕಿದಾಗ ಏನೋ ಒಂದು ಸಾಮಾನ್ಯ ಅವಧಿ ಎಂದು ತಿಳಿದುಕೊಂಡು ಉತ್ತರ ಕೊಡಬಾರದು. ಇವೊತ್ತಿನ ಒಂದು ಪ್ರಶ್ನೆಗೆ ಮರಾಮತ ಶಾಖೆಯ ಮಂತ್ರಿಗಳು ಕಳೆದ ಮೇ ತಿಂಗಳಿನಲ್ಲಿ ಕಳುಹಿಸಿದ ಪ್ರಶ್ನೆಗೆ ಉತ್ತರಕೊಟ್ಟರು. ಸರ್ಕಾರಕ್ಕೆ ಅಧಿಕಾರಿಗಳು ಉತ್ತರ ಕೊಟ್ಟಿರುವುದು ಡಿಸೆಂಬರ್ ತಿಂಗನಲ್ಲಿ ಅದಕ್ಕೆ ನಮಗೆ ಉತ್ತರ ಬರುವುದು ಇವೊತ್ತು. ಇದು ಏನು ತೋರಿಸುತ್ತದೆ? ಮಂತ್ರಿಗಳು ಹೇಳಬಹುದು ನಮ್ಮ ಕೈಗೆ ಅಧಿಕಾರಿಗಳಿಂದ ಬಂದ ಉತ್ತರ ಕೊಟ್ಟಿದ್ದೇವೆಂದು. ಆದರೆ ಆ ಉತ್ತರ ಒದಗಿಸುವ ಆಡಳಿತ ಯಂತ್ರ ಸರಿಯಾಗಿವೆಯೋ, ಅದು ಸುಸಜ್ಜಿತವಾದ ಯಂತ್ರವಾಗಿದೆಯೋ, ಕಾಲಕಾಲಕ್ಕೆ ಸರಿಯಾಗಿ ತನ್ನ ಕೆಲಸಮಾಡುತ್ತಿದೆಯೋ ಎಂಬುದನ್ನು ವಿಮರ್ಶೆಮಾಡಿನೋಡಬೇಕು.

*ಶ್ರೀ ಎಚ್. ಕೆ. ವೀರಣ್ಣಗೌಡ.—ಈಗಿನ ವ್ಯವಸ್ಥೆಯಂತೆ ಸದಸ್ಯರು ಯಾವಾಗ ಬೇಕ ದರೂ ಪ್ರಶ್ನೆಯನ್ನು ಕಳುಹಿಸಬಹುದು. ನಾವು ಲೆಜಿಸ್ಲೇಚರ್ ಸೆಕ್ರಟೇರಿಯಟ್‌ಗೆ ಉತ್ತರ ಕಳುಹಿಸುತ್ತೇವೆ. ಆ ಆಫೀಸಿನವರು ಉತ್ತರಗಳನ್ನು ಸಿದ್ಧಮಾಡಿ ಇಟ್ಟುಕೊಂಡಿರುತ್ತಾರೆ. ಅವು ಅಧಿವೇಶನ ಕಾಲದಲ್ಲಿ ಈ ಸಭೆಯ ಮುಂದೆ ಬಂದಾಗ, ಉತ್ತರಗಳು ಅಪ್-ಟು-ಡೇಟ್ ಆಗಿದೆಯೇ ಇಲ್ಲವೇ ಎಂದು ವಿಮರ್ಶೆಮಾಡುವುದಕ್ಕೆ ಅವಕಾಶವಿರುವುದಿಲ್ಲ. ಹಿಂದಿನ ಪದ್ಧತಿಯಲ್ಲಿ ಅಧಿವೇಶನ ಸೇರುವುದಕ್ಕೆ ಸುಮಾರು 20–25 ದಿವಸಗಳ ಹಿಂದೆ ಉತ್ತರಗಳನ್ನು ತರಿಸುವುದಕ್ಕೆ ಮಾಯಿದೆ ಇದ್ದಿತು. ಆವಾಗ ಸ್ವಲ್ಪ ಹೆಚ್ಚು ಕಡಮೆ 15 ದಿವಸದ ಹಿಂದಕ್ಕೆ ಉತ್ತರಗಳು ಅಪ್ ಟು-ಡೇಟ್ ಆಗಿ ಇರುತ್ತಿದ್ದುವು. ಈಗಿನ ಪದ್ಧತಿಯ ಪ್ರಕಾರ ಉತ್ತರಗಳು ಅಪ್-ಟು-ಡೇಟು ಆಗಿದೆಯೇ ಇಲ್ಲವೇ ಎಂದು ಮತ್ತೆ ವಿಮರ್ಶೆಮಾಡುವುದಿಲ್ಲ. ಮಾನ್ಯ ಸದಸ್ಯರು ಕೊಟ್ಟ ಹೊಸ ಸಲಹೆಯನ್ನು ಅನುಸರಿಸುವುದರಲ್ಲಿ ಅಭ್ಯಂತರವಿಲ್ಲ. ಈ ಹೊಸ ಪದ್ಧತಿ ಯಿಂದ 3-4 ತಿಂಗಳ ಹಿಂದಿನ ಹಳೆಯ ವಿಷಯಗಳನ್ನು ಈ ಸಭೆಯಮುಂದೆ ತಿಳಿಸುವುದಕ್ಕೆ ಕಾರಣವಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಚರ್ಚೆ ಮೊದಲಾಗುವುದಕೆ ಮುನ್ನ ಕಾಲ ನಿಗದಿಮಾಡಿರುವ ವಿಷಯ ಜ್ಞಾಪಕ ಇದೆ. ಹಲವಾರು ವಿಚಾರಗಳಿವೆ, ಅವುಗಳು ಬೇರೆ ಸಂದರ್ಭಗಳಲ್ಲಿ ಬರುತ್ತವೆ. ನಾವು ಅವುಗಳನ್ನು ಪಕ್ಷದ ಸಭೆಯಲ್ಲಿ ಹೇಳಿದರೆ ಆಗುತ್ತದೆ. ಅವುಗಳು ಸಾರ್ವಜನಿಕರಿಗೂ ತಿಳಿಯಬೇಕು ಎನ್ನುವ ಆಶೆ ಇದ್ದರೆ, ಅದಕ್ಕೆ ಅವಕಾಶವಿರುವುದಿಲ್ಲ.

ಉತ್ತರ ಕೊಡುವ ರೀತಿಯನ್ನು ಹೇಳುತ್ತಾ ಇದ್ದೇನೆ. ಕೆಲವು ಕಾಲದ ಹಿಂದೆ 15 ದಿನಗಳ ಹಿಂದೆ, ನಾನು ಒಂದು ಆಫೀಸಿಗೆ ಹೋಗಿದ್ದೆ. ಈ ಸಭೆಯಲ್ಲಿ ಪ್ರಶ್ನೆಯನ್ನು ಕಳುಹಿಸುವ ರೀತಿ ಬದಲಾದಮೇಲೆ ಮತ್ತು ಪ್ರಶ್ನೆ ಕಳುಹಿಸಿ ಸಕಾಲದಲ್ಲಿ ಅದಕ್ಕೆ ಜವಾಬು ಬಾರದೆ ಹೋದುದರಿಂದ, ಪ್ರಶ್ನೆಯನ್ನು ಕಳುಹಿಸುವ ಅಭ್ಯಾಸವನ್ನೇ ಬಿಟ್ಟುಬಿಟ್ಟೆ. ತುಂಬ ಹಳಸಿದಮೇಲೆ ಪ್ರಶ್ನೆಗೆ ಉತ್ತರ ಬಂದರೆ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ವೈಯಕ್ತಿಕ ಭಾವನೆಯಿಂದ ಪ್ರಶ್ನೆಗಳನ್ನು ಕಳುಹಿಸುವುದನ್ನು ಬಿಟ್ಟೆ.

ನಾನು ಪ್ರಶ್ನೆಗಳನ್ನು ಕಳಿಸಿದ್ದು 1957ನೆಯ ಮೇ ತಿಂಗಳಿನಲ್ಲಿ. ಮೇ ತಿಂಗಳಿನಿಂದ ಈಚೆಗೆ ಕಳಿಸಿಯೇ ಇಲ್ಲ. 15 ದಿವಸದ ಹಿಂದೆ ಯಾವುದೋ ಒಂದು ಆಫೀಸಿಗೆ ಹೋಗಿದ್ದೆ. ಅಲ್ಲಿ ಒಂದು ಪ್ರಶ್ನೆಗೆ ಜವಾಬು ಕಳುಹಿಸುತ್ತ ಇದ್ದರು. ಅದರೊಳಗೆ ನಾನು ಅಂಥ ಅಭಿರುಚಿಯನ್ನು ವ್ಯಕ್ತಪಡಿಸಲಿಲ್ಲ. ಅದು ಯಾವ ಪ್ರಶ್ನೆ, ಅದಕ್ಕೆ ಏನು ಉತ್ತರ ಎಂದು ಕೇಳಲಿಲ್ಲ. ಏಕೆಂದರೆ ಆ ಪ್ರಶ್ನೆ 10 ತಿಂಗಳ ಹಿಂದೆ ಕಳಿಸಿದ್ದು. ಯಾವುದೋ ಒಂದು ನಾಲೆ ರೀಪೇರಿ ಮಾಡಿದರೇ ಇಲ್ಲವೇ ಎಂದು ಆಗ ಕೇಳಿದ್ದಕ್ಕೆ ಆಗಲೇ ಉತ್ತರ ಬಂದರೆ ಸರಿ ಹೋಗುತ್ತದೆಯೇ ವಿನಾ ಈಗ ಪರಿಸ್ಥಿತಿ ಬದಲಾಗಿರಬಹುದು. ನಿಧಾನವಾಗುವುದಕ್ಕೆ ಕಾರಣವೇನಾದರೂ ಇರಲಿ. ಈ ದೋಷ ನಿಮ್ಮ ಮೇಲೆ ಹೇಳುತ್ತೇನೆ ಎಂದು ತಿಳಿಯಬಾರದು. ಹೋದವರ್ಷ ಕೇಳಿದ ಪ್ರಶ್ನೆಗೆ ಈಗ ಜವಾಬು ಬಂದರೆ ಯಾರಿಗೆ ತಾನೆ ಅಭಿರುಚಿಯಿರುತ್ತದೆ? ಇವೊತ್ತು ನಾನು ಪ್ರಶ್ನೆ ಕೇಳಿದರೆ ನಾಳೆ ಪತ್ರಿಕೆಯಲ್ಲಿ ಬರುತ್ತದೆ. ಹಾಗಿರುವಾಗ ಈ ರೀತಿ ಜವಾಬು ಕೊಡುವುದು, it is a *post mortem* examination not even immediately of the body. ಸತ್ತವರ ಶವ ಹೊತ್ತು ಹಾಕಿದ್ದನ್ನು ಮೇಲೆ ಎತ್ತಿ ಪರೀಕ್ಷೆ ಮಾಡಿದ ಹಾಗಾಗುತ್ತದೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಅಧ್ಯಕ್ಷರಲ್ಲೂ ಮತ್ತು ಸರ್ಕಾರದವರಲ್ಲೂ ವಿನಂತಿ ಮಾಡುವುದೇನೆಂದರೆ, ಈ ಸಭೆಯಲ್ಲಿ ಏನಾದರೂ ಒಂದು ಪ್ರಶ್ನೆ ಹಾಕಿದರೆ ಅದಕ್ಕೆ ಕೂಡಲೇ ಜವಾಬು ಬಂದದ್ದೇ ಆದರೆ ಅದರಲ್ಲಿ ಅಭಿರುಚಿಯಿರುತ್ತದೆ. ಯಾವಾಗಲೂ ಒಂದು ಇಂಟರ್‌ಪೆಲ್ಲೇಷನ್ ಕಳುಹಿಸಿದರೆ ಅದನ್ನು ಯಾವ ಉದ್ದೇಶದಿಂದ ಕಳುಹಿಸಿದ್ದಾರೆ ಎನ್ನುವುದನ್ನು ಸರ್ಕಾರದವರು ಕೂಡಲೇ ಅರಿತು ಅದರಲ್ಲಿ ತಿದ್ದುಪಡಿ ಮಾಡುವುದು ಇದ್ದರೆ ಮಾಡಬೇಕಾಗುತ್ತದೆ. ಈ ವಿಷಯವನು ಮರೆತಂತೆ ಕಾಣುತ್ತದೆ. ಹೀಗೆ ಮಾಡುತ್ತಾ ಇಲ್ಲ. ಏನೋ ಒಂದು ಮೆಕ್ಯಾನಿಕಲ್ ಆಗಿ ನಾವು ಕಳುಹಿಸಿದ ಪ್ರಶ್ನೆಗಳನ್ನೂ ಅದಕ್ಕೆ ಸಂಬಂಧಪಟ್ಟ ಆಫೀಸಿಗೆ ಕಳುಹಿಸುವುದು ಅವರು ಅವರಿಗೆ ತೋರಿದ ಉತ್ತರ ಕಳುಹಿಸುವುದು, ಆಮೇಲೆ ಈ ಸಭೆಯಲ್ಲಿ ಕೇಳಿದರೆ ನೀವು 'ನಮಗೆ ಇನ್‌ಫರ್‌ಮೇಷನ್ ಕೊಟ್ಟಿರುವುದರ ಪ್ರಕಾರ' ಎಂದು ಹೇಳುವುದು ಏಕೆ? ಅವರು ಸರಿಯಾಗಿ ಸಾಕಾದಷ್ಟು ಇನ್‌ಫರ್ಮೇಷನ್ ಕಳುಹಿಸದಿದ್ದರೆ ನೀವು ಅವರನ್ನು ಕೇಳಬೇಕೇ ವಿನಾ 'ನನಗೆ ಕಳುಹಿರುವ ಸಮಾಚಾರದ ಪ್ರಕಾರ' ಎಂದು ಹೇಳುತ್ತೀರಿ. ಅದೇಕೆ? ಆದರಿಂದ ಈಗ ನಡೆಯುತ್ತಾ ಇರತಕ್ಕ ವ್ಯವಸ್ಥೆಯನು ಸ್ವಲ್ಪ ಸುಧಾರಿಸದಿದ್ದರೆ ಈ ಪ್ರಶ್ನೋತ್ತರ ಕಾಲ ಇದೆಯಲ್ಲಾ—ಇದು ಎಂಥ ಅಮೂಲ್ಯವಾದ ಕಾಲ,—ಇದು ಪೋಲಾದಂತೆ ಆಗುತ್ತದೆ ಎಂಬುದನು ತಮ್ಮ ಮೂಲಕ ಸಭೆಯಲ್ಲಿ ಅರಿಕೆ ಮಾಡುತ್ತೇನೆ.

ಶ್ರೀಮಾನ್ ಶಂಸುದ್ದೀನ್ ಅವರು ಈಗಾಗಲೇ ಒಂದು ವಿಚಾರ ಪ್ರಸ್ತಾಪ ಮಾಡಿದ್ದಾರೆ. ಎಷ್ಟೋ ದಿನ ಇಲ್ಲಿ ಚರ್ಚೆಯಾಗಿದೆ, ಅದೇನೆಂದರೆ ಈ ಪಾನ ನಿರೋಧದ ನೀತಿಯ ವಿಷಯ. ಈ ವಿಷಯದಲ್ಲಿ ಇಂಟರ್‌ಪೆಲ್ಲೇಷನ್‌ಗಳು ಒಂದಲ ಒಂದು ರೀತಿಯಲ್ಲಿ

(ಶ್ರೀ ಕೆ. ಪುಟ್ಟಸ್ವಾಮಿ)

ಬರುತ್ತಿವೆ. ಆಗ ಕೊಟ್ಟಂಥ ಉತ್ತರಗಳನ್ನೂ ಮತ್ತು ಪ್ರಶ್ನೆಗಳನ್ನೂ ಒಟ್ಟಿಗೆ ಸೇರಿಸಿ ಒಂದು ಪುಸ್ತಕ ಮಾಡಿದರೆ ಅದು ಒಂದು ಒಳ್ಳೆಯ interesting reading ಆಗುತ್ತದೆ. ಈ ಸರ್ಕಾರದ ನೀತಿ ಏನಿದೆ ಆ ವಿಚಾರ ಹೇಳುತ್ತೇನೆ. ಈ ಸರ್ಕಾರದಲ್ಲಿ ಮಂತ್ರಿಗಳ ಜವಾಬ್ದಾರಿ ಏನಿದೆ ಅದು ಜಂಟಿ ಜವಾಬ್ದಾರಿ ಆಗಿರತಕ್ಕದ್ದು ಸಂಬಂಧಪಟ್ಟಂಥ ಮಂತ್ರಿಗಳಿಗೆ ಜವಾಬ್ದಾರಿ ಇರುವುದು ಅಷ್ಟೇ ಅಲ್ಲ ಮಂತ್ರಿ ಮಂಡಲವೇ ಜವಾಬ್ದಾರಿ ಆದದ್ದು. ಆದ್ದರಿಂದ ಈ ವಿಚಾರವನ್ನು ಪರಿಶೀಲನೆ ಮಾಡಿಆದಷ್ಟು ಜಾಗ್ರತೆ ಇದಕ್ಕೆ ಒಂದು ಸರಿಯಾದಂಥ ನೀತಿಯನ್ನು ಅನುಸರಿಸತಕ್ಕದ್ದು ಅಗತ್ಯ ಎನ್ನುವುದನ್ನು ಎಲ್ಲರೂ ಕೂಡ ಒಪ್ಪುತ್ತಾರೆ. ಹಿಂದೆ ಈಗ ಮರಾಮತ್ತು ಶಾಖೆಯ ಮಂತ್ರಿಗಳಾಗಿರತಕ್ಕ ಶ್ರೀ ವೀರಣ್ಣಗೌಡರು 1954ನೆಯ ಸಾಲಿನಲ್ಲಿ ಒಂದು ಚರಿತ್ರಾರ್ಹವಾದ ಭಾಷಣ ಮಾಡಿದ್ದಾರೆ. ಆ ಭಾಷಣದಲ್ಲಿ ಒಂದು ವಿಚಾರ ಹೇಳಿದ್ದಾರೆ. ಅದನ್ನು ಸ್ವಲ್ಪ ಓದಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಅದು ಈ ರೀತಿ ಇದೆ:—

"ಕಷ್ಟ ಕಾಲದಲ್ಲಿ ಧೈರ್ಯ ಮಾಡಬೇಕೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ; ಮಾಡೋಣ".

ಶ್ರೀ ವೀರಣ್ಣಗೌಡರಿಗೆ ಧೈರ್ಯ ಮಾಡಲು ಮಾರ್ಗ ಹೇಳಿ ಕೊಡಬೇಕಾಗಿಲ್ಲ.

"ಈದಿನ ಪಾನ ನಿರೋಧವನ್ನು ಜಾರಿ ಮಾಡುತ್ತಿರುವಾಗ ಬೆಂಗಳೂರಿನಲ್ಲಿ ಕುಡಿತ ಇದೆ. ಇಲ್ಲಿ ಒಬ್ಬ ದೊಡ್ಡ ಮನುಷ್ಯ ಬೇಕಾದ ಹಾಗೆ ಕುಡಿಯಬಹುದು. ಅದೇ ಕೋಲಾರದಲ್ಲಿ ಯಾರಾದರೂ ಕುಡಿದರೆ ಜೈಲಿಗೆ ಹಾಕುತ್ತಾರೆ. ಇದನ್ನು ಜನ ಸಹಿಸುತ್ತಾರೆಯೇ? ಈಗ ಸರ್ಕಾರಕ್ಕೆ ಉತ್ಪನ್ನವಿಲ್ಲವೆಂದು ಹೇಳುವಾಗ ಅವಶ್ಯಕತೆಯಿಲ್ಲದ ಬಾಬುಗಳನ್ನೆಲ್ಲಾ ಏಕೆ ಖೋತಾ ಮಾಡಬಾರದು? ಪಾನನಿರೋಧವನ್ನು ಪೂರ್ಣವಾಗಿ ಜಾರಿಗೆ ತರದ್ದಿದರೆ ಹೇಗೆ ಎಂದು ನಿಧಾನವಾಗಿ ಜಾರಿಗೆ ತರುತ್ತಾ ಬಟ್ಜೆಟ್ ಖೋತಾ ಸರಿತೂಗಿಸಿಕೊಳ್ಳುತ್ತಿದ್ದರೆ ಸಾಮಾನ್ಯ ಪ್ರಜೆಗಳು ಕೇಳುವ ಪ್ರಶ್ನೆಗಳಿಗೆ ನಾವು ಜವಾಬು ಹೇಳುವುದು ಹೇಗೆ? ಪಾನನಿರೋಧವನ್ನು ಪೂರ್ಣವಾಗಿ ಜಾರಿಗೆ ತರಬೇಕು ಇಲ್ಲದೇ ಇದ್ದರೆ ವಜಾ ಮಾಡಬೇಕು. ಧೈರ್ಯವಾಗಿ ನಿರ್ದಿಷ್ಟವಾದ ನೀತಿಯನ್ನನುಸರಿಸಿದರೆ ಜನ ಮೆಚ್ಚುತ್ತಾರೆ."

ಈ ಅಭಿಪ್ರಾಯವನ್ನು ನಾನೂ ಮೆಚ್ಚುತ್ತೇನೆ.

"ಅದಿಲ್ಲದೆ ಸುಮ್ಮನೆ ಮಾತಿನಲ್ಲಿ ಹೇಳಿ ಕಾರ್ಯತಃ ನಡೆಸದಿದ್ದರೆ ಪ್ರಯೋಜನವೇನು? ಆದ್ದರಿಂದ ಸರ್ಕಾರದವರು ಅನುಸರಿಸುತ್ತಿರುವ ನೀತಿಯು ಅಷ್ಟು ಸ್ವಾಗತಾರ್ಹವಾದುದಲ್ಲ. ಪಾನನಿರೋಧವನ್ನು ಪೂರ್ಣವಾಗಿ ಜಾರಿಗೆ ತಂದು ಈಗ ಮಾಡಿರುವ ಮೂರು ಕೋಟಿ ರೂಪಾಯಿಗಳ ಸಾಲದ ಜೊತೆಗೆ ಇನ್ನೂ ಒಂದೂವರೆ ಕೋಟಿ ರೂಪಾಯಿಗಳ ಸಾಲ ಎತ್ತಿದರೆ ದೇಶಕ್ಕೆ ಹಿತವಾದರೂ ಆದೀತೇ? ಒಬ್ಬರಿಗೆ ಒಂದು ನೀತಿ ಇನೊಬ್ಬರಿಗೆ ಇನ್ನೊಂದು ನೀತಿಯನ್ನನುಸರಿಸಬಾರದು. ಕದ್ದು ಕುಡಿಯುವುದರಿಂದ ಪ್ರಜೆಗಳಿಗೆ ಅನಾರೋಗ್ಯ, ಕೆಡಕು. ಪಾನನಿರೋಧ ಮಾಡುವಾಗ ಅದರಲ್ಲಿ ಕಳ್ಳತನ ನಡೆಯದಂತೆ ತಡೆಯುವುದಕ್ಕೆ ಶಕ್ತಿಯಿಲ್ಲದಿದ್ದರೆ ಪ್ರಯೋಜನ ವೇನು? ಕಾಂಗ್ರೆಸ್‌ತತ್ವಕ್ಕನುಸರಿಸಿ ಪಾನ ನಿರೋಧ ಮಾಡಿದ್ದೇವೆ ಎಂದು ಹೇಳಬಹುದು. ನಾನೂ ಕಾಂಗ್ರೆಸ್ ಪಕ್ಷದವನು. ಅದನ್ನು ಒಪ್ಪಿದ್ದೇನೆ. ಕಾಂಗ್ರೆಸ್ ಪಕ್ಷದವರಾದ ನಾವು ಇದನ್ನು ಜಾರಿಗೆ ತರದಿದ್ದರೆ ಇದರ ಪರಿಣಾಮ ಏನಾಗುತ್ತದೆ ಎಂಬುದನ್ನು ನೋಡಬೇಕು. ಪೂರ್ಣವಾಗಿ ಜಾರಿಗೆ ತಂದರೆ 170 ಲಕ್ಷ ರೂಪಾಯಿಗಳ ನಷ್ಟವಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಈಗಿನ ನೀತಿಯಿಂದ ಸರ್ಕಾರದ ವಿಷಯದಲ್ಲಿ ಜನರಲ್ಲಿ ಒಂದು ತರಹ ಕ್ರೋಧವುಂಟಾಗಿದೆ. ಜನರಿಗೆ ಸರ್ಕಾರದಲ್ಲಿ ನಂಬಿಕೆ ಕಡಮೆಯಾಗುತ್ತಿದೆ. ಅದು ದೇಶಕ್ಕೆ ಒಳ್ಳೆಯದಲ್ಲ. ಆದ್ದರಿಂದ ಸರ್ಕಾರದವರು ತಮ್ಮ ನೀತಿಯನ್ನು ಸ್ವಲ್ಪ ನಿಧಾನವಾಗಿ ಯೋಚನೆಮಾಡಿ ಮಾರ್ಪಾಡು ಮಾಡಿಕೊಂಡು ಕೆಲಸ ಮಾಡಬೇಕು,"

ಎಂದು ಹೇಳಿದ್ದಾರೆ. ಶ್ರೀ ವೀರಣ್ಣಗೌಡರಲ್ಲಿ ಒಂದು ವೈಶಿಷ್ಟ್ಯವಿದೆ. ಅವರು ಯಾವುದನ್ನು ಹೇಳುತ್ತಾರೆಯೋ ಅದನ್ನು ಸಂಪೂರ್ಣವಾಗಿ ನಂಬುತ್ತಾರೆ. ನಂಬಿಕೆ ಇಲ್ಲದ ವಿಚಾರ ಹೇಳುವುದೇ ಇಲ್ಲ. ಈ ವಿಚಾರದಲ್ಲೂ ಕೂಡ ಅವರು ನಂಬಿಕೆ ಇಟ್ಟುಕೊಂಡಿದ್ದಾರೆ ಎಂದು ನನ್ನ ಭಾವನೆ. ಈಚೆಗೆ ಅವರಲ್ಲೂ ಕೂಡ ಸ್ವಲ್ಪ ಬದಲಾವಣೆ ಆಗಿದೆ. ಅಂತಹ ನೀತಿಯನ್ನಿಟ್ಟುಕೊಂಡವರು ಮಂತ್ರಿ ಮಂಡಲದಲ್ಲಿರುವಾಗ ಆ ನೀತಿ ಕಾರ್ಯ ರೂಪಕ್ಕೆ ಬರುತ್ತದೆ ಎಂದು ನಾನು ಭಾವನೆ ಮಾಡಿದ್ದೆ. ಅಂತಹ ಧೈರ್ಯವಾಗಿ ವಾದಿಸಿದ ನೀತಿಯನ್ನು ಇದುವರೆಗೂ ಕಾರ್ಯರೂಪಕ್ಕೆ ತರದೇಯಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಆ ನೀತಿಯನ್ನು ಅವರ ಸಹೋದ್ಯೋಗಿಗಳು ಒಪ್ಪದೆ ಇರಬಹುದು. ಯಾವ ನೀತಿಯನ್ನು ಅವರು ನಂಬಿದ್ದಾರೆಯೋ ಅದಕ್ಕೆ ಅವರ ಸಹೋದ್ಯೋಗಿಗಳು ಒಪ್ಪದೆ, ಪುರಸ್ಕಾರ ದೊರೆಯದಿದ್ದರೆ ಅವರು ಏನು ಮಾಡಬೇಕೆಂಬುದನ್ನು ಹೊಸದಾಗಿ ನಾನು ಹೇಳಬೇಕಾಗಿಲ್ಲ. ಆದ್ದರಿಂದ ನಾನು ಅವರಲ್ಲಿ ವಿನಂತಿ ಮಾಡಿ ಕೊಳ್ಳುವುದು ಏನೆಂದರೆ, ಅವರು ಕಾಲು ಶತಮಾನಕ್ಕಿಂತಲೂ ಹೆಚ್ಚು ಕಾಲ ನಾಯಕರಾಗಿದ್ದವರು. ನಾನು ಚಿಕ್ಕಂದಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಅವರು ರಾಜಕೀಯದಲ್ಲಿ ಒಬ್ಬ ಹಿರಿಯ ನಾಯಕರಾಗಿದ್ದರು. ಅವರು ಯಾವುದನ್ನು ಹೇಳಿದ್ದಾರೋ ಅದನ್ನು ಉದ್ದಕ್ಕೂ ನಡೆಸಿಕೊಂಡು ಬಂದಿರತಕ್ಕವರು. ಅದರಂತೆ ನಡೆದಿರತಕ್ಕವರು. ಅಂತಹವರು ಮಂತ್ರಿಮಂಡಲದಲ್ಲಿರುವಾಗ ಅವರು ಹೇಳಿದಂಥ ನೀತಿಯನ್ನು ಜಾರಿಗೆ ತರಲಿಲ್ಲವಲ್ಲ ಎಂದು ನನಗೆ ತುಂಬ ವ್ಯಸನವಾಯಿತು.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖೆಯ ಮಂತ್ರಿಗಳು).—ಶ್ರೀಮಾನ್ ಪುಟ್ಟಸ್ವಾಮಿಯವರು ಒಂದು ವಿಷಯವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಇದು ಮಂತ್ರಿಮಂಡಲದ ನೀತಿಯಲ್ಲ. ರೂಲಿಂಗ್ ಪಾರ್ಟಿಯನೀತಿ, of which he is also a member. ಆದ್ದರಿಂದ ರೂಲಿಂಗ್ ಪಾರ್ಟಿ ಯಾವರೀತಿ ಡೈರೆಕ್ಷನ್ ಕೊಟ್ಟರೆ ಆ ರೀತಿ ಮಾಡುತ್ತೇವೆ. ಶ್ರೀ ವೀರಣ್ಣಗೌಡರು ಅವರ ವೈಯಕ್ತಿಕ ಅಭಿಪ್ರಾಯ ಹೇಳಿರಬಹುದು. ಪುಟ್ಟಸ್ವಾಮಿಯವರು ಅವರ ವೈಯಕ್ತಿಕ ಅಭಿಪ್ರಾಯವನ್ನು ಇವೊತ್ತು ಹೇಳುತ್ತಾ ಇರಬಹುದು. ಹೀಗೆ ಒಬ್ಬೊಬ್ಬ ಸದಸ್ಯರ ಅಭಿಪ್ರಾಯ ಸರ್ಕಾರದ ನೀತಿ ಆಗುವುದಿಲ್ಲ. ರೂಲಿಂಗ್ ಪಾರ್ಟಿಯಲ್ಲಿ ಯಾವರೀತಿ

ಅಭಿಪ್ರಾಯ ಬಂದು ಒಂದು ನೀತಿಯನ್ನು ಹಾಕುತ್ತಾರೋ ಅದರಂತೆ ಮಾಡುತ್ತಾ ಬರುತ್ತೇವೆ.

ಶ್ರೀ ಬಿ. ಎಚ್. ಬೋರಣ್ಣಗೌಡ (ಬೇಲೂರು).—ರೂಲಿಂಗ್ ಪಾರ್ಟಿ ಜವಾಬ್ದಾರಿ ಇದೆ ಎಂದು ಮಾನ್ಯ ಅರ್ಥಿಕ ಸಚಿವರು ಹೇಳಿದರು. ರೂಲಿಂಗ್ ಪಾರ್ಟಿ ತನ್ನ ನಿರ್ದಿಷ್ಟವಾದ ಅಭಿಪ್ರಾಯವನ್ನು ಮಂತ್ರಿಗಳಿಗೆ ತಿಳಿಸಿಲ್ಲವೇ ಸ್ವಾಮಿ?

Sri J. B. MALLARADHYA.—As regards the manner in which they are giving effect to the policy of implementing prohibition, they say it is a dismal failure. If you cannot give effect to it, scrap it or give us a chance to do. That is what is said.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಪ್ರಜಾ ಪ್ರಭುತ್ವದಲ್ಲಿ Directive Principle ಪ್ರಕಾರ ನಡೆಯತಕ್ಕಂಥ ವಿಧಾನ ಏನು ಇದೆ ಎಂದರೆ, organisational ವಿಚಾರಗಳನ್ನು administrative matters ಚರ್ಚೆಮಾಡುವಾಗ ಹೇಳಬಾರದು. ಪಾರ್ಟಿತತ್ವ ಏನು ಎಂಬುದನ್ನು ಹೇಳುತ್ತಾ ಹೋಗಿ ಈ ಅಸೆಂಬ್ಲಿಯ ಕಾಲವನ್ನು ವ್ಯರ್ಥವಾಗಿ ಕಳೆಯುವುದು ಸರಿಯಲ್ಲ ಎಂದು ನಾನು ಹೇಳುತ್ತೇನೆ. Organisational matters are different from administrative matters.

Sri K. PUTTASWAMY.—I am sorry for the way in which remarks are being offered.

ಶ್ರೀ ಕೆ. ಕೆಂಚಪ್ಪ.—Organisational matters ಎಂದರೆ ಕಾಂಗ್ರೆಸ್ ಪಾಲಿಸಿ ಹೀಗೆ ಇದೆ, ಕಾಂಗ್ರೆಸ್ ತತ್ವ ಹಾಗೆ ಇದೆ, ಪಾರ್ಟಿಯಲ್ಲಿ ಹೀಗೆ ತೀರ್ಮಾನ ಮಾಡಿದ್ದಾರೆ ಎಂಬ ವಿಚಾರವನ್ನು ಹೇಳುವುದು ಅಲ್ಲ.

ಅಧ್ಯಕ್ಷರು.—ಈ ರೀತಿಯಾಗಿ ಅದು ಸಂವಿಧಾನ ದಲ್ಲಿಯೇ ಇದೆ.

ಶ್ರೀ ಕೆ. ಕೆಂಚಪ್ಪ.—Constitution ವಿಚಾರ ಅಲ್ಲ ಸ್ವಾಮಿ.

Mr. SPEAKER.—It is a directive in the Constitution.

ಶ್ರೀ ಕೆ. ಕೆಂಚಪ್ಪ.—Constitution ನಲ್ಲಿ ಇರ ತಕ್ಕಂಥ directive ವಿಚಾರ ನಾನು ಹೇಳಲಿಲ್ಲ. ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಿಯವರು "ನಮ್ಮ ಪಾರ್ಟಿಯಲ್ಲಿ ಹೀಗೆ ಮಾಡಿದ್ದೇವೆ, ಪಾರ್ಟಿ decision ಹೀಗೆ ಇದೆ ಎಂದು ಹೇಳುತ್ತೇನೆ" ಎಂದು ಮುಂತಾಗಿ organisational matters ಈ ಸಭೆ ಯಲ್ಲಿ ಹೇಳುವುದು ಸರಿಯಲ್ಲ.

ಅಧ್ಯಕ್ಷರು.—ಅವರು ತಮ್ಮ ಪಾರ್ಟಿ ಪಾಲಿಸಿ ಹಾಗೆ ಇದೆ ಎಂದು ಹೇಳಿದರೆ, ಮಾನ್ಯ ಕೆಂಚಪ್ಪನವರು ತಮ್ಮ ಪಾರ್ಟಿ ಪಾಲಿಸಿ ಹೇಗೆ ಇದೆ ಎಂದು ಹೇಳಿಬಿಟ್ಟರೆ ಇಬ್ಬ ರದೂ ಸರಿ ಹೋಯಿತು.

ಶ್ರೀ ಕೆ. ಕೆಂಚಪ್ಪ.—ಪಾರ್ಟಿ ವಿಚಾರ ಏಕೆ ಹೇಳ ಬೇಕು? ಪಾರ್ಟಿಯಲ್ಲಿ ಹೀಗೆ ತೀರ್ಮಾನ ಮಾಡಿದ್ದಾರೆ, ಹಾಗೆ ತೀರ್ಮಾನ ಮಾಡಿದ್ದಾರೆ ಎಂದು purely organisational matters ಇಲ್ಲಿ ಏಕೆ ಹೇಳ ಬೇಕು?

ಅಧ್ಯಕ್ಷರು.—ಪಾರ್ಟಿಯಲ್ಲಿ ತೀರ್ಮಾನ ಮಾಡಿದ್ದು ಏನೇ ಇರಲಿ, ಅದಕ್ಕೆ ಈ ಸಭೆ ಕಟ್ಟು ಬೀಳುವುದಿಲ್ಲ. ಈ ಸಭೆಯಲ್ಲಿ ಮಾನ್ಯ ಸದಸ್ಯರಾದ ನೀವೆಲ್ಲಾ ಏನು ಮಾಡುತ್ತೀರೋ ಅದಕ್ಕೆ ಮಾತ್ರ ಬದ್ಧವಾಗಬೇಕಾಗು ತ್ತದೆ.

Sri T. MARIAPPA.—I am afraid Sri Kenchappa has not understood the scope . . . .

ಶ್ರೀ ಕೆ. ಕೆಂಚಪ್ಪ.—ನನಗೂ ಭಾಷೆ ಬರುತ್ತದೆ. ಅವರು ಹೇಳಿದ್ದನ್ನು ನಾನು ತಿಳಿದುಕೊಳ್ಳಬಹುದು. ಆದರೆ ಅವರು ಹೇಳಿದ್ದು ನನಗೆ ಅರ್ಥವಾಗಲಿಲ್ಲವೇ? ಹಾಗಾದರೆ ಅವರು ಉಪಯೋಗಿಸಿದ ವಾಕ್ಯದಲ್ಲಿ ಯಾವ ಪದ ನನಗೆ ಅರ್ಥವಾಗಲಿಲ್ಲ ಎಂಬುದನ್ನು ಹೇಳಲಿ.

ಅಧ್ಯಕ್ಷರು.—ಪಾರ್ಟಿ ಪಾಲಿಸಿಯೇ ತಮ್ಮ ಪಾಲಿಸಿ ಎಂದು ಯಾರಾದರೂ ಹೇಳಬಹುದು. ಪಾಲಿಸಿ ವಿಚಾರ ಹೇಳಲು ಬರುತ್ತದೆ. ತಮ್ಮ ನೀತಿ ಏನು ಎಂಬುದನ್ನು ಹೇಳಬಹುದು. ಆದರೆ ಈ ಸಭೆಯಲ್ಲಿ ಏನು ತೀರ್ಮಾನವಾಗುತ್ತದೆಯೋ ಅಷ್ಟಕ್ಕೆ ಮಾತ್ರ ನಾವು ಬದ್ಧರು. ನಿಮಗೂ ಮಾತನಾಡಲು ಬರುತ್ತದೆ. ಆದ್ದರಿಂದ ಅವರು ಹೇಳಿದ ಹಾಗೆ ನೀವೂ ಸಹ ಹೇಳ ಬಹುದು.

ಶ್ರೀ ಕೆ. ಕೆಂಚಪ್ಪ.—ತತ್ವವನ್ನು ಅವರು ಖಂಡಿತ ವಾಗಿ ಹೇಳಲಿಲ್ಲ. ಈಗ ಸಭೆಯ ಮುಂದೆ ಚರ್ಚೆಗೆ ಬಂದಿರುವುದು ಪಾನ ನಿರೋಧದ ವಿಚಾರ. ಪಾನ ನಿರೋಧ ಇಡಬೇಕೋ ತೆಗೆದುಬಿಡಬೇಕೋ ಎಂಬುದು ಪಾಲಿಸಿ ವಿಚಾರ. ಆದರೆ ನಮ್ಮ ಪಾರ್ಟಿಯಲ್ಲಿ ಹಾಗೆ ತೀರ್ಮಾನ ಮಾಡಿದ್ದಾರೆ ಹೀಗೆ ಮಾಡಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ.

ಡಾ॥ ಟಿ. ಪಾರ್ಥಸಾರಥಿ.—ಅವರು ನಮ್ಮ ಎಂದರೆ ವಿರೋಧ ಪಕ್ಷದ ಪರವಾಗಿ ಮಾತನಾಡುತ್ತಿ ದ್ದಾರೆ. ಅವರು ಹಾಗೆ ಮಾತನಾಡಲಿ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಈ ವಿಚಾರದಲ್ಲಿ ಅಧ್ಯಕ್ಷರ ಮಾರ್ಗದರ್ಶನ ನಮಗೆ ಬೇಕಾಗಿದೆ. ನಾನು ಮಾತನಾಡುತ್ತಾ ಇರುವಾಗ ವಿರೋಧ ಪಕ್ಷದ ನಾಯಕರಾದ ಮಾನ್ಯ ಶ್ರೀ ಕೆಂಚಪ್ಪನವರಿಗೆ ಈ ಸಭೆಯ ಕಾಲಹರಣವಾಯಿತು ಎಂಬ ಮನೋ ಭಾವನೆ ಬಂದಿತೋ ಏನೋ? ಅದಕ್ಕಾಗಿ ನಾನು ಸ್ವಲ್ಪ ವಿಷಾದಪಡುತ್ತೇನೆ. ಶ್ರೀಮಾನ್ ಕೆಂಚಪ್ಪ ನವರ ವಿಚಾರದಲ್ಲಿ ಒಂದು ವಿಷಯ ನಾನು ಹೇಳ ಬೇಕಾಗಿದೆ. ಅವರು ವಿರೋಧ ಪಕ್ಷದ ನಾಯಕರಾಗಿ ಒಂದು ವರ್ಷದಿಂದ ಈ ಸಭೆಯಲ್ಲಿ ಬಹಳ ಉನ್ನತ ಮಟ್ಟದಲ್ಲಿ ತಮ್ಮ ಕಾರ್ಯಭಾರವನ್ನು ನಿರ್ವ ಹಿಸಿದ್ದಾರೆ. ಆದರೆ ವಿರೋಧಪಕ್ಷದ ನಾಯಕರಿಗೆ touch me not sickness ಹೆಚ್ಚಾಗಿ ಬಂದಿದೆ. ಈ ಸಂದರ್ಭದಲ್ಲಿ ಅವರಿಗೆ ಏನೂ ಅರ್ಥವಾಗಲಿಲ್ಲ ಎಂದು ಮಾತನಾಡಿ ಬಿಟ್ಟರು. ಈ ಸಭೆಯಲ್ಲಿ ಕೂಡಲು ಆಗುವದಿಲ್ಲ ಎಂದು ಹೇಳಿ ಅವರಿಗೆ ವ್ಯಸನ ವಾಗುತ್ತದೆ ಎಂದು ಒಂದು ಆಕ್ಷೇಪಣೆ ಮಾಡಿದ್ದಾರೆ. ಅವರಿಗೆ ಅರ್ಥವಾಗಲಿಲ್ಲ ಎಂದು ಹೇಳಿದ್ದು ನನಗೆ ಅರ್ಥವಾಗಲಿಲ್ಲ ಎಂದು ನಾನು ಹೇಳುತ್ತೇನೆ. ಅರ್ಥ ಮಂತ್ರಿಯವರಾದ ಶ್ರೀಮಾನ್ ಮರಿಯಪ್ಪನವರು ಒಂದು ವಿಚಾರ ಹೇಳಿದರು. ಪಕ್ಷದ ನೀತಿಯನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಆದರೆ ಈ ಸಭೆಯಲ್ಲಿ ಆ ನೀತಿಯನ್ನು ಅನುಷ್ಠಾನಕ್ಕೆ ತರುವಾಗ ಮಾತ್ರ ಗೊಂದಲವಾಗುತ್ತಾ ಇದೆ. ಅರ್ಧನಾರೀಶ್ವರ

(ಶ್ರೀ ಕೆ. ಪುಟ್ಟಸ್ವಾಮಿ)

ಎಂದರೆ ಹೆಣ್ಣೂ ಅಲ್ಲ ಗಂಡೂ ಅಲ್ಲ ಎಂದಹಾಗೆ ಸರಕಾರದ ನೀತಿಯಾಗಿದೆ ಎಂದು ಒಂದು ಉದಾಹರಣೆಯನ್ನು ಕೊಟ್ಟು ಶ್ರೀಮಾನ್ ಮಲ್ಲಾರಾಧ್ಯರವರು ತಮ್ಮ ಭಾಷಣದಲ್ಲಿ ಹೇಳಿದರು. ನಾನು ಹೇಳುವುದು ಏನೆಂದರೆ ಈ ನೀತಿಯನ್ನು ಅನುಷ್ಠಾನಕ್ಕೆ ತರಲು ಧೈರ್ಯ ಮಾಡೋಣ. ಒಂದುವೇಳೆ ಇದು ಕಷ್ಟಸಾಧ್ಯವಾಗಿದ್ದರೆ ಅದನ್ನು ಸರಿಯಾಗಿ ಮಾಡುವುದಕ್ಕೆ ಸುಧಾರಿಸುವುದಕ್ಕೆ ಜನರಿಗೆ ಮನದಟ್ಟಾಗುವ ಹಾಗೆ ತಿಳಿಸಿ ಹೇಳೋಣ. ಇದು ಖಚಿತವಾದ ನೀತಿ ಎಂದು ಜನರು ಮನಗಾಣಲು ನಾವು ಧೈರ್ಯದಿಂದ ಹೇಳಬೇಕಾಗುತ್ತದೆ. ಆದರೆ ನಾವು ಆ ಮಟ್ಟಕ್ಕೂ ಬಂದಿಲ್ಲ. ಧೈರ್ಯದಿಂದ ಆ ನೀತಿಯನ್ನು ಅನುಸರಿಸಿ ಜಾರಿಗೆ ತರಬೇಕು. ಆದರೆ ಇಷ್ಟು ದಿನ ಹೇಳುತ್ತಿರುವುದು 'Hasten slowly' ಎಂದು. What a beautiful phrase! 1952 ಮುಂಚೆ ಅಥವಾ ಆಮೇಲೆ ಇರಬಹುದು, ಶ್ರೀಮಾನ್ ಬೋರಣ್ಣಗೌಡರ ಆಗ್ರಹಕ್ಕೆ, ಅವರ ಉಪಟಳವನ್ನು ತಡೆಯಲಾರದೆ ಹಾಸನ ಜಿಲ್ಲೆಯಲ್ಲಿ ಮೊದಲು ಪಾನ ನಿರೋಧವನ್ನು ಜಾರಿಗೆ ತಂದರು. ಅಲ್ಲಿಂದ ಮುಂದಕ್ಕೆ ಒಂದು ಹೆಜ್ಜೆಯಷ್ಟೂ ಮುಂದಕ್ಕೆ ಹೋಗಿಲ್ಲ. ಅವರ ಮನೋಭಾವ ದಂಗೆಖೋರ ಮನೋಭಾವ ಆಗಿದೆ. ಅವರು ಒಂದುಸಾರಿ ರೇಗಿಬಿಟ್ಟರೆ ಆ ಕೆಲಸವಾಗಲೇ ಬೇಕು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ದಂಗೆಖೋರ ಎಂಬ ಪದ ಪಾರ್ಲಿಮೆಂಟರಿಯೋ ಅಥವಾ ಅನ್‌ಪಾರ್ಲಿಮೆಂಟರಿ ಪದವೋ ಅಧ್ಯಕ್ಷರು ತಿಳಿಸಬೇಕು. ಈ ಪದವನ್ನು ಉಪಯೋಗಿಸಬಹುದೋ ಎಂದು ಕೇಳುತ್ತೇನೆ.

Sri K. PUTTASWAMY.—I am a rebel myself. I only walk in the footsteps of Sri Boranna Gowda.

ಅಧ್ಯಕ್ಷರು.—"A person who revolts" ಎಂದು ಆಗುತ್ತದೆ. It is parliamentary.

ಶ್ರೀ ಕೆ. ಪುಟ್ಟಸ್ವಾಮಿ.—ನನಗೆ ಜ್ಞಾಪಕವಿದ್ದ ಹಾಗೆ 1952 ಕ್ಕಿಂತ ಮುಂಚೆಯಿಂದ ಸರಕಾರ ಈ ನೀತಿಯನ್ನು ಇಟ್ಟು ಕೊಂಡಿದ್ದಾರೆ. ಈಗಾಗಲೇ ಒಂದು ಸಾರ್ವತ್ರಿಕ ಚುನಾವಣೆ ನಡೆದುಹೋಗಿ ಮತ್ತೊಂದು ಸಾರ್ವತ್ರಿಕ ಚುನಾವಣೆಯಾಗಿ ಒಂದು ವರ್ಷಕಾಲವಾದರೂ ಕೂಡ hasten slowly ಎಂದು ಹೇಳುತ್ತಲೇ ಇದ್ದಾರೆ. ನಾನು ತಮ್ಮ ಮೂಲಕ ಮಂತ್ರಿಗಳನ್ನು ಪ್ರಶ್ನೆ ಮಾಡುವುದು ಈ phrase ನಿಮಗೆ ಯಾರು ಹೇಳಿಕೊಟ್ಟರು ಎಂದು.

ಅಧ್ಯಕ್ಷರು.—ಅದನ್ನು ಬ್ರಿಟಿಷರು ಹೋಗುವ ಮುಂದೆ ಹೇಳಿಕೊಟ್ಟಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಬ್ರಿಟಿಷರು ನಿಮಗೆ ಕಲಿಸಿರುವುದನ್ನು ಆಚರಣೆಗೆ ತರುವಾಗ ಒಳ್ಳೆಯದನ್ನೆಲ್ಲಾ ಇಟ್ಟುಕೊಳ್ಳಿ. ಜನರ ಮೇಲೆ ಸಮ್ಮೋಹನಜಾಲ ಬೀಸುವುದನ್ನು ಬಳಕೆಗೆ ತರಬೇಡಿ. ತಾವು ನಿಧಾನವಾಗಿ ಹೆಜ್ಜೆ ಇಡುತ್ತಿದ್ದೀರಿ. ಇದು ಅಲ್ಲಿಗೇ ನಿಂತಿದೆ. ಬಹುಶಃ ಈ ವಿಚಾರದಲ್ಲಿ ನಿಮಗೆ ಧೈರ್ಯವಾಗಿ ಆಲೋಚನೆ ಮಾಡುವ ಶಕ್ತಿ ಇದೆಯೋ ಇಲ್ಲವೋ ಎಂಬ ಸಂದೇಹವಿದೆ. ಎರಡುಕೋಟಿ ಎಂಭತ್ತು ಲಕ್ಷ ರೂಪಾಯಿ ನಷ್ಟವಾಗಿದೆ, ಎಲ್ಲಿಂದ ತರುವುದು ಎಂಬ ಭೂತ ನಿಮ್ಮ ಮುಂದಿದ್ದರೆ ಧೈರ್ಯವಾಗಿ ಅನುಷ್ಠಾನಕ್ಕೆ ತರುವುದಕ್ಕೆ ಶಕ್ತಿಯಿರುತ್ತದೆಯೇ? ನಿಮ್ಮ ನೀತಿಯನ್ನು ನಿರೂಪಿಸುವಾಗ, ಸಮಾಜವನ್ನು ಸುಧಾರಿಸುವಾಗ, ಹೊಸ ಸಮಾಜವನ್ನು ಕಟ್ಟುವ ಧೈರ್ಯಸ್ಥೈರ್ಯಗಳಿಲ್ಲದಿದ್ದರೆ ಸಾಧ್ಯವಿಲ್ಲ. ಇದಕ್ಕೆ ಧೈರ್ಯ ಕಾಂಗ್ರೆಸ್‌ನವರಿಗಲ್ಲದೆ ಇನ್ನಾರಿಗೂ ಸದ್ಯದಲ್ಲಿಲ್ಲ. ಒಂದು ನೀತಿಯನ್ನು ರೂಪಿಸುವಾಗ, ತಮ್ಮನ್ನು ಒಂದು ಪವಿತ್ರಸ್ಥಾನದಲ್ಲಿ ದೇಶ ಕೂಡಿಸಿರುವಾಗ ತಾವು ಯಾವ ಭೂತಕ್ಕೂ ಕೂಡ ಹೆದರಬಾರದು. ಹಣ ಬರುತ್ತದೆ. ಎಲ್ಲೂ ಹೋಗುವುದಿಲ್ಲ. ಮನಸ್ಸಿದ್ದರೆ ಮಾರ್ಗವಿದೆ; ಕೋಟಿಗಟ್ಟಲೆ ಹಣ ತರಬಹುದು. ದೇಶದಲ್ಲಿ ಅತುಳವಾದ ಜನ ಬಾಹುಳ್ಯವಿದೆ. ಜನಶಕ್ತಿಯಿದೆ. ಆ ಶಕ್ತಿಯನ್ನು ಕ್ರೋಡೀಕರಿಸಿ ದೇಶದ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನೂ ಕೈಕೊಳ್ಳಲು ಧೈರ್ಯ ಮಾಡಿ ಸರಿಯಾದ ಒಂದು ನೀತಿಯನ್ನು ದೇಶದ ಮುಂದೆ ಇಡುವುದಾದರೆ ನಿಮಗೆ ಬೇಕಾದಷ್ಟು ಬೆಂಬಲ ಸಿಕ್ಕುತ್ತದೆ. ಈಗಾಗಲೇ ವಿರೋಧ ಪಕ್ಷದ ಸದಸ್ಯರು 'ನಾವು ಕೂಡ ಈ ನೀತಿಯನ್ನು ಒಪ್ಪಿಕೊಂಡಿದ್ದೇವೆ, ಇದಕ್ಕೆ ವಿರೋಧವಿಲ್ಲ' ಎಂದು ಹೇಳಿದರು. ಹಾಗಿರುವಾಗ ಮತ್ತೇನು ಕಷ್ಟ? ದೇಶಕ್ಕೆ ದೇಶವೇ ಒಪ್ಪಿರುವಾಗ ಈ ನೀತಿಯ ಪ್ರಕಾರ ನಡೆಯುವುದಕ್ಕೆ ಕಷ್ಟವೇನು? 280 ಲಕ್ಷ ಇಲ್ಲದಿದ್ದರೆ ತೆರಿಗೆ ಹಾಕಬಹುದು. ಯಾವುದೋ ರೂಪದಲ್ಲಿ ತರಬಹುದು. ಸೇಲ್ಸ್ ಟ್ಯಾಕ್ಸ್‌ನಿಂದ ಆರುಕೋಟಿ ರೂಪಾಯಿ ನಿಮಗೆ ಬರುತ್ತದೆ. ಒಂದು ಸಣ್ಣ ಗುಡಿಸಿಲನಲ್ಲಿರುವ ಹೆಂಚಿನ ಮನೆ ಬೇಕೆನ್ನಿಸುತ್ತದೆ. ಅದಾದಾಗ ಬಂಗಲೆ ಅವಶ್ಯಕತೆ, ಟೆರೇಸ್ಡ್ ಹೌಸ್ ಆವಶ್ಯಕತೆ ಕಂಡುಬರುತ್ತದೆ. ಆಮೇಲೆ ಶ್ರೀಮಾನ್ ಮಲ್ಲಾರಾಧ್ಯರು ಕಟ್ಟಿರುವಂಥ ವೈಭವಪೂರ್ಣವಾದ ಮನೆ ಬೇಕೆಂದು ಹೇಳುತ್ತಾರೆ. ಶ್ರೀಮಾನ್ ಮಲ್ಲಾರಾಧ್ಯರ ಮನೆಯಲ್ಲಿ ಕೆಲವುಕಾಲ ಆಶ್ರಯ ಪಡೆಯಬೇಕಾದ ಸನ್ನಿವೇಶ ಬಂದಿತ್ತು. ಅದನ್ನು ಈಗ ಜ್ಞಾಪಕ ಮಾಡಿಕೊಳ್ಳುತ್ತೇನೆ. ಧೈರ್ಯವಾಗಿ ಒಂದು ನೀತಿಯನ್ನು ದೇಶದ ಮುಂದಿಟ್ಟು ದೇಶದಲ್ಲಿರುವ ಜನ ಶಕ್ತಿ—physical as well as mental—ಎಲ್ಲವನ್ನೂ ಕ್ರೋಡೀಕರಿಸಿ ದೇಶಕ್ಕೆ ಕಲ್ಯಾಣವಾಗುವಂತೆ ಮಾಡಿ ಆ ಕೀರ್ತಿಗೆ ಸರ್ಕಾರದವರು ಪಾತ್ರರಾಗಬೇಕೆಂದು ವಿನಂತಿ ಮಾಡಿ ನಮ್ಮ ಮುಂದಿಟ್ಟಿರುವ 1958-59ನೆಯ ಸಾಲಿನ ಆಯವ್ಯಯ ಪಟ್ಟಿಯನ್ನು ಸಂಪೂರ್ಣವಾಗಿ ನಾನು ಅನುಮೋದಿಸಿ ಸ್ವಾಗತಿಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಭಾಪತಿಗಳೇ, ನಾನು ಈ ಆಯವ್ಯಯದ ಪಟ್ಟಿಯನ್ನು ನಮ್ಮ ಮುಂದಿಟ್ಟಾಗ ಹಣಕಾಸಿನ ಸಚಿವರಿಗೆ ಹೃತ್ಪೂರ್ವಕವಾಗಿ ವಂದಿಸಬೇಕೆಂದಿದ್ದೆ. ಆದರೆ ಹಾಳೆ ತಿರುವಿಹಾಕಿದಾಗ ಇದನ್ನು ನೋಡಿದರೆ ಇದರಲ್ಲಿ ಕೆಲವು ಅಂಶಗಳನ್ನು ತಿದ್ದಬೇಕಾದದ್ದು ಕಂಡುಬಂತು. ನಮ್ಮ ಆಯವ್ಯಯಪಟ್ಟಿ ಸರ್ಪ್ಲಸ್ ಬಡ್ಜೆಟ್ ಎಂದು ಹೇಳಿದ್ದಾರೆ. ಇದರಲ್ಲಿ ಕೂಡಿರುವುದನ್ನು ನೋಡಿದರೆ ಒಂದೊಂದನ್ನು ಎರಡುಸಲ ಕೂಡಿದ್ದಾರೆ. ನಿಜವಾಗಿ ಇದು 1.22 ಕೋಟಿ ರೂಪಾಯಿಗಳ ಖೋತಾ ಬಡ್ಜೆಟ್. ಸರ್ಕಾರ ಮಡಕೆ ಕುಡಿಕೆ ತರಹ ಸ್ಟೇಟ್‌ಮೆಂಟ್ ಹಾಕಿರುವುದರಲ್ಲಿ ಹೀಗಿದೆ. ಯೂನಿಯನ್ ಎಕ್ಸೈಜು 328.6 ಎಂದು ಅಂದಾಜಿದೆ. ಅದರಲ್ಲಿ ಸೇಲ್ಸ್‌ಟ್ಯಾಕ್ಸ್ ವಜಾಆಗಿ ಎಕ್ಸೈಜು ಡ್ಯೂಟಿಯಿಂದ ಬರುವುದನ್ನು ಎಂದರೆ ಬಟ್ಟೆ, ಸಕ್ಕರೆ, ಟೊಬ್ಯಾಕೋ-ಇವುಗಳಿಂದ ಬರುವುದನ್ನು ಸೇರಿಸಿದ್ದಾರೆ. ಆಮೇಲೆ 588 ಲಕ್ಷ ಚಿಲ್ಲರೆ ಸೇಲ್ಸ್‌ಟ್ಯಾಕ್ಸ್ ಅಂದಾಜಿನಲ್ಲೂ ಸೇರಿಸಿದ್ದಾರೆ. ಎಕ್ಸ್‌ಪ್ಲನೇಟರಿ

ಮೆಮೊರ್ಯಾಂಡಂ ತೆಗೆದು ನೋಡಬಹುದು. ಅದರಿಂದ ಕೇಂದ್ರ ಸರ್ಕಾರದವರು ನಮಗೆ 136·27 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ತಾವು ಸೆಂಟ್ರಲ್ ಎಕ್ಸೈಜ್‌ನಿಂದ ಬರುವುದನ್ನು ಸೇರಿಸಿದಮೇಲೆ ಸೇಲ್ಸ್ ಟ್ಯಾಕ್ಸ್‌ಗೂ ಸೇರಿರುವುದು ಡಬ್ಬಲ್ ಎಂಟ್ರಿ ಆಗಿಲ್ಲವೆ? ಬಡ್ಜೆಟ್ ಮೆಮೊರ್ಯಾಂಡಮ್ಮಿನ 23ನೆಯ ಪುಟದಲ್ಲಿ ಇದನ್ನು ನೋಡಬಹುದು. ಸೇಲ್ಸ್‌ಟ್ಯಾಕ್ಸ್ ಬಡ್ಜೆಟ್ 1958-59—452·59, Receipts from additional duties of excise in lieu of sales tax—136.27, ಒಟ್ಟು 588.59 ಎಂದಿದೆ. 12ನೆಯ ಪುಟದಲ್ಲಿ, in the Central Excise the same figure is included. The share of net proceeds assigned to States is given as 192.34, share of net proceeds of additional duties of excise 136.27—the same figure ಇದೆ. ಆದ್ದರಿಂದ ನಾನು ಈ ಬಡ್ಜೆಟ್ಟನ್ನು ಉಳಿತಾಯದ ಬಡ್ಜೆಟ್ ಎಂದು ಹೇಳುವುದಕ್ಕಾಗುವುದಿಲ್ಲ. ಇದು ಖಂಡಿತವಾಗಿಯೂ ಕೂಡ ಡಿಫಿಸಿಟ ಬಡ್ಜೆಟ್; 1.22 ಕೋಟಿ ರೂಪಾಯಿಗಳ ಖೋತಾ ಆಗುತ್ತದೆ. ಆಮೇಲೆ ಲಾಭದ ಅನೇಕ ಐಟಂಗಳಲ್ಲಿ ಸರ್ಕಾರ, ಶ್ರೀ ಮಲ್ಲಾರಾಧ್ಯರು ಹೇಳಿದಹಾಗೆ, ಬಹಳ ಐಟಂಗಳಲ್ಲಿ ಜಾಸ್ತಿ ನಿರೀಕ್ಷಣೆ ಮಾಡಿದೆ. Over assumption of profits ಒಂದಲ್ಲ, ನಾಲ್ಕಾರು ಅಂಶಗಳಲ್ಲಿ ನೋಡಬಹುದು. ರೆವೆನ್ಯೂ 50 ಲಕ್ಷ ಜಾಸ್ತಿಯಾಗಿದೆ, ಇದನ್ನು ಯಾವ ಅಂದಾಜಿನಲ್ಲಿ ಊಹೆ ಮಾಡುವುದು? ಇಂಡಸ್ಟ್ರೀಸ್ ಬಾಬಿನಲ್ಲಿ ಸುಮಾರು 2 ಕೋಟಿ ಚಿಲ್ಲರೆ ಲಾಭ ಇವೆ, ಪೋರ್ಸಿಲೈನ್ ಫ್ಯಾಕ್ಟರಿಯಲ್ಲಿ 60 ಲಕ್ಷವಿದೆ.

5 P.M.

ಹಿಂದೆ ಪೋರ್ಸಲೈನ್‌ಫ್ಯಾಕ್ಟರಿ ವಿಚಾರದಲ್ಲಿ, Industries Demand ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ಮಾನ್ಯ ಕೈಗಾರಿಕಾ ಮಂತ್ರಿಗಳು ಹೀಗೆ ಹೇಳಿದ್ದರು. ಇನ್ನುಮುಂದೆ ಪೋರ್ಸಲೈನ್‌ಫ್ಯಾಕ್ಟರಿಯಲ್ಲಿ ನಷ್ಟವಾಗುವುದಿಲ್ಲ, ಕೊನೆಯಪಕ್ಷ ಸುಮಾರು 20-25 ಲಕ್ಷ ರೂಪಾಯಿ ಲಾಭ ಬರುತ್ತದೆ ಎಂದು ಹೇಳಿದ್ದರು. ಹೋದವರ್ಷ ಬಂದಿರುವ ಆದಾಯವನ್ನು ನೋಡಿದರೆ ಈ ವರ್ಷ ಲಾಭ ಬರುತ್ತದೆಂದು ಖಂಡಿತವಾಗಿಯೂ ನಿರೀಕ್ಷಣೆ ಮಾಡುವುದಕ್ಕೆ ಆಗುವುದಿಲ್ಲ.

R.M.D.C. ಯಿಂದ ಎರಡು ಲಕ್ಷ ರೂಪಾಯಿ ಬಾಕಿ ಇತ್ತು. ಯಾವುದೋ ರೂಪದಲ್ಲಿ ಅದನ್ನು ವಸೂಲು ಮಾಡಿದ್ದಾರೆ. ಪ್ರೈಜ್‌ಕಾಂಪಿಟಿಷನ್‌ಗಳಲ್ಲಿ ಒಂದು ಸಾವಿರಕ್ಕೆ ಜಾಸ್ತಿ ಮೊತ್ತವಿರಕೂಡದೆಂದು ಬಿಲ್ ತಂದಿದ್ದಾರೆ. ಹೀಗಿರುವಲ್ಲಿ ಪ್ರೈಜ್ ಕಾಂಪಿಟಿಷನ್ ಟ್ಯಾಕ್ಸ್ ಬರುವುದಿಲ್ಲ. ಇಂಥದ್ದರಲ್ಲಿ ನಾಲ್ಕು ಲಕ್ಷ ರೂಪಾಯಿ ಆದಾಯ ಬರತ್ತದೆಂದು ತೋರಿಸಿದ್ದಾರೆ.

Sri T. MARIAPPA.—Sir, a mistake is made. Licence fee is thousand rupees. There is an enactment of Mysore under which we can levy a tax. Kindly do not confuse one with the other.

Sri C. K. RAJAIAH SHETTY.—The maximum amount of the competition scheme is not more than Rs. 1,000. The income is proportionate to the amount in rotation.

ಈ ವರ್ಷದ ಆದಾಯ ಎರಡು ಲಕ್ಷ ರೂಪಾಯಿ ಇರಬೇಕಾದರೆ ಮುಂದಿನ ವರ್ಷ ಈ ಬಾಬಿನಲ್ಲಿ ನಾಲ್ಕು ಲಕ್ಷ ರೂಪಾಯಿ ಆದಾಯ ಬರುತ್ತದೆ ಎಂದು ಹೇಳುವುದು ಎಷ್ಟರ ಮಟ್ಟಿಗೆ ಸಾಧುವಾಗಿದೆ, ಎಷ್ಟು ಸತ್ಯವಾಗಿದೆ ಎಂದು ನೋಡಬಹುದು. ಇಂಡಿಯಾ ದೇಶದಲ್ಲಿ ಯಾವ ಸಂಸ್ಥಾನವೂ deficit budget ಮಾಡಬಾರದು ಎಂದು Finance Commission ಸೂಚನೆ ಕೊಟ್ಟಿರುವುದಾಗಿ ಅರ್ಥಸಚಿವರು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ. ಆದುದರಿಂದ ಈ ಬಡ್ಜೆಟನ್ನು ತಯಾರು ಮಾಡುವಾಗ surplus budget ಮಾಡಬೇಕು ಎನ್ನುವ ಉದ್ದೇಶದಿಂದ ಇದನ್ನು ಮಾಡಿದರೇ ವಿನಾ ನಿಜವಾಗಿಯೂ ಇಲ್ಲಿರುವ ಅಂಕಿ ಅಂಶಗಳ ಆಧಾರದ ಮೇಲೆ, ಇಲ್ಲಿರುವ ವೆಚ್ಚದ ಬಾಬನ್ನು ನೋಡಿಕೊಂಡು ಮಾಡಿಲ್ಲ. ಮತ್ತು ಹಾಗೆ surplus budget ಮಾಡುವುದಕ್ಕೆ ಖಂಡಿತವಾಗಿಯೂ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಹೇಗಿದ್ದರೂ ಕೂಡ, ಇಷ್ಟು ಜಾಸ್ತಿಯಾಗಿ ಹಾಕಿದರೂ ಕೂಡ ಈ ಸರ್ಕಾರ ಬಹಳ lapse ಮಾಡುತ್ತದೆ; ಅದರಿಂದ ಉಳಿತಾಯವಾಗುತ್ತದೆ, ಒಂದು ವೇಳೆ ಖೋತಾಬಿದ್ದರೂ ಅದನ್ನು adjust ಮಾಡಿಕೊಳ್ಳಬಹುದು ಎನ್ನುವುದು ಸಂಪ್ರದಾಯವಾಗಿ ಬಂದಿದೆ. ಇದರ ಮೇಲೆ ಧೈರ್ಯವಾಗಿ ಜಾಸ್ತಿ ಹಾಕಿರುತ್ತಾರೆ. ಆದರೆ ನಿಜಾಂಶವನ್ನು ನೋಡಿದರೆ ಖಂಡಿತವಾಗಿಯೂ ಉಳಿತಾಯವಿಲ್ಲ. I take a challenge. You cannot get that surplus. ಇದು ಸತ್ಯವಾದ ಮಾತು. ಸರ್ಕಾರದ ಆರ್ಥಿಕ ಭದ್ರತೆ ಹೇಗಿದೆ ಎಂದರೆ ಪ್ರತಿವರ್ಷವೂ decreasing closing balance ಬರುತ್ತಿದೆ. ಆಚೆ ವರ್ಷ 700 ಚಿಲ್ಲರೆ ಲಕ್ಷ ರೂಪಾಯಿ closing balance ಇದ್ದದ್ದು ಹೋದ ವರ್ಷ 177 ಲಕ್ಷ closing balance ಆಯಿತು. ಈವರ್ಷ 50 ಕೋಟಿ ರೂಪಾಯಿ ಬಡ್ಜೆಟ್ಟಿಗೆ 28.1 ಲಕ್ಷ ರೂಪಾಯಿ closing balance ತೋರಿಸಿದ್ದಾರೆ. ಆಮೇಲೆ Assets and Liabilities ತೆಗೆದುಕೊಂಡರೆ, ಅಸೆಟ್ಸ್‌ನಲ್ಲಿ ಲಯಬಿಲಿಟಿಗಿಂತ ಹತ್ತು ಕೋಟಿ ರೂಪಾಯಿ ಕಡಮೆ ಇದೆ. ಅದನ್ನು ಒಪ್ಪಿಕೊಳ್ಳುತ್ತಾರೆಯೇ? ಹೀಗೆ ಹತ್ತು ಕೋಟಿ ರೂಪಾಯಿಗಳಷ್ಟು liability ಹೆಚ್ಚಾಗಿರುವಾಗ ನಮ್ಮ ದೇಶವು ಆರ್ಥಿಕ ವಿಷಯದಲ್ಲಿ ಸುಭದ್ರವಾಗಿದೆಯೇ? ಇದರಿಂದ ಮುಂದೆ ಏನು ತೋರುತ್ತದೆಂದರೆ, we are digging our own grave ಎಂದರೂ ತಪ್ಪಾಗಲಾರದು.

ಈ ವರ್ಷ Debt Charges ವಿಪರೀತ ಜಾಸ್ತಿಯಾಗುತ್ತಿದೆ. ಅದರಲ್ಲಿಯೂ ಕೂಡ ಈ ವರ್ಷ 15-16 ಕೋಟಿ ರೂಪಾಯಿಗಳ ಸಾಲವನ್ನು ಕೇಂದ್ರದಿಂದ ತೆಗೆದುಕೊಳ್ಳಬೇಕೆಂದಿದ್ದಾರೆ. Debt service ಜಾಸ್ತಿಯಾಗಬಹುದು. ತೆಗೆದುಕೊಂಡ ಸಾಲವನ್ನು ನಾವು ಅನೇಕ ಬಾಬುಗಳಿಗೆ ಹಾಕುತ್ತಿದ್ದೇವೆ. ಆದರೆ ಆ ಬಾಬುಗಳಲ್ಲಿ ನಮಗೆ ನಿರೀಕ್ಷಣೆ ಮಾಡಿದಷ್ಟು ಆದಾಯ ಖಂಡಿತ ಬರುವುದಿಲ್ಲ. ಏಕೆಂದರೆ ಈಗ ತುಂಗಭದ್ರ ಪ್ರಾಜೆಕ್ಟು ಕಟ್ಟಿದರು. ಅದಕ್ಕೆ ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಖರ್ಚಾಗಿದೆ. ಅದರಿಂದ ನಿರೀಕ್ಷಣೆಮಾಡಿದಷ್ಟು ಆದಾಯ ಖಂಡಿತವಾಗಿಯೂ ಬರುತ್ತಿಲ್ಲ. ಅದೇ ರೀತಿ Rural Industries ಮೇಲೆ ಹಣವನ್ನು ಹಾಕುತ್ತಿದ್ದೇವೆ. ಇದರಲ್ಲಿ ಕೊನೆಯಪಕ್ಷ ಅರ್ಧಭಾಗದಷ್ಟು ಹಣವನ್ನು

(SRI C. K. RAJAIAH SHETTY)

ವಜಾಮಾಡಬೇಕಾಗುತ್ತದೆ. ಅಸಲನ್ನೂ ವಜಾಮಾಡಬೇಕಾದ ಸ್ಥಿತಿ ಇದರಲ್ಲಿ ಬರುತ್ತದೆ, ಇದರಲ್ಲಿ ಮೂರು ಕಾಸು ಲಾಭವನ್ನು ನಿರೀಕ್ಷೆಮಾಡುವುದಕ್ಕಾಗುವುದಿಲ್ಲ.

ಇದರ ಜೊತೆಗೆ ಆಡಳಿತ ಯಂತ್ರ ಹೇಗೆ ನಡೆಯುತ್ತಿದೆ ಎಂದರೆ ಮಂತ್ರಿಗಳಿದ್ದಾರೆ, I.A.S. ಅಧಿಕಾರಿಗಳಿದ್ದಾರೆ, ಲೆಕ್ಕವಿಲ್ಲದಷ್ಟು ಗೆಜೆಟೆಡ್ ಮತ್ತು ನಾನ್ ಗೆಜೆಟೆಡ್ ಅಧಿಕಾರಿಗಳಿದ್ದಾರೆ. ಇವೊತ್ತು ದೇಶದಲ್ಲಿ ಎಲ್ಲವೂ ಇದೆ, ಸತ್ಯ ಮತ್ತು ಧರ್ಮ ಖಂಡಿತವಾಗಿಯೂ ಇಲ್ಲ. ಇವೊತ್ತು Fred Webb ಎಂಬ ಒಂದು firm ನಿಂದ 30 ಸಹಸ್ರ ರೂಪಾಯಿ ಸೇಲ್ಸ್ ಟ್ಯಾಕ್ಸ್ collect ಮಾಡಿಲ್ಲ, ಇಲಾಖೆಗೆ ಮೋಸ ಮಾಡಿದ್ದಾರೆ. ಯಾರೋ ಒಬ್ಬ ಅಧಿಕಾರಿಗಳಿಗೆ ನನ್ನ ಕೈಗೆ ಸಿಕ್ಕಿದ ಒಂದು ಬಿಲ್ಲನ್ನು ತೋರಿಸಲಾಗಿ ಅವರು ವಿಚಾರಮಾಡಿ ಆ firm ನಿಂದ 30 ಸಹಸ್ರ ರೂಪಾಯಿಗಳನ್ನು ವಸೂಲುಮಾಡಿದರು. International Agencies ಎಂಬ ಒಂದು firm ಬೆಂಗಳೂರಿನ ಗಾಂಧಿನಗರದಲ್ಲಿತ್ತು. ಅವರು ಆರುರೂಪಾಯಿಗಳ license fee ಕೊಡದೆ ಹತ್ತಾರು ಸಾವಿರ ರೂಪಾಯಿಗಳನ್ನು ಗಳಿಸಿದ್ದಾರೆ. ಪ್ರಾಯಶಃ ಅವರನ್ನು ಪಕ್ಷದವರು ಎಂದು ಬಿಟ್ಟಿದ್ದಾರೋ ಏನೋ ಗೊತ್ತಿಲ್ಲ.

ಶ್ರೀ ಎಂ. ಸಿ. ನರಸಿಂಹನ್.—ಅವರ ಹೆಸರೇನು ಸ್ವಾಮಿ ?

Mr. SPEAKER.—No names please.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಆರು ವರ್ಷಗಳ ಕಾಲ ಇದು ಕೆಲಸ ಮಾಡಿತು. ಈವಾಗ ಆ firm ಇಲ್ಲ.

ಹಾಸನ ಜಿಲ್ಲೆಯಲ್ಲಿ ಯಾವ ರೀತಿ ಸೇಲ್ಸ್‌ಟ್ಯಾಕ್ಸ್ ವಸೂಲಾಗುತ್ತಿದೆ ಎಂಬುದನ್ನು ಹೇಳುತ್ತೇನೆ. ಈ ಜಿಲ್ಲೆಯ ಸೇಲ್ಸ್‌ಟ್ಯಾಕ್ಸ್ ಅಧಿಕಾರಿಗಳು ಯಾವುದಾದರೂ ಊರಿಗೆ ಹೋದರೆ ಹೋಗುವಾಗ ಖಾಲಿಚೀಲ ತೆಗೆದುಕೊಂಡು ಹೋಗುತ್ತಾರೆ, ಊರಿಗೆ ವಾಪಸು ಬರುವಾಗ ಅಕ್ಕಿ, ರಾಗಿ, ತೆಂಗಿನಕಾಯಿ, ಮೆಣಸಿನಕಾಯಿ ಸಮೇತ ಬರುತ್ತಾರೆ. ಇವರು ಹೋಗುವಾಗ ದಳ್ಳಾಳಿಯು ಹೋಗುವಂತೆ ಹೋಗುತ್ತಾರೆ. ಆದರೆ ಬರುವಾಗ ತುಂಬಿಕೊಂಡು ಬರುತ್ತಾರೆ......

Sri T. MARIAPPA.—May I request the Hon'ble Member to pass on specific instances and I will really take very stringent steps and bring the delinquents to book ?

Mr. SPEAKER.—Names of officers may be passed on in private. Names should not be mentioned here.

Sri T. MARIAPPA.—Let us lay down a very healthy convention Sir, that when a person is not in this House, he will not be able to defend himself. Therefore, it is a very well established convention that we should not talk of a person who cannot be here and defend himself. I would indeed be very grateful to my Hon'ble friend if he can pass on that information to me. I want to tell my friend that I can never tolerate corruption. I have taken care to see that every old Mysore officer is transferred outside the old Mysore area. Sir, in this business, I have not yielded even to threats. Let my Hon'ble friend know, Sir, that we have recently reorganised the Department and we have put fresh men there. We are trying to watch everybody and we are doing our best. We are very anxious to deal with the delinquent persons in the proper manner.

Sri C. K. RAJAIAH SHETTY.—If that is done, I am really very happy Sir.

Sri M. C. NARASIMHAN.—Sir, in respect of the statement made by the Finance Minister, in cases where Government want the names of persons, we can pass on the names in private. But where it is common knowledge that a particular offence is committed by a particular person, even then, is it necessary that we should not make a reference to them by name ?

Mr. SPEAKER.—Instances may be mentioned here without mentioning the names of persons. I am very particular that no names should be mentioned here in respect of particular officials. That is the healthiest principle and it has been followed because a a person who is not a member of this House cannot come and defend himself here. That is why no names of outsiders, be they officers or non-officials, should be mentioned in this House. So far as instances are concerned, they may be mentioned without mentioning the name of any individual.

Sri M. C. NARASIMHAN.—My point is whether it is not correct to mention names even where it is common by known to the Opposition and to the Members on the other side as well that a person has committed the offence ? In such cases, why not we mention names ? What is wrong ?

Mr. SPEAKER.—Whether this side agrees with the other side is another question. What we must consider is whether the person whose name is mentioned on the floor of the House can be present in the House to defend

himself; it is the responsibility of the Chair to see that no defamatory statements are made in respect of persons who are not members of the House. That is why I do not allow the names of such persons to be mentioned. But so far as instances are concerned, I have no objection to such instances, being pointed out but without mentioning names.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಇದು ಸೇಲ್ಸ್ ಟ್ಯಾಕ್ಸ್ ವಿಚಾರವಾಯಿತು. ಮಂತ್ರಿಗಳು ನಿಜವಾಗಿಯೂ ಆಸಕ್ತಿವಹಿಸುತ್ತಾರೆಂದು ಹೇಳುತ್ತೇನೆ. ಯಾರನ್ನೂ ಕೂಡ ಅವರು spare ಮಾಡುವವರಲ್ಲ ಎನ್ನುವುದು ಗೊತ್ತಿದೆ. ಆಡಳಿತ ನಡೆಯುವಾಗ ಎಷ್ಟೋ ರೀತಿ ನಡೆಯುತ್ತದೆ ಇದರಿಂದ ಸರ್ಕಾರಕ್ಕೆ ಬಹಳ ನಷ್ಟವಾಗುತ್ತದೆ, ಬರುವ ಆದಾಯ ಕಡಮೆಯಾಗುತ್ತಿದೆ ಎನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆಯೇ ಹೊರತು ಯಾರ ಮೇಲೂ ಕೂಡ ಅಪಾದನೆಯ ಹೊರೆಯನ್ನು ಹೊರಿಸಿ ಅವರಿಗೆ ಕೆಡಕು ಮಾಡಬೇಕೆಂಬ ಉದ್ದೇಶ ಖಂಡಿತವಾಗಿ ಇಲ್ಲ.

Mr. SPEAKER.—I wish also to mention another fact. Hon'ble Member gave out a name. I feel that it should be erased out of the record.

Sri C. K. RAJAIAH SHETTY.—I have not given any name.

AN HON'BLE MEMBER.—Sir, I know that the matter is in dispute. It is in the appellate Court. My friend should not bring in the name.

Mr. SPEAKER.—If it is in the Court, then so much more is the handicap. It means it is *sub judice* and it cannot be mentioned here.

Sri J. B. MALLARADHYA.—You were pleased to say that if a matter is *sub judice*, names should not be mentioned. Supposing the member concerned does not know that a particular matter is in the jurisdiction of the Court and that the Court is trying. Then what? He has mentioned only the name of a firm. Does the mentioning of names apply also to the names of institutions? In that case, it is impossible to speak.

Mr. SPEAKER.—After all, the rules of debate say that no name should be brought in if that can be avoided. If the debate cannot be made intelligible without mentioning the names, then only names can be mentioned. It may be the name of a firm or the name of an individual. If you can point out the name of a firm, you can point out the name of an individual. Therefore, either the names of firms or the names of individuals should not be mentioned here. It is all the more so if the case is in a Court of law.

Sri C. K. RAJAIAH SHETTY.—I had no intention of bringing anybody's name to open debate. When I wanted to say something to substantiate, I should give some examples In that view I have to tell the name of the firm. That is all. ರೋಡ್ ಟ್ರಾನ್ಸ್‌ಪೋರ್ಟ್ ಎಂಬ ಒಂದು ಇಲಾಖೆ ಇದೆ. ಆ ಇಲಾಖೆಯಲ್ಲಿ . . .

Sri T MARIAPPA.—We will positively look into the matter.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಈಗ ಕೆಲವು ದಿವಸದ ಹಿಂದೆ—25 ದಿವಸಗಳ ಹಿಂದೆ, ಒಂದು ಡಿಪಾರ್ಟ್‌ಮೆಂಟ್ ಮುಖ್ಯಾಧಿಕಾರಿಗಳಿಗೆ ಅವರ ಅಪ್ಪ ಸತ್ತುಹೋದರು ಎಂದು ಟೆಲಿಗ್ರಾಂ ಬಂದಿತ್ತು. ಆ ಸಂದರ್ಭದಲ್ಲಿ ಆತ ಅಪ್ಪ ಸತ್ತ ಊರಿಗೆ ಹೊದದ್ದಕ್ಕೆ ಸರ್ಕಾರದ ಟಿ.ಎ., ಡಿ.ಎ., ಡ್ರಾ ಮಾಡಿದ್ದಾರೆ. ಬೇಕಾದರೆ ಅಕೌಂಟ್ಸ್ ನೋಡಲಿ.

ಶಿವಮೊಗ್ಗಾದಲ್ಲಿ ಬಸ್ಸುಗಳಿಗೆ ಡೀಸಲ್ ಆಯಿಲ್ ಹಾಕಿಸಿಕೊಳ್ಳುವಾಗ, ಲೆಕ್ಕದಲ್ಲಿ ಎರಡು ಗ್ಯಾಲನ್ ಜಾಸಿ ಬರೆಸುತ್ತಾರೆ. ಅಂದರೆ ಬಿಲ್ಲಿನಲ್ಲಿ ಎರಡೆರಡು ಗ್ಯಾಲನ್‌ಗಳು ಜಾಸ್ತಿಯಾಗಿ ಸೇರುತ್ತವೆ.

ಟಿಪಟೂರಿನಲ್ಲಿ ಡೊಮೆಸಿಕ್ ಸ್ಯೈನ್ಸ್ ಟೀಚ್ ಮಾಡುವುದಕ್ಕೋಸ್ಕರ ಒನಕೆ, ಜರಡಿ, ಪ್ಲೇಟ್ ಇತ್ಯಾದಿ ಸಾಮಾನುಗಳು ಬಂದಿವೆ. ಒನಕೆಗೆ 20 ರೂಪಾಯಿ ಬಿಲ್ ಹಾಕಿದ್ದಾರೆ, ಜರಡಿಗೆ ನಾಲ್ಕು ರೂಪಾಯಿ, ಅಲ್ಯೂಮಿನಿಯಂ ಟ್ರೇಗೆ ಆರು ರೂಪಾಯಿ ಹಾಕಿದ್ದಾರೆ. ಗಂಗಾನದಿಯಲ್ಲಿ ಶುದ್ಧ ನೀರು ಬಂದು ಬೆಂಗಳೂರು ಗಟರ್‌ನಲ್ಲಿ ಹೋದರೆ ಏನಾಗುತ್ತದೋ ಹಾಗೆ ದುಡ್ಡು ಆದರೆ ದೇಶ ಏನು ಅಭಿವೃದ್ಧಿಯಾಗುತ್ತದೆ? ಈಗ ಚಿಕ್ಕನಾಯಕನಹಳ್ಳಿಯಲ್ಲಿ ಪಂಚಾಯಿತ್ತಿಗಳಲ್ಲಿ ಗಾಂಧೀಜಿ ಫೋಟೊ, ನೆಹರು ಫೋಟೊ, ಜಂಖಾನ ತರಿಸಿ, ಹತ್ತು ರೂಪಾಯಿ ಫೋಟೋಗೆ 27 ರೂಪಾಯಿ 20 ರೂಪಾಯಿಗಳ ಜಂಖಾನಕ್ಕೆ 47 ರೂಪಾಯಿ ಬಿಲ್ ಹಾಕಿದ್ದಾರೆ. ಪಂಚಾಯಿತಿ ರೆಜಲ್ಯೂಷನ್ ಮಾಡುವುದಕ್ಕೆ ಮೊದಲೇ ಆಮಲ್‌ದಾರರು ಜಮಾಬಂದಿಗೆ ಹೋದಾಗ ಅವರ ಅನುಮತಿ ತೆಗೆದುಕೊಂಡರಾಯಿತು, ಮಾಕರ್ಥಮು, ಮಾಕರ್ಥಮು ಎಂದು ಮಾಡಿಕೊಂಡರೆ ಏನು ಮಾಡುತ್ತೀರಿ?

Sri T. MARIAPPA.—It is a self-governing institution.

Sri J. B. MALLARADHYA.—Even to-day the procedure is that without the approval of the Amildar, even Rs. 5 cannot be withdrawn. With what courage does the Finance Minister say that it is a self-governing institution? Even though he is paying a kandayam of Rs. 5,000 he is not allowed to withdraw Rs. 5.

Sri H. K. VEERANNA GOWDH.—I do not think the Hon'ble Member is correct. He can withdraw Rs. 300

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸುಮಾರು 60 ಪಂಚಾಯಿತಿಗಳು ಇವೆ. ಲಿಸ್ಟ್ ಕಳುಹಿಸುತ್ತೇನೆ. ನಾನು ಹಳ್ಳಿಗೆ ಹೋಗಿದ್ದಾಗ ಗುರ್ತು ಹಾಕಿಕೊಂಡಿದ್ದು ಅಷ್ಟು. 4,000 ರೂಪಾಯಿಗಳಿಗೆ ಫೋಟೋ, ಜಂಬಾನ, ಲೈಟ್‌ಗಳನ್ನು ಕೊಂಡುಕೊಂಡಿದಾರೆ. ನಲವತ್ತು ಪರ್‌ಸೆಂಟ್ ಪೇಮೆಂಟ್ ಪಾಸ್‌ಮಾಡುವ ಅಧಿಕಾರಿಗೆ 60 ಪರ್‌ಸೆಂಟ್ ಪಾಲು ಯಾರದೋ ಅವರಿಗೆ ಎಂದು ಬಾತ್ಮಿ ಇದೆ. ಬೆಂಗಳೂರು ಸಿಟಿಯ ಎಕ್ಸೈಜ್ ಸೇಲ್ಸ್ ವಿಚಾರ ನೀವೇ ಹೇಳಿ, ಸ್ವಾಮಿ. ಬೆಂಗಳೂರು ಸಿಟಿಗೆ ಹೊಸದಾಗಿ ಎಕ್ಸೈಜ್ ಸೇಲ್ಸ್‌ಗೆ ಎಷ್ಟು ಲಾರಿ ಬೇಕು, ಪೀಪಾಯಿ ಬೇಕು, ಎಷ್ಟು ಕಷ್ಟ ಇದೆ! ಕೊನೆಯಪಕ್ಷ ಇನ್‌ಷಿಯಲ್ ಕ್ಯಾಪಿಟಲ್ 25,00,000 ರೂಪಾಯಿ, ಹೋಗಲಿ 10,00,000 ರೂಪಾಯಿ ಆದರೂ ಬೇಕು. ಬೆಂಗಳೂರಿನ ಜನಸಂಖ್ಯೆ ಮೂರು ಲಕ್ಷದಿಂದ ಏಳು ಲಕ್ಷವಾಯಿತು ; ಈಗ ಹತ್ತು ಲಕ್ಷದ ಹತ್ತಿರ ಹತ್ತಿರ ಬಂದಿದೆ. ನಮ್ಮ ಮಾನ್ಯ ಅಬ್ಕಾರಿ ಮಂತ್ರಿಗಳು ಹೇಳಿದರು "ಬೆಂಗಳೂರಿನಲ್ಲಿ ವಿಧಾನಸೌಧ ಕಟ್ಟುತ್ತಾ ಇತ್ತು; ಅದಕ್ಕೋಸ್ಕರ ಟೆಂಡರ್ ಕಡಿಮೆ ಬಂದಿತು" ಎಂದು ಇವೊತ್ತು ಹೇಳಲಿ. ಹರಾಜು ಹಾಕಿದ್ದರೆ ಎಷ್ಟು ಜನರು ಕೂಗುತ್ತಾರೆ ಎಂದು ಒಂದು ಕೆಲಸ ಮಾಡಬೇಕಾದರೆ ಸಂದರ್ಭಾನುಸಾರವಾಗಿ ತನ್ನ ವಿವೇಚನಾಶಕ್ತಿಯಿಂದ ಸರ್ಕಾರ ಕೆಲಸ ಮಾಡಬೇಕು ಎಂದು ನಿರೀಕ್ಷಿಸುತ್ತೇವೆ. ನಾನು ಆಕ್ಷೇಪಣೆಮಾಡಬೇಕು ಎಂಬ ಉದ್ದೇಶದಿಂದ ಹೇಳುತ್ತಿಲ್ಲ ದಾಕ್ಷಿಣ್ಯಕ್ಕೆ ಕೊಡಬಾರದು. ಆರ್ಥಿಕ ಮಂತ್ರಿಗಳು ಬಹಳ ಬುದ್ಧಿವಂತರು. ಅವರು ಕಾಮನ್ ಸೆನ್ಸ್‌ನಿಂದ ಯೋಚನೆಮಾಡಲಿ, ಅದು ಬೇರೆಯವರಿಗೆ ಹೋಗಿದ್ದರೆ ಜಾಸ್ತಿಯಾಗುತ್ತಿತ್ತೋ ಇಲ್ಲವೋ. ಯಾರದೋ ಒಬ್ಬರ ದಾಕ್ಷಿಣ್ಯಕ್ಕೆ ಒಳಗಾಗಿ ಅಥವಾ ಭಯಕ್ಕೆ ಬಿದ್ದುಕೊಂಡು ಹೀಗಾಯಿತು ಎನ್ನುವುದಲ್ಲವೇ? ಬೆಂಗಳೂರು ಎಕ್ಸೈಜ್ ಸೇಲ್‌ನಿಂದ ಕೊನೆಯಪಕ್ಷ ಹತ್ತು ಲಕ್ಷ ರೂಪಾಯಿ ಲುಕ್ಸಾನು ಬಿದ್ದಿದೆ ಎಂದರೆ ತಪ್ಪಾಗಲಾರದು. ಬೆಂಗಳೂರಿನಲ್ಲಿ ಬಹಳವಾಗಿ ದೊಡ್ಡ ಕೈಗಾರಿಕೆಗಳಾಗಿವೆ, ಪ್ರಜಾಸಂಖ್ಯೆ ಅಧಿಕವಾಗಿದೆ, ಕಳ್ಳಸಾಗಾಣಿಕೆ ಗಾಂಜಾ ಹೋಗುತ್ತಿದೆ.

ಶ್ರೀ ಟಿ. ಮರಿಯಪ್ಪ.—ಯಾವ ದಾಕ್ಷಿಣ್ಯಕ್ಕೂ ಕಟ್ಟುಬಿದ್ದಿಲ್ಲ. ಕಾನೂನುಪ್ರಕಾರ ಹರಾಜು ಮಾಡಿದಾರೆ. ಹರಾಜಿನಲ್ಲಿ ಅನ್ಯಾಯವಾಗಿದೆ ಎಂದು ಕಾಗದಬಂದಿದ್ದರೂ ಕ್ಯಾನ್‌ಸಲ್ ಮಾಡುತ್ತಾ ಇದ್ದೆವು. ನಮ್ಮ ಎಕ್ಸೈಜ್ ಮಂತ್ರಿಗಳು ಸರಿಯಾಗಿ ಉತ್ತರ ಕೊಟ್ಟಿದ್ದಾರೆ ಎಂದು ನನಗೆ ಚೆನ್ನಾಗಿ ಜ್ಞಾಪಕವಿದೆ. ಒಂದು ವರ್ಷವಾದ ಮೇಲೆ ಹೇಳಿದ್ದೀರಲ್ಲಾ. ಇದುವರೆಗೂ ಎಷ್ಟೋ ಅವಕಾಶವಿತ್ತು. ತಾವು ಸುಪ್ರೀಂ ಕೋರ್ಟಿನ ಡಿಸಿಷನ್ ನೋಡಿರಿ; ಕಮರ್ಷಿಯಲ್ ಮೊರಾಲಿಟಿ ಇಟ್ಟುಕೊಳ್ಳಬೇಕಾಗುತ್ತದೆ. ಕಾನೂನು ಇದೆಯೆಂದು ಮನಸ್ಸುಬಂದಹಾಗೆ ಮಾಡುವುಕ್ಕಾಗುವುದಿಲ್ಲ. ರೂಲ್ಸ್ ಪ್ರಕಾರ ಬಹಿರಂಗವಾಗಿ ಹರಾಜು ಮಾಡಿದಾರೆ. ಆದರೆ ಒಂದು ಕಾಂಬಿನೇಷನ್ ಆಗಿ, ಪೈಪೋಟಿ ಇಲ್ಲದೆ ಸ್ವಲ್ಪ ಕಡಮೆ ಆಯಿತೆಂದು ನನ್ನ ಸಹೋದ್ಯೋಗಿ ಎಕ್ಸೈಜ್ ಮಂತ್ರಿಗಳು ಹೇಳಿದ ಹಾಗೆ ಜ್ಞಾಪಕವಿದೆ. I do not exactly recall the same words.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಸರ್ಕಾರದವರು ಧೈರ್ಯವಾಗಿ ಗ್ರೂಪ್ಸ್ ಸೇಲ್ಸ್ ಮಾಡಿದ್ದರೆ ಇದಕ್ಕಿಂತ ಜಾಸ್ತಿ ಬರುತ್ತಾ ಇರಲಿಲ್ಲ ಎಂದು ಹೇಳುತ್ತಾರೆಯೇ?

ಶ್ರೀ ಟಿ. ಮರಿಯಪ್ಪ.—ಗ್ರೂಪ್ಸ್ ಸೇಲ್ ಮಾಡಿದ್ದರೆ ಇನ್ನೂ ಕಡಮೆ ಬರುತ್ತಾ ಇತ್ತು, ಏಕೆಂದರೆ ಅಕ್ಕಪಕ್ಕದಲ್ಲಿ ಮರಗಳು ಯಾವುವೂ ಇಲ್ಲ. The Hon'ble Member knows that. ಪ್ರತಿಯೊಂದು ಷಾಪನ್ನೂ ಹರಾಜು ಮಾಡಿಸಿಕೊಂಡು ಬಿಡುತ್ತಿದ್ದರು. ತುಂಬ ಶ್ರಮವಾಗುತ್ತಿತ್ತು. ಅದನ್ನು ಯತ್ನಿಸಿ ನೋಡಿದ್ದೇವೆ. ಅದರಲ್ಲಿ ಬಹಳ ಅಪಾಯ ಇದೆ. ಅವರು ಹೇಳಿದಹಾಗೆ ಕನಿಷ್ಟ ಪಕ್ಷ 20 ಲಕ್ಷ ರೂಪಾಯಿಗಳ ಎಸ್ಟಾಬ್ಲಿಷ್‌ಮೆಂಟ್ ಬೇಕೇ ಬೇಕು. ಆದ್ದರಿಂದ ದೊಡ್ಡವರು ಕೊಂಡುಕೊಳ್ಳಬೇಕೇ ಹೊರತು ಸಾಮಾನ್ಯವಾದವರು ಕೊಂಡುಕೊಳ್ಳುವ ಕಾಲ ಹೊರಟುಹೋಯಿತು. ಬಹಳ ದೂರದಿಂದ ಸಾರಾಯಿ ಒದಗಿಸಿಕೊಳ್ಳಬೇಕು, ಕನಿಷ್ಠ ಪಕ್ಷ 20 ಲಕ್ಷ ರೂಪಾಯಿಗಳನ್ನು ಯಾರು ಇಟ್ಟುಕೊಳ್ಳುತ್ತಾರೋ ಅವರಿಂದ ಮಾತ್ರ ಸಾಧ್ಯ ಎಂದು ಹೇಳಿದರು. ತಾವು ಸಲಹೆ ಕೊಡಿ ಯಾವುದು ಸೂಕ್ತವೋ ಅದನ್ನು ಅನುಸರಿಸುತ್ತೇವೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಎಲ್ಲವನ್ನೂ ಕೋ-ಆಪರೇಟಿವ್ ಬೇಸಿಸ್‌ಮೇಲೆ ಮಾಡಬೇಕೆಂದು ಮನಸ್ಸು ಮಾಡಿದ್ದೀರಿ. ಇದನ್ನು ಕೂಡ ಕೋ-ಆಪರೇಟಿವ್ ಸಿಸ್ಟಂಮೇಲೆ ಮಾಡುವುದಕ್ಕೆ ಆಗುವುದಿಲ್ಲವೇ? It is quite possible and only if you mind, you can do it. That is the whole point. Combine shops into groups of 5 to 10 shops and let there be a co-operative society.

ಶ್ರೀ ಟಿ. ಮರಿಯಪ್ಪ.—ಆಗ ನೀವೇ ಆಕ್ಷೇಪಣೆ ಮಾಡುತ್ತೀರಿ, ಸರ್ಕಾರದವರೇ ಹೆಂಡ ಮಾರುವುದಕ್ಕೆ ಶುರುಮಾಡಿದರು ಎಂದು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಈಗ ನೀವು ಮಾಡುತ್ತಾಯಿರುವುದು ಏನು? ಈಗ ಮಾಡುತ್ತಾ ಇರುವುದೂ ಅದೇ!

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ನಾನು ಹೇಳುವುದು ಏನೆಂದರೆ ಮಾನ್ಯ ಮಂತ್ರಿಗಳು ಹೇಳಿದ ಹಾಗೆ 20 ಲಕ್ಷ ರೂಪಾಯಿಗಳಿಗೆ ಒಂದು ವ್ಯವಹಾರವನ್ನು ಈ ಮೈಸೂರು ಸಂಸ್ಥಾನದಲ್ಲಿ ಎಷ್ಟು ಜನ ಪೈಪೋಟಿ ಮಾಡಿ ತೆಗೆದುಕೊಳ್ಳಬಹುದು ಎಂದು. It is no argument at all. ಕರ್ನಾಟಕದಲ್ಲಿ ಕೆಲವು ಕಡೆ ಪ್ರೊಹಿಬಿಷನ್ ಇದ್ದು ಮತ್ತೆ ಕೆಲವು ಕಡೆ ಇಲ್ಲದೇ ಇರುವುದರಿಂದ ಈ ಪ್ರೊಹಿಬಿಷನ್ ಇರುವ ಮದರಾಸು ಮತ್ತು ಬೊಂಬಾಯಿನಿಂದ ಸಾವಿರಾರು ಜನ ಬಂದು ಪೈಪೋಟಿ ನಡೆಸುತ್ತಾ ಇದ್ದಾರೆ ಎಂದು ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ಏನು ಮಾಡಬೇಕೆಂದು ಸಲಹೆ ಕೊಡಿ, ಸೂಕ್ತವಾಗಿದ್ದರೆ ಖಂಡಿತವಾಗಿಯೂ try ಮಾಡುತ್ತೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ನನ್ನ ಸಲಹೆ ಇದೇ. ನೀವು ಹಿಂದೆ ಒಂದುಸಾರಿ ಬೇರೆ ಬೇರೆ ಷಾಪ್‌ಗಳನ್ನು ಯಾವ ರೀತಿ ಹರಾಜು ಮಾಡಿದರೋ ಅದೇರೀತಿ ಇವೊತ್ತು ಮಾಡಿದರೆ 10ಲಕ್ಷ ರೂಪಾಯಿ ಜಾಸ್ತಿಬರುತ್ತದೆ.

ಶ್ರೀ ಟಿ. ಮರಿಯಪ್ಪ.—ಇಂಡಿವಿಜ್ಯುಯಲ್ ಆಗಿ ಹರಾಜು ಹಾಕಬೇಕೆಂದು ಹೇಳುತ್ತೀರಿ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಇನ್ನೊಂದು ವಿಷಯ ಎಫಿಷೆಂಟ್ ಅಡ್ಮಿನಿಸ್ಟ್ರೇಷನ್ ಎನ್ನುವುದು. ಇದನ್ನೆಲ್ಲಾ ನೋಡಿದ ಪಕ್ಷದಲ್ಲಿ ಎಷ್ಟುಮಟ್ಟಿಗೆ ನಮ್ಮ ದೇಶದಲ್ಲಿ ಆಡಳಿತ ಇವೊತ್ತು ನಡೆಯುತ್ತಾ ಇದೆ ಎಂದರೆ ನೀವು ಹಿಂದೆ ಅಂಥಾ ಬೇಜವಾಬ್ದಾರಿ ಸರ್ಕಾರ, ಅಂಥ ಬಡವರ ರಕ್ತ ಹೀರುವ ಸರ್ಕಾರ, ಬಡವರು ಬೆವರು ಸುರಿಸಿ ಸಂಪಾದಿಸಿದ ಹಣವನ್ನು ಸ್ವೇಂದಿಗಾಗಿ ಖರ್ಚುಮಾಡಿಸಿ ಅವರನ್ನು ಪಾಪಕೂಪಕ್ಕೆ ನೂಕಿ, ಅವರಿಂದ ದುಡ್ಡನ್ನು ಕಸಿದು ಕೊಂಡಂಥ ಸರ್ಕಾರ ಏಕೆ ಇರಬೇಕು, ರಾಜೀನಾಮೆ ಕೊಡಿ ಎಂದು ಹೇಳುತ್ತ ಇದ್ದವರು. ಬೇಕಾದರೆ ಹಿಂದೆ ನೀವುಗಳು ಅಸೆಂಬ್ಲಿಯಲ್ಲಿ ಮಾಡಿದ 20 ಭಾಷಣಗಳನ್ನು ತೋರಿಸಬಹುದಾಗಿತ್ತು. ಯಾವಾಗಲೂ ಕೂಡ ಯಾವ ಪಕ್ಷವೇ ಆಗಲಿ ಆ ಪಕ್ಷದಲ್ಲಿ ಒಂದು ಕನ್‌ವೆಕ್ಷನ್ ಒಂದು ನಂಬಿಕೆ ಇದೆ. ಆ ಪಕ್ಷದ ನೀತಿ ಏನು ಅಥವಾ ಅವರ ಮ್ಯಾನಿಫೆಸ್ಟೋ ಏನಿದೆ ಅದರ ಪ್ರಕಾರ ರಚನಾತ್ಮಕ ಕಾರ್ಯಗಳನ್ನು ಹಾಕಿಕೊಂಡಿರುತ್ತಾರೆ. ಅದರಂತೆ ತಾವು ನಾಲ್ಕು ಆರು ಅಂಶಗಳನ್ನು ತಮ್ಮ ಪ್ರಣಾಳಿಕೆಯಲ್ಲಿ ತಿಳಿಸಿದ್ದೀರಿ. ಅದರಲ್ಲಿ ಎಷ್ಟು ಸಾಧನೆ ಮಾಡಿದ್ದೀರಿ, ಎಷ್ಟು ಭಾಗ ಮುಂದುವರಿದಿದ್ದೀರಿ ಎಂದರೆ ಖಂಡಿತವಾಗಿಯೂ ಅದನ್ನು ಸಂಪೂರ್ಣವಾಗಿ ಮರೆತಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಇವೊತ್ತು ನೋಡಿ ನೀವು ಖಾದಿಧಾರಿಗಳು. ಸತ್ಯವಾಗಿಯೂ ಕೂಡ ಖಾದೀಧಾರಿಗಳೇ. ನನಗೂ ಖಾದಿ ಹಾಕ ಬೇಕೆಂದು ಖಾದಿಯ ಮೇಲೆ ಅಭಿಮಾನ ಇದೆ. ಆದರೆ ಈ ದೇಶಭಕ್ತಿ ಎನ್ನುವುದು, ದೇಶಾಭಿಮಾನ ಎನ್ನುವುದು ಕೇವಲ 50 ರೂಪಾಯಿಗಳ ಖಾದಿಬಟ್ಟೆಯೊಳಗೆ ಬಂದಿದೆಯೇ ಹೊರತು ಬೇರೆ ಯಾವ ವಿಧದಲ್ಲೂ ಸತ್ಯವಾಗಿ ಮುಂದುವರಿದಿಲ್ಲ. ಈ 50 ರೂಪಾಯಿ ಬಟ್ಟೆ ಹಾಕುವವರಿಗೆ 150ರೂಪಾಯಿನ ಪಾರ್ಕರ್ ಫೌನ್‌ಟೆನ ಪೆನ್, 300 ರೂಪಾಯಿನ ರೇಡಿಯೋ 2,000ರೂಪಾಯಿನ ರೆಫ್ರಿಜರೇಟರು ಬೇಕು. 25,000 ರೂಪಾಯಿ ಕ್ಯಾಡಿಲಾಕ್ ಕಾರು ಬೇಕು. ನಿಜವಾಗಿಯೂ ಒಂದು ದೇಶ ಕಟ್ಟುವಾಗ ಎಷ್ಟು ಮಟ್ಟಿಗೆ ಜನ ದುಡಿಯಬೇಕು, ಎಷ್ಟುಮಟ್ಟಿನ ದೇಶ ಪ್ರೇಮ, ವಿಶ್ವಾಸ ಇರಬೇಕು ಎನ್ನುವುದಕ್ಕೆ ಹೇಳುತ್ತಾ ಇದ್ದೇನೆ. ಏಕೆಂದರೆ ಇವೊತ್ತು ನಾವು ಇಲ್ಲಿ ಕುಳಿತುಕೊಂಡು ತೆಗೆದುಕೊಳ್ಳುತ್ತಾ ಇರುವ ಕರೆನ್ಸಿನೋಟು ಏನಿದೆ ಅದನ್ನು ಇಂಡಿಯಾ ಸರ್ಕಾರದವರು ಪ್ರಿಂಟ್‌ಮಾಡುತ್ತಾರೆ. ಕೇಂದ್ರ ಸರ್ಕಾರದವರು, ಪ್ಲಾನಿಂಗ್ ಕಮೀಷನವರು, ಫೈನಾನ್ಸ್ ಕಮೀಷನವರ ಶಿಫಾರಸಿನ ಮೇಲೆ ಎರಡುಕೋಟಿ ರೂಪಾಯಿ ಹೆಚ್ಚಾಗಿಕೊಡುವುದಕ್ಕೆ ಪ್ರಯತ್ನ ಮಾಡಿದರೂ ಸಹ ಒಂದು ಡಾಲರ್ ದುಡಿಮೆ ಮಾಡುವುದಕ್ಕೆ ಅಥವಾ ಒಂದು ಡಾಲರ್ ವಿನಿಮಯಮಾಡುವುದಕ್ಕೆ ಎಷ್ಟೋ ಕೈಗಾರಿಕೆಗಳನ್ನು ಸ್ಥಾಪನೆಮಾಡಬೇಕಾಗಿ ಬಂತು. ಇಂದು ಆ ಕೈಗಾರಿಕೆಗಳು ಬಹಳ ಮಟ್ಟಿಗೆ ಮುಂದುವರಿಯುತ್ತಾ ಇವೆ. ಕಷ್ಟಪಟ್ಟು ಯಾವ ಕೈಗಾರಿಕೆಯನ್ನು ಹೊಸದಾಗಿ ಶುರುಮಾಡಬೇಕಾದರೂ ಕೂಡ ಅದು ಡಾಲರ್ earning ಆಗಿರಬೇಕೆಂದು ಹೇಳುತ್ತಾರೆ. Dollar ಸರ್ಕಾರದವರು ಒಪ್ಪಬೇಕು, ಒಪ್ಪಿದ ಮೇಲೆ ಕೈಗಾರಿಕೆ ಸ್ಥಾಪನೆಮಾಡಬೇಕು. ಹೀಗಿರುವಾಗ ಈ ದೇಶಪ್ರೇಮ, ವಿಶ್ವಾಸ ಇದೆಲ್ಲಾ ಎಲ್ಲಿ ನಿಂತಿದೆ ಎಂದರೆ 50 ರೂಪಾಯಿ ಬರೀ ಖಾದಿಯ ಬಟ್ಟೆ ಮೇಲೆ ನಿಂತಿದೆ. ಆದ್ದರಿಂದ ನಿಜವಾಗಿಯೂ ಕೂಡ ನೀವು ಅಧಿಕಾರಕ್ಕೆ ಬರುವುದಕ್ಕೆ ಮೊದಲು ಏನೊಂದು ರೀತಿಯಲ್ಲಿ ಭಾಷಣಮಾಡುತ್ತಾ ಇದ್ದಿರಿ, ಏನೊಂದು ರೀತಿಯಲ್ಲಿ ಪ್ರಚಾರವಾಡುತ್ತಾ ಇದ್ದಿರಿ, ಏನೊಂದು ತತ್ವ ಇಟ್ಟುಕೊಂಡು ಅದರ ಪರಿಪಾಲನೆ ಮಾಡುತ್ತೇವೆ ಎಂದು ಹೇಳುತ್ತಾ ಇದ್ದಿರಿ, ಯಾವ ಒಂದು ಧ್ಯೇಯ, ಧೋರಣೆಯಿಂದ ಭಾಷಣ ಮಾಡುತ್ತಾ ಇದ್ದಿರಿ ಅದು ಇವೊತ್ತಿನ ದಿವಸ ಎಷ್ಟು ಮಟ್ಟಿಗೆ ಫಲ ಪ್ರದವಾಗಿದೆ ಎಂದರೆ ನೀವು ಹೇಳಿದ್ದ ನಾಲ್ಕು ಆರು ತತ್ವಗಳಲ್ಲಿ ಯಾವ ಯಾವುದನ್ನು ಸಾಧನೆಮಾಡಿದ್ದೀರಿ ಎನ್ನುವುದಕ್ಕೆ ಶ್ರೀಮಾನ್ ಪುಟ್ಟಸ್ವಾಮಿಯವರು ಬಹಳ ಚೆನ್ನಾಗಿ ಹೇಳಿದರು. ಏಕೆಂದರೆ ಕೇವಲ ಒಂದು ಮಾತಿನಲ್ಲಿ ಜನ ನಂಬುವುದಿಲ್ಲ. ಮಾತಿನಲ್ಲಿ ಜನ ನಂಬುವ ಕಾಲ ಆಗಿ ಹೋಯಿತು. ಈಗ ಕೃತಿಯಲ್ಲಿ ತೋರಿಸಿದರೆ ಮಾತ್ರ ಜನತೆ ನಂಬುತ್ತದೆ. ಅದನ್ನು ಬಿಟ್ಟು ಸುಮ್ಮನೆ ನೀವು ಅಧಿಕಾರದಲ್ಲಿರಬೇಕೆಂಬ ಆಸೆಗೆ ಹಾಗೆಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಹೇಳಿದರೆ ಸತ್ಯವಾಗಿಯೂ ಕೂಡ ತಮ್ಮ ಮಾತಿನಲ್ಲಿ ಜನತಗೆ ನಂಬಿಕೆಯಿಲ್ಲದ ಹಾಗಾಗುತ್ತದೆ.

ಆ ಮೇಲೆ ಪೋಲೀಸ್ ಇಲಾಖೆಯ ವಿಷಯ ಹೇಳಲೇ ಬೇಕಾಗಿದೆ, ಏಕೆಂದರೆ ದೇಶದಲ್ಲಿ ಇವತ್ತಿನ ಸ್ಥಿತಿ ಏನಾಗಿದೆ ಎಂದರೆ, ನಾನು ಈಗ ಏನು ಹೇಳಿದರೂ ನಮ್ಮ ಪೋಲೀಸ್ ಖಾತೆಯ ಮಂತ್ರಿಗಳು ನಂಬುವ ಸ್ಥಿತಿಯಲ್ಲಿಲ್ಲ. ಅವರು ಬಹಳ ಜಾಣ್ಮೆಯುಳ್ಳವರು, ಸ್ವಚ್ಛವಾದ ಭಾಷೆಯಲ್ಲಿ, ಅಚ್ಚ ಕನ್ನಡದಲ್ಲಿ ನಮಗೆಲ್ಲಾ ಒಂದು ರೀತಿಯಲ್ಲಿ ನಮ್ಮ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಹೇಳುವ ಶಕ್ತಿಯನ್ನು ದೇವರು ಅವರಿಗೆ ಕೊಟ್ಟಿದ್ದಾನೆ. ಆದರೂ ನಾನು ಹೇಳಬೇಕಾದ್ದನ್ನು ಹೇಳುತ್ತೇನೆ. ಇವೊತ್ತಿನ ದಿವಸ ಪೋಲೀಸ್ ಇಲಾಖೆಯಲ್ಲಿ ಆಗುತ್ತಾ ಇರುವುದನ್ನು ನೋಡಿದರೆ ಕಣ್ಣಿದ್ದೂ ಕುರುಡಗಂತೆ, ಕಿವಿಯಿದ್ದೂ ಕಿವುಡರಂತೆ ಆಗಬೇಕಾಗಿದೆ. ಸತ್ಯ, ನ್ಯಾಯ ಧರ್ಮಗಳೆಲ್ಲಕ್ಕೂ ಕೂಡ ಲೋಪವಾಗಿದೆ ಎಂದರೆ ಖಂಡಿತವಾಗಿಯೂ ತಪ್ಪಾಗಲಾರದು ಎಂದು ನಾನು ಹೇಳುತ್ತೇನೆ. ಮಂತ್ರಿಗಳು ಹೋದಸಾರಿ ಪೋಲೀಸ್ ಇಲಾಖೆಯ ವಿಚಾರದಲ್ಲಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತಾ ಅಂಕಿ ಅಂಶಗಳನ್ನು ಕೊಟ್ಟರು. ಎಷ್ಟು ಕೇಸುಗಳಾಗಿವೆ, ಅವುಗಳಲ್ಲಿ ಎಷ್ಟು ಕನ್‌ವಿಕ್ಷನ್‌ಗಳಾಗಿವೆ ಎಂಬದನ್ನು ಹೇಳಿದರು. ಅದೇರೀತಿ ಮೊನ್ನೆ ತಾನೆ ಕೆಲವು ಇಂಟರ್‌ಪೆಲೇಷನ್‌ಗಳಿಗೆ ಉತ್ತರ ಕೊಡುವಾಗ ಎಷ್ಟು ಖೂನಿಗಳಾದವು, ಎಷ್ಟು ದರೋಡೆಗಳಾದವು, ಎಷ್ಟು ಲೂಟಿಗಳಾದವು ಎಂಬುದನ್ನು ಹೇಳಿದರು. ಅವರು ಕೊಟ್ಟಿರ ತಕ್ಕ ಅಂಕಿಅಂಶಗಳನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಏನೂ ಆಗಿಲ್ಲವೊ ಏನೋ ಎನ್ನುವ ರೀತಿಯಲ್ಲಿ ನಮ್ಮ ಇಲಾಖೆ ಬಹಳ ಸ್ವಚ್ಛವಾಗಿದೆ ಎಂದು ಹೇಳಿಕೊಂಡರೆ ನಿಜವಾಗಿಯೂ ಕೂಡ ಅವರು ಆತ್ಮವಂಚನೆ ಮಾಡಿಕೊಂಡ ಹಾಗಾಗುತ್ತದೆ. ಈ ರೀತಿ ಪೋಲೀಸ್ ಇಲಾಖೆಯಲ್ಲಿ ಆಗುತ್ತಾ ಇರುವುದನ್ನು ಸರ್ಕಾರದವರ ಗಮನಕ್ಕೆ ತಂದು ತಕ್ಕ ಪರಿಹಾರೋಪಾಯವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡದೇ ಹೊದದ್ದಕ್ಕೆ ಪ್ರತಿಯೊಬ್ಬ ಎಂ. ಎಲ್. ಎ.ಯೂ ಕೂಡ ಸರ್ಕಾರ ಮಾಡುತ್ತಾ ಇರುವ ಪಾಪಕ್ಕೆ ಗುರಿಯಾಗಬೇಕಾಗುತ್ತದೆ. ಪೋಲೀಸ್ ಇಲಾಖೆಯಲ್ಲಿ ಇವೊತ್ತು ನೋಡಿ ಸತ್ಯವಾಗಿ ಹೇಳುತ್ತೇನೆ, ನನ್ನ ಜೊತೆಯಲ್ಲಿ ಮಂತ್ರಿಗಳು ಎಂಟು ದಿವಸ ಬರಲಿ, ಪೋಲೀಸ್ ಸ್ಟೇಷನ್‌ಗಳೇ ಜೂಜಿನ ಕಟ್ಟೆಗಳಾಗುತ್ತಾ ಇವೆ. ಎಲ್ಲಿ ಪೋಲೀಸ್‌ನವರೇ ಆಶ್ರಯಕೊಟ್ಟು ಜೂಜಾಡಿಸಿ 200ರೂಪಾಯಿ 300 ರೂಪಾಯಿ ಮಾಮೂಲು ತೆಗೆದು ಕೊಳ್ಳುತ್ತಾಯಿದ್ದಾರೆ, ಎಲ್ಲಿ

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ಪೋಲೀಸ್ ನವರೇ ಜೂಜಾಡುವವರ ಮಧ್ಯೆ ಸೇರಿ ಕೊಂಡು ಅವರೇ ನಿಂತು ಜೂಜಾಡಿಸುತ್ತಾರೆ ಎನ್ನು ವಂಥ ನೂರಾರು ನಿದರ್ಶನಗಳನ್ನು ತೋರಿಸಬಲ್ಲೆ. ಇಲ್ಲಿ ಅವರಿಗೆ ನಾನು ಏನು ಹೇಳಿದರೂ ನಂಬುವುದಿಲ್ಲ. ಆದ್ದರಿಂದ ನನ್ನ ಜೊತೆಯಲ್ಲಿ ಎಂಟು ದಿವಸ ಬರಲಿ, ಅವರಿಗೆ ತಿಳಿಯುತ್ತದೆ. ಈ ಸಂದರ್ಭದಲ್ಲಿ ಸರ್ಕಾರದವರಿಗೆ ನನ್ನ ಪ್ರಾರ್ಥನೆ ಏನೆಂದರೆ ಪ್ರತಿಯೊಬ್ಬ ಎಂ.ಎಲ್.ಎ. ಗೂ ಒಂದೊಂದು ಕ್ಯಾಮರಾ ಕೊಡಿ. ಬಾಯಲ್ಲಿ ಹೇಳುವುದು, ಕಿವಿಯಿಂದ ಕೇಳುವುದು ಇದೆಲ್ಲಕ್ಕಿಂತಲೂ ಪ್ರತ್ಯಕ್ಷವಾಗಿ ಕೆಲವು ಅಂಕಿ ಅಂಶಗಳನ್ನು ಆ ಮೂಲಕ ಸಂಗ್ರಹಿಸಿ ಈರೀತಿ ಅನ್ಯಾಯವಾಗುತ್ತಾ ಇದೆ ಎಂದು ಅವರ ಮನಸ್ಸಿಗೆ ನಾಟುವಂತೆ ಹೇಳಬಹುದು. ಖಂಡಿತವಾಗಿಯೂ ಈ ರೀತಿ ಆಗುತ್ತಿರುವುದನ್ನು ತಪ್ಪಿಸಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಒಬ್ಬ ಸದಸ್ಯರು.—ನೀವೇ ಒಂದು ಕ್ಯಾಮರಾ ಇಟ್ಟು ಕೊಳ್ಳಬಹುದು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ನಾನೇನೂ ಅಷ್ಟು ಸಾಹುಕಾರ ಆಗಿಲ್ಲ. ಈಗ ದೇಶದಲ್ಲಿ ಏನು ಅಭಿವೃದ್ಧಿ ಯಾಗಿದೆ? ಮೊದಲನೆ ಪಂಚವಾರ್ಷಿಕ ಯೋಜನೆಯ ಪರಿಣಾಮವಾಗಿ ಸರಾಸರಿ ತಲೆ ಒಂದಕ್ಕೆ ವರ್ಷಕ್ಕೆ 18 ರೂಪಾಯಿ ಆದಾಯ ಹೆಚ್ಚಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಟಾಕ್ಸ್ ಎಷ್ಟು ಹೆಚ್ಚಿಗೆ ಹಾಕಿದ್ದಾರೆ ಎಂಬುದನ್ನು ಯೋಚನೆ ಮಾಡಬೇಕು. ತಲಾ 20ರೂಪಾಯಿಗಳಷ್ಟು ಟ್ಯಾಕ್ಸ್ ಹೆಚ್ಚಾಗಿದೆ. ಸಾಮಾನ್ಯ ಜನರ ಸ್ಥಿತಿ ಮತ್ತುಜೀವನ ಮಟ್ಟ ನೋಡಿದರೆ ಖಂಡಿತವಾಗಿ ರೂಪಾಯಿಯಲ್ಲಿ ಒಂದು ಆಣೆ ಅಷ್ಟೂ ಪ್ರಗತಿಯಾಗಿ ಮುಂದುವರಿದಿಲ್ಲ. ಜನರಿಗೆಅನೇಕ ತೊಂದರೆಗಳು ಇವೆ. ಜನರಲ್ಲಿ ಬಡತನ, ಅವಿದ್ಯಾವಂತನಾಗಿರುವುದು ಇದು ನಮ್ಮ ದುರ್ದೈವನಾಗಿದೆ. ವಿದ್ಯಾವಂತರ ನಿರುದ್ಯೋಗ ಬಹಳ ಭೀಕಕರವಾಗಿದೆ ಎಂದು ಕೆಲವರ ವಾದ. ಆದರೆ ಇಂದು ದೇಶದಲ್ಲಿ ಒಂದು ದೊಡ್ಡ ರೋಗವಾಗಿ ಹರಡಿಕೊಂಡಿರುವ ಈ ನಿರುದ್ಯೋಗಿ ರಾಜಕಾರಣಿಯ ಸ್ವರೂಪವನ್ನು ತಿಳಿಸಿಕೊಡುತ್ತೇನೆ. ಸ್ಟೇಟ ಮಟ್ಟದಲ್ಲಿ ಡಿಸ್ಟ್ರಿಕ್ಟ್ ಮಟ್ಟದಲ್ಲಿ ತಾಲ್ಲೂಕ ಮಟ್ಟದಲ್ಲಿ ಹಳ್ಳಿಗಳ ಮಟ್ಟದಲ್ಲಿ ಈ ನಿರುದ್ಯೋಗಿ ರಾಜಕಾರಣಿಗಳು ಹಬ್ಬಿಕೊಂಡಿದ್ದಾರೆ. ಇವರ ಬಗ್ಗೆ ಮಂತ್ರಿಗಳು ಸಹ ಏನೂ ಮಾಡಲಾರರು. ನಾನು ಒಮ್ಮೆ ಜಿಲ್ಲಾಧಿಕಾರಿಗಳ ಬಳಿಗೆ ಹೋದಾಗ ಅಂಥವರಿಂದ ಶಿಫಾರಸು ತನ್ನಿ ಎಂದು ನನಗೆ ಹೇಳಿದರು. ಆದಕಾರಣ ಇದು ದೇಶಕ್ಕೆ ಬಂದಿರುವ ದೊಡ್ಡ ರೋಗ. ಇದು ಖಂಡಿತವಾಗಿ ಅವಮಾನಕರ. ಇಂಥವರ ದಾಕ್ಷಿಣ್ಯದ ಭಯದಿಂದ ಇರುವುದನ್ನು ಸರಕಾರ ಬಿಡಬೇಕು; ಮಂತ್ರಿಮಂಡಲ ರಾಜೀ ನಾಮೇ ಕೊಡಲು ತಯಾರು ಇರಬೇಕು. ಆಡಳಿತ ಸ್ವಚ್ಛವಾಗಿದ್ದರೆ ಜನರಿಗೆ ಉಪಕಾರವಾಗುತ್ತದೆ. ಇಂಥ ನಿರುದ್ಯೋಗಿ ರಾಜಕಾರಣಿಯೊಬ್ಬನು ಇದ್ದಿಲು ಲಾರಿಯೊಂದನ್ನು ಚೆಕ್‌ಮಾಡಿ 50 ರೂಪಾಯಿ ತೆಗೆದುಕೊಂಡು 200 ರೂಪಾಯಿಗೆ ಪತ್ರಬರೆಸಿ ಕೊಂಡನು. ಪೋಲೀಸರು ಮತ್ತು ಜನರ ಮಧ್ಯೆ ಇವರು ನಿಲ್ಲುತ್ತಾರೆ. ಜನರು ಮತ್ತು ಕಚೇರಿ ಮಧ್ಯೆ ಇವರು ನಿಲ್ಲುತ್ತಾರೆ. ಅದರಿಂದಾಗಿ ಆಡಳಿತದಲ್ಲಿ ಒಂದು ನಿಯಮವಿಲ್ಲ. ಸರ್ಕಾರದ ಮಂತ್ರಿಗಳು ದಾಕ್ಷಿಣ್ಯಭಯ ಹಾಗು ಸ್ವಾರ್ಥ ಬಿಡಬೇಕು. ಆಗ ದೇಶ ಮತ್ತು ಜನಕ್ಕೆ ಉಪಕಾರ ವಾದೀತು. ಇಲ್ಲವಾದರೆ ಧರ್ಮಸತ್ಯದಿಂದ ಆಡಳಿತ ಮಾಡುವದಕ್ಕೆ ಸಾಧ್ಯವಿಲ್ಲ ವೆಂದು ನಾನು ಹೇಳುತ್ತೇನೆ. ನಾವು ಹೇಳಿ ಹೇಳಿ ಬೇಸತ್ತಿದ್ದೇವೆ ಎಲ್ಲರಿಗೂ ಹೇಳಿದ್ದೇವೆ. ಆದಕಾರಣ ನಾವು ಹೇಳುವುದರಲ್ಲಿ ನಿಜಾಂಶ ಏನು ಇದೆ ಎಂಬುದಕ್ಕೆ ಪರಿಶೋಧನೆಮಾಡಬೇಕು. ನಾನು ಕೊನೆಯ ಸವಾಲು ಹಾಕುತ್ತೇನೆ. ಮಂತ್ರಿಗಳು ನನ್ನ ಜೊತೆಯಲ್ಲಿ ಎಂಟು ದಿವಸ ಬರಲಿ. ನಾನು ತೋರಿಸುತ್ತೇನೆ. ಸತ್ಯಧರ್ಮದಿಂದ ಸರಕಾರ ತಮ್ಮ ಆಡಳಿತ ನಡೆಸಬೇಕು ಆದಷ್ಟು ಜಾಗ್ರತೆ ಸರಕಾರದ ಮಂತ್ರಿಗಳು ಮನಸ್ಸಿನ ಪರಿಶೋಧನೆಮಾಡಿಕೊಳ್ಳಬೇಕು. ಇಷ್ಟು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ—ಮಾನ್ಯ ಸಭಾಪತಿಗಳೆ, ನಾನು ತಿಳಿದುಕೊಂಡ ಹಾಗೆ ಇವೊತ್ತಿನ ದಿವಸ ಈ ಬಡ್ಜೆಟ್ ಮೇಲೆ ಮಾತನಾಡಲು ನಾನು ಅರೆ ಮನಸ್ಸಿನಿಂದ ನಿಂತಿದ್ದೇನೆ. ನಾವು ಮಾತನಾಡದೇ ಇದ್ದರೆ ಕರ್ತವ್ಯ ಲೋಪವಾಗುತ್ತದೆ. ಆದ್ದರಿಂದ ಈಗ ಮಾತನಾಡಬೇಕಾಗಿದೆ. ನಿನ್ನೆಯಿಂದ ಈ ಸಭೆಯಲ್ಲಿ ಮೈಸೂರು ಸಂಸ್ಥಾನದ 1958-59ನೆಯ ವರ್ಷದ ಮುಂಗಡ ಪತ್ರಿಕೆಯ ಮೇಲೆ ಚರ್ಚೆಯಾಗುತ್ತಾ ಇದೆ. ಈ ಸಭೆ ಪ್ರಾರಂಭವಾದಾಗಿನಿಂದಲೂ ದೇಶದಲ್ಲಿ ಆಡಳಿತ ಹೀಗೆ ಇರಬೇಕು, ಹಣ ಹಾಗೆ ಖರ್ಚುಮಾಡಬೇಕು, ಟ್ಯಾಕ್ಸ ಏನೇನು ಇರಬೇಕು ಹಾಗೆ ಹೀಗೆ ಎಂದು ನಾನಾ ವಿಧದಲ್ಲಿ ಚರ್ಚೆ ಆಗುತ್ತಲೇ ಇದೆ. ಇಷ್ಟೇ ಅಲ್ಲದೆ ಈಗ ಇರತಕ್ಕ ಯಾವ ಯಾವ ಕಾರ್ಯಗಳಿಗೆ ಎಷ್ಟೆಷ್ಟು ಖರ್ಚು ಆಗಬೇಕು, ಆಗಕೂಡದು, ಹಣ ಸರಿಯಾಗಿ ಖರ್ಚುಮಾಡಿದ್ದಾರೆಯೇ ಎಂಬ ಅನೇಕ ಅಂಶಗಳನ್ನು ಈಗ ನಾವು ಪರ್ಯಾಲೋಚನೆ ಮಾಡಬೇಕಾಗಿದೆ. ನಮ್ಮ ಮುಂದೆ ಬಣ್ಣ ಬಣ್ಣದ ಯೋಜನೆಗಳನ್ನು ಇಟ್ಟಿದ್ದಾರೆ. ಆದರೆ ನನಗೆ ಕೌಟಿಲ್ಯ ಅರ್ಥಶಾಸ್ತ್ರವನ್ನು ಅರ್ಥಮಾಡಿಕೊಳ್ಳಲು ಆಗಿಲ್ಲ, ದೊಡ್ಡ ದೊಡ್ಡ ಅಂಕಿ ಅಂಶಗಳನ್ನು ಮಾತ್ರ ನಮ್ಮ ಮುಂದೆ ಇಟ್ಟಿದೆ. ಈ ಯೋಜನೆಗಳಿಂದ ಲಾಭ ಎಷ್ಟು ದೊರೆಯುತ್ತದೆ? ಹಣ ಎಷ್ಟು ತಿಂದು ಹಾಕಲಾಗುತ್ತದೆ. ಎಂಬುದನ್ನು ಹೇಳುತ್ತಾ ಹೋದರೆ ಇದು ನಿಜವಾಗಿ ಖೋತಾ ಬಡ್ಜೆಟ್ ಆಗಿದೆ. ನಾವು ಎಷ್ಟೇ ಮಾತನಾಡಿ ಹೇಳಲಿ, ಪರಿಸ್ಥಿತಿಯ ಸತ್ಯವಾದ ಚಿತ್ರವನ್ನು ಸರಕಾರದ ಮುಂದಿಡಲಿ, ಅದರ ಪ್ರಯೋಜನವೇನೂ ಆಗುವದಿಲ್ಲ. ಮೆಜಾರಿಟಿ ಬಲ ಇದೆಯೆಂದು ಏನು ಬೇಕಾದರೂ ಮಾಡಬಹುದೆ? ಪೋಲೀಸ ಖಾತೆಗೆ ಮೂರು ಕೋಟಿ ರೂಪಾಯಿಬೇಕು ಎಲ್ಲರೂ ಕೈ ಎತ್ತಿರಿ ಎಂದು ಹೇಳಿ ಬೇಡಿಕೆಯನ್ನು ಪಾಸ್ ಮಾಡಿಸಿಕೊಳ್ಳಬಹುದು. ಪೋಲಿಸರು ಹೀಗೆ ಮಾಡುತ್ತಿದ್ದಾರೆ, ಅಮಲ್ದಾರರು ಹಾಗೆ ಮಾಡಿದ್ದಾರೆ, ಮಂತ್ರಿಗಳು ಹೀಗೆ ಮಾಡುತ್ತಾರೆ, ಚೀಫ್ ಸೆಕ್ರೆಟರಿ ಪ್ರೊಮೋಷನ್ ಕೊಡಲಿಲ್ಲ ಎಂಬುದನ್ನು ನಾವು ಹೇಳಿದ್ದೆಲ್ಲಕ್ಕೂ ಕಿವಿಗೊಡದೆ ಕೆಳಗೆ ಹಾಕಿಬಿಟ್ಟು ಮೇಲೆ ಕುಳಿತು ಕೊಂಡರೆ ಹೇಗೆ? ದೇಶದಲ್ಲಿ ಏನಾಗುತ್ತಾ ಇದೆ ಎಂಬ ಸತ್ಯವಾದ ಮಾತನ್ನು ನಾನು ಹೇಳುತ್ತಾ ಇದ್ದೇನೆ. ಸತ್ಯವಾಗಿ ನಡೆದ ಘಟನೆಗೆ ಸುಳ್ಳಿನ ತಂತಿಯನ್ನ ಹೆಣೆದು ನಮ್ಮ ಮುಂದೆ ಹೇಳಿದರೆ ಅದನ್ನು ನಾವು ಏತಕ್ಕೆ ಹೇಗೆ ನಂಬಬೇಕು? ಅದೆಲ್ಲಾ ಶ್ರೀ ಕೃಷ್ಣ ಪರಮಾತ್ಮನಿಗೇ ಗೊತ್ತು. ನಾನು ಆ ಶ್ರೀ ಕೃಷ್ಣಪರಮಾತ್ಮನನ್ನೂ ಅರ್ಜುನನನ್ನೂ ಎಲ್ಲಿ ಹುಡುಕಿ ಕೊಂಡು ಹೋಗಲಿ? ಬಸವಣ್ಣನವರ ವಚನ ಬೇಕಾದರೆ ಹೇಳಬಲ್ಲೆ. ಈ ಮೊದಲೇ ಈ ಸಭೆಯ ಪ್ರಾರಂಭದಲ್ಲಿ ಒಂದು ಸಲ ನಾನು ಅರಿಕೆಮಾಡಿಕೊಂಡ ಹಾಗೆ ವಿಷಮ ಪರಿಸ್ಥಿತಿಯಲ್ಲಿ ನಾವು ಈ ಸಭೆಯಲ್ಲಿ ಸೇರಿದ್ದೇವೆ. ಒಂದು ಅನಿಷ್ಟ ವಾತಾವರಣದಲ್ಲಿ ಸೇರಿದ್ದೇವೆ. ನಿಜವಾಗಿಯೂ ಹೇಳು

ತ್ತೇನೆ, ಮೈಸೂರು ಸಂಸ್ಥಾನಕ್ಕೆ 1958-59ನೆಯ ವರ್ಷ ಲಾಭದಾಯಕವಾಗಿಲ್ಲ.

ಒಂಭತ್ತುಗಗಳು ಯಾವುದೋ ಭೀಕರ ಸ್ಥಾನದಲ್ಲಿ ಕುಳಿತು ಈ ದೇಶದ ಭವಿಷ್ಯವನ್ನು ಹಾಳು ಮಾಡಿವೆ ಎಂದು ಎನ್ನಿಸುತ್ತದೆ. ಈಗಾಗಲೇ ಮೌಲಾನಾ ಅಜಾದರ ಗುಣಗಾನ ಮಾಡಿ ಚರಮ ಗೀತೆ ಹಾಡುತ್ತಾ ಇರಬಹುದು. ಅದಾದ ಮೇಲೆ ಕಾಂಗ್ರೆಸ್ ಒಂದು ಕಡೆ, ಪಿ.ಎಸ್.ಪಿ. ಒಂದು ಕಡೆ, ಕಮ್ಯೂನಿಸ್ಟ್ ಪಕ್ಷ ಒಂದು ಕಡೆ ಮಥನ ಮಾಡಿದರು; ಶರಧಿ ಮಥನ ಮಾಡುವ ಹಾಗೆ ಮಾಡಿದರು. ಒಂದು ಕಡೆ ಅಮೃತ, ಒಂದು ಕಡೆ ವಿಷ ಬಂತು. ಅಮೃತಪಾನ ಮಾಡಿದವರು ಇನ್ನೂ ಅಧಿಕಾರದಲ್ಲಿ ಸಿಕ್ಕಿಕೊಂಡಿದ್ದಾರೆ. ಒಂದು ದೇಶದಲ್ಲಿ ನಡೆಯುವ ಅಮಾನುಷ ಕೃತ್ಯಗಳನ್ನು ಲೆಕ್ಕ ಹಾಕಿದರೆ ಸರ್ಕಾರಕ್ಕೆ ಕೀರ್ತಿ ಬರುವ ಸನ್ನಿವೇಶ ಕಂಡುಬರುವುದಿಲ್ಲ. ಈಗ ರಾಮರಾಜ್ಯ ಕಟ್ಟುವುದಕ್ಕೆ ಹೊರಟಿದ್ದಾರೆ. ಆದರೆ ಮಾಡುತ್ತಿರುವ ಕೆಲಸ ನೋಡಿದರೆ ಒಂದಕ್ಕೊಂದಕ್ಕೆ ಸಂಬಂಧವಿಲ್ಲ. ಉದಾಹರಣೆಗೆ ಮುನಿಯಮ್ಮನ ಒಂದೇ ಒಂದು ಕಥೆ ಸಾಕು. ಲಕ್ಷಮ್ಮನ ಕಥೆ ಸಿನೀಮಾದಲ್ಲಿ ನೋಡಿದ್ದೇವೆ. ಎಷ್ಟೋ ಸುಳ್ಳಿನ ಕಂತೆ ಹೊರಟಿದೆ. ಈಗ ಹೃದಯ ವಿದ್ರಾವಕ ಪರಿಸ್ಥಿತಿಯಿದೆ. ಈ ರಾಜ್ಯದಲ್ಲಿ ಸರ್ಕಾರವಿದೆಯೇ ಎಂದು ಜನರಿಗೆ ಎನ್ನಿಸುತ್ತಿದೆ. ನಿಜವಾಗಿಯೂ ಸರ್ಕಾರವಿದ್ದರೆ ಇಂಥ ಘೋರ ಕೃತ್ಯ ನಡೆಯುವುದಕ್ಕೆ ಅವಕಾಶ ಕೊಡುತ್ತಿರಲಿಲ್ಲ. ಸರ್ಕಾರ ತಪ್ಪು ಮಾಡಿದವರನ್ನು ಹಿಂದಿಟ್ಟುಕೊಂಡು ರಕ್ಷಣೆ ಮಾಡುತ್ತಿದೆ. ಹೀಗಿರುವಾಗ ಇಂಥವರಿಂದ ನಮಗೆ ರಕ್ಷಣೆ ಸಿಕ್ಕುತ್ತದೆಯೆ ಎಂದೆನ್ನಿಸುತ್ತದೆ. ಹಿಂದೆ ಶ್ರೀ ಪುಲ್ಲಾರೆಡ್ಡಿಯವರು ಮಂತ್ರಿಗಳಾಗಿದ್ದಾಗ ಮನೆಯ ಬಳಿ ಪೋಲೀಸು ಕಾವಲು ಹಾಕಿದ್ದರು. ಈ ದಿವಸ ಬೀದಿ ಬೀದಿಗಳಲ್ಲಿ ಕಾಂಗ್ರೆಸ್ ಎಂ.ಎಲ್.ಎ.ಗಳ ಸುತ್ತ ಹತ್ತು ಜನ ಪೋಲೀಸಿನವರು ಕಾಯುತ್ತಿದ್ದಾರೆ. ದೇಶದಲ್ಲಿ ಕಳ್ಳತನವಾಗುತ್ತಿದೆ, ಹೆಂಡ ಕುಡಿಯುತ್ತಿದ್ದಾರೆ, ಅಮಾನುಷ ಕೃತ್ಯಗಳು ನಡೆಯುತ್ತಿವೆ. ಇದರ ಮೇಲೆಲ್ಲಾ ಕಾವಲು ಹಾಕುವುದನ್ನು ಬಿಟ್ಟು ಕಾಂಗ್ರೆಸ್ಸಿನ ಮೇಲೇಕೆ ಸ್ವಾಮಿ ಪೋಲೀಸು ಕಾವಲು? ಅಧಿಕಾರದಲ್ಲಿರುವ ಜನರ ಮೇಲೇಕೆ ಕಾವಲು? ಒಬ್ಬ ಮಾಜಿ ಮಂತ್ರಿಗಳ ಮನೆಗೆ ಹೋಗಿ ಬರುವಾಗ ಇಬ್ಬರು ಪೋಲೀಸಿನವರು ಇದ್ದರು. "ಏಕೆ ಇಲ್ಲಿದ್ದೀರಿ?" ಎಂದು ಕೇಳಿದರೆ "ಏನು ಮಾಡುವುದು ಸ್ವಾಮಿ? ನಮ್ಮ ಸಾಹೇಬರು ಹೇಳಿದ್ದಾರೆ." ಎಂದರು. ಶ್ರೀ ಕಡಿದಾಳ್ ಮಂಜಪ್ಪನವರ ಮನೆಗೆ ಹೋಗಿ ಬರುವಾಗ ಅಲ್ಲಿ ಇಬ್ಬರು ಪೋಲೀಸಿನವರಿದ್ದರು.

Sri C. M. POONACHA.—Could you kindly give me the date?

Sri C. J. MUCKANNAPPA.—One week back. I have just entered the date and time in my diary. I have not brought it with me.

Sri C. M. POONACHA.—I would like to have it.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದನ್ನು ಲೆಕ್ಕ ಹಾಕಿ, ಮಂತ್ರಿಗಳ ಮೇಲೆ ಕಾವಲು ಅಂದರೆ 12 ಗಂಟೆಗೆ ಒಂದು ಸರ್ಕಾರ ಬರಬೇಕಾಗುತ್ತದೆ. ಹೀಗಾದರೆ ಜನ ಏನಂದಾರು! ದೇಶದಲ್ಲಿ ಹೃದಯ ವಿದ್ರಾವಕ ಪರಿಸ್ಥಿತಿಯಿರುವುದನ್ನು ಪರಿಶೀಲಿಸಬೇಕು. ಸರೋಜಮ್ಮನ ಓಲೆ ಕಳುವಾಗಿದೆಯೆಂದು ಮುನಿಯಮ್ಮನನ್ನು ಸಾಯಂಕಾಲ ಐದೂವರೆ ಗಂಟೆಗೆ 17ನೆಯ ತಾರೀಖಿನ ದಿನ ಪೋಲೀಸು ಸ್ಟೇಷನ್ನಿಗೆ ಕರೆದುಕೊಂಡು ಹೋದರು.

Sri C. M. POONACHA.—Sir, that is an absolute lie.

Sri C. J. MUCKANNAPPA.—Sir, I am prepared to swear before anybody. It was on the 17th evening that the woman was brought to the police station.

Sri C. M. POONACHA.—I am prepared to accept the challenge. He cannot make an irresponsible statement like that.

Mr. SPEAKER.—The Hon'ble Member may speak about facts.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—17ನೆಯ ತಾರೀಖಿನ ದಿವಸ ಐದೂವರೆ-ಆರು ಗಂಟೆ ಸಮಯದಲ್ಲಿ ಕರೆದುಕೊಂಡು ಹೋಗಿ ರಾತ್ರಿ 11-11½ ಗಂಟೆಗೆ ಬಿಟ್ಟರು. ಅಲ್ಪ ಕಾಲಾವಧಿ ಪ್ರಶ್ನೆಗೆ ಉತ್ತರ ಕೊಡುವಾಗ ಮುನಿಯಮ್ಮ ಮೆಟರ್ನಿಟಿ ಆಸ್ಪತ್ರೆಗೆ ಹೋಗಿ ಮೆಡಿಕಲ್ ಸರ್ಟಿಫಿಕೇಟ್ ಕೇಳಿದುದಾಗಿಯೂ ಅದಕ್ಕೆ ಅಲ್ಲಿ ಆಸ್ಪತ್ರೆಯವರು "ವಿಕ್ಟೋರಿಯಾ ಆಸ್ಪತ್ರೆಗೆ ಹೋಗು, ಅಲ್ಲಿ ಕೊಡುತ್ತಾರೆ." ಎಂದು ಹೇಳಿದುದಾಗಿಯೂ ತಿಳಿಸಿದರು. ಇದಕ್ಕಿಂತ ಬೇರೆ ಸುಳ್ಳಿನ ಕಂತೆ, ಸತ್ಯಕ್ಕೆ ದೂರವಾದ ವಿಚಾರ ಜಗತ್ತಿನಲ್ಲಿರುತ್ತದೆಯೆ? ರಾವಣ ಸೀತೆಯನ್ನು ಮದುವೆಯಾಗಬೇಕೆಂದು ಕದ್ದುಕೊಂಡು ಹೋದಾಗ ರಾಕ್ಷಸರೇ ಆಕೆಗೆ ಕಾವಲಿದ್ದರು. ರಾಕ್ಷಸರಾದರೂ ಕೂಡ ಅವರೂ ಸಹ ಆಕೆಗೆ ಅಷ್ಟಾಗಿ ಹಿಂಸೆ ಮಾಡಲಿಲ್ಲ. ಮೂರು ಕೋಟಿ ಚಿಲ್ಲರೆ ಹಣ ಖರ್ಚು ಮಾಡಿ ದೇಶದಲ್ಲಿರುವ ಜನರ ಮಾನ ಮರ್ಯಾದೆ ಕಾಪಾಡಲು, ಶಾಂತಿ ರಕ್ಷಣೆ ಮಾಡಲು ಪೋಲೀಸು ಇಲಾಖೆಯನ್ನು ಏರ್ಪಾಟು ಮಾಡಿರುವಾಗ ಪೋಲೀಸಿನವರು ಮಾಡುವ ಕೃತ್ಯ ನೋಡಿದರೆ ಖಂಡಿತವಾಗಿಯೂ ನಾಚಿಕೆಗೇಡು. ಪಾಕೀಸ್ತಾನ ಸರ್ಕಾರವಾದರೂ ಪರವಾಗಿಲ್ಲ, ಈ ಸರ್ಕಾರ ಬೇಡ. ಅದರಲ್ಲೂ ಪೋಲೀಸು ಖಾತೆ ಹಿಡಿದಿರುವ ಮಂತ್ರಿಗಳು ಈ ಸಭೆಯಲ್ಲಿರುವುದಕ್ಕೆ ಅರ್ಹರಲ್ಲ. ಏಕೆಂದರೆ ಅವರು ತಮ್ಮ ಚಿಕ್ಕಪ್ಪನನ್ನು ತಂದು ಅಧಿಕಾರಕ್ಕೇರಿಸಿ ಬೇಕಾದ ರೀತಿಯಲ್ಲಿ ಅಧಿಕಾರ ಚಲಾಯಿಸುತ್ತಿದ್ದಾರೆ.

Sri C. M. POONACHA.—Sir, I object to this statement. It is not I who brought the present I.G.P.

Sri C. J. MUCKANNAPPA.—I have not yielded.

Sri C. M. POONACHA.—I rise on a point of order, Sir, on the objectionable remark made by my Hon'ble friend. It is not correct to say that I brought the present I.G.P. and installed him as I.G.P. in this State. My Hon'ble friend perhaps does not know facts that led to the appointment of the present incumbent. There was a Committee of Inter-State Ministers. Sir, I am raising a specific point. The

(SRI C. M. POONACHA)

Inter-State Ministers' Committee discussed and decided upon the appointment of persons to certain key posts and at the time of the formation of the new State, the present incumbent was appointed as I.G.P. of this State. So, it is not correct to say that I brought him here and appointed him as I.G.P. Therefore, it is an utter falsehood that he is making on the floor of the House. As such, that statement should not find a place in the proceedings of this House.

AN HON'BLE MEMBER.—Is it a point of order, Sir?

Mr. SPEAKER.—The point of order seems to be that the statement made by the Hon'ble Member Sri Muckannappa should not find a place in the records. I find that I cannot help anybody in this respect. I cannot in any way say that the Hon'ble Member Sri Muckannappa has no right to say what he feels about it. At the same time, I must also say that while making certain statements Hon'ble Members should be careful about the truth of what they say.

ಶ್ರೀ ಸಿ. ಜೆ ಮುಕ್ಕಣ್ಣಪ್ಪ.—ಸ್ವಾಮಿ, ನಾನು ಹೇಳಿದ್ದು ಅಸತ್ಯವಾದರೆ, ನಾನು ಹೇಳಿದ ಅಂಶ ವಾಸ್ತವಾಂಶಕ್ಕೆ ದೂರವಾದರೆ ಅದನ್ನು ಸಭಾಪತಿಗಳ ಅನುಮತಿ ಪಡೆದು ವಾಪಸು ತೆಗೆದುಕೊಳ್ಳುವುದಕ್ಕೆ ಸಿದ್ಧ. ಅಧಿಕಾರದ ಅವಧಿ ಮುಗಿದ ನಂತರ ಮತ್ತೆ ಎರಡು ವರ್ಷ ಕಾಲ ಎಕ್ಸ್‌ಟೆನ್‌ಷನ್ ಸಿಕ್ಕಿದೆ.

Sri C. M. POONACHA.—That itself is another falsehood. Where is the two years' extension?

Mr. SPEAKER.—It is one thing to say that the appointment was made by the Home Minister and it is another thing to say that his term has been extended by the Home Minister.

*ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಮಾನ್ಯ ಸ್ನೇಹಿತರಾದ ಶ್ರೀ ಮುಕ್ಕಣ್ಣಪ್ಪನವರು ದಯಮಾಡಿ ಎರಡು ನಿಮಿಷ ಇಣ್ಟರ್‌ವೀನ್ ಮಾಡುವುದಕ್ಕೆ ಅವಕಾಶ ಕೊಡಬೇಕು. ಶ್ರೀ ಮುಕ್ಕಣ್ಣಪ್ಪನವರು ಐ.ಜಿ.ಪಿ. ವಿಚಾರ ಪ್ರಸ್ತಾಪ ಮಾಡಿದರು. ಐ.ಜಿ.ಪಿ. ಏನು ಮಾಡುತ್ತಾರೋ ಅದಕ್ಕೆ ನಾವು ಭಾಗಿಗಳು, ಒಳ್ಳೆಯದು ಮಾಡಿದರೆ ಕೀರ್ತಿಗೆ ಭಾಗಿಗಳು, ಅವರಿಂದ ಲೋಪ ಬಂದರೆ ಅಪಕೀರ್ತಿಗೂ ನಾವು ಭಾಗಿಗಳು. ಆದ್ದರಿಂದ ಮಂತ್ರಿಗಳಿಗೆ ಬೇಕಾದಾಗ ಈ ವಿಚಾರ ಹೇಳಬಹುದು, ಪೋಲೀಸು ಇಲಾಖೆ ಆಡಳಿತ ಸರಿಯಾಗಿ ನಡೆಯುತ್ತಿಲ್ಲವೆಂದು ಇಲ್ಲಿ ಹೇಳಬಹುದು. ಈಗ ಅವರು ಪ್ರಸ್ತಾಪ ಮಾಡುತ್ತಿರುವ ವಿಚಾರವನ್ನು ಬಹಳ ದೂರ ಸ್ಟ್ರೆಚ್ ಮಾಡದೇ ಇದ್ದರೆ ಇಲ್ಲಿ ನಡೆಯುವ ಚರ್ಚೆ ಆಪ್ಯಾಯಮಾನವಾಗಿರುತ್ತದೆ ಎಂದು ಸಲಹೆ ಮಾಡುತ್ತೇನೆ.

ಇನ್ನೊಂದೇನೆಂದರೆ, ಚರ್ಚೆನಡೆಯುವ ವೇಳೆಯಲ್ಲಿ ಸರ್ಕಾರದ ಮಂತ್ರಿಗಳು ಮಧ್ಯೆ ಪ್ರವೇಶಿಸಿದರೆ ನಾನು yield ಆಗುವುದಿಲ್ಲವೆಂದು ಹೇಳಬಾರದು. ಏಕೆಂದರೆ ಅವರು ಮಧ್ಯೆ ಪ್ರವೇಶಿಸುವುದರಿಂದ ಚರ್ಚೆಯುಸರಿಯಾದ ರೀತಿಯಲ್ಲಿ ನಡೆಯುವುದಕ್ಕೆ ಅನುಕೂಲವಾಗುತ್ತದೆ. ಅನೇಕವೇಳೆ ನಮ್ಮಲ್ಲಿ ಸಾಕಷ್ಟು ಅಂಕಿ ಸಂಖ್ಯೆಗಳು ಇಲ್ಲದೆ, ವಿಚಾರಗಳು ನಮಗೆ ಸರಿಯಾಗಿ ತಿಳಿಯದೆ ಚರ್ಚೆಮಾಡುತ್ತ ಇರಬಹುದು. ಆ ಸಮಯದಲ್ಲಿ ಮಂತ್ರಿಗಳು intervene ಮಾಡಿ ಏನಾದರೂ ಹೇಳುತ್ತೇವೆಂದರೆ ಸದಸ್ಯರು, ನಾನು yield ಆಗುವುದಿಲ್ಲ, ನನಗೆ ಹಕ್ಕು (right) ಇದೆ ಎಂದು ಮಂತ್ರಿಗಳ ವಿಚಾರದಲ್ಲಿ ಮಾತ್ರ ಆ right exercise ಮಾಡದೆ ಇರುವುದು ಒಂದು ಸಂಪ್ರದಾಯವೆಂದು ತಿಳಿದುಕೊಂಡಿದ್ದೇನೆ. ಇದನ್ನು ಮಾನ್ಯ ಮುಕ್ಕಣ್ಣಪ್ಪನವರು ಇನ್ನೂಸ್ವಲ್ಪ ಸಮಾಧಾನವಾದ ವೇಳೆಯಲ್ಲಿ ಪರಿಶೀಲನೆ ಮಾಡಬೇಕು ಎಂದು ತಮ್ಮ ಮೂಲಕ ತಿಳಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಷ್ಟು ಹೇಳುತ್ತೇನೆ, ಈ ಪೋಲೀಸ್ ಖಾತೆಯ ಆಡಳಿತ ಶಿಥಿಲವಾಗಿದೆ, ಮೈಸೂರು ಸಂಸ್ಥಾನದಲ್ಲಿ ಹೊಸ ಐ.ಜಿ.ಪಿ. ಬಂದ ಮೇಲೆ ಆಡಳಿತ ಬಹಳ ಶಿಥಿಲವಾಗಿದೆ. ಮಾನ್ಯಮಾಜಿ ಗೃಹಮಂತ್ರಿಗಳಾಗಿದ್ದ ಶ್ರೀ ಮಾನ್ ಎಂ. ವಿ. ರಾಮರಾಯರಿಂದ ಆ ಶಾಖೆ ಈಗಿನ ಗೃಹಸಚಿವರಿಗೆ ವರ್ಗವಾದಮೇಲೆ ಮತ್ತಷ್ಟು ಶಿಥಿಲವಾಗಿದೆ. ಇದರಿಂದ ದೇಶದಲ್ಲಿ ಅರಾಜಕತೆಯುಂಟಾಗಿ ಜನಗಳ ಮನಸ್ಸಿನಲ್ಲಿ ನೆಮ್ಮದಿಯಿಲ್ಲದೆ ಅವರು ನಿಜವಾಗಿಯೂ ಬಹಳ ಭಯದಲ್ಲಿದ್ದಾರೆ. ಇದಕ್ಕೆ ಕಾರಣವೇನೆಂದು ಸರ್ಕಾರದವರು ಯೋಚನೆಮಾಡಬೇಕು 14-15 ಲಕ್ಷಪ್ರಜಾ ಸಂಖ್ಯೆಯಿರತಕ್ಕ ದೊಡ್ಡಪಟ್ಟಣದಲ್ಲಿ ನಡೆದಂಥ ಒಂದು ಘೋರ ಕೃತ್ಯವನ್ನು ಇವೊತ್ತಿನದಿವಸ suppress ಮಾಡಿದ್ದಾರೆ, ಸತ್ಯಾಂಶಗಳನ್ನು ಕಣ್ಣುಮರೆ ಮಾಡಿದ್ದಾರೆ. ಒಂದು ವಿಷಯವನ್ನು ನಾವೆಲ್ಲರೂ ಯೋಚನೆ ಮಾಡಬೇಕು. ಇಂಥ ಹೇಯವಾದ ಕೆಲಸವನ್ನು ಯಾರಾದರೂ ಮೈಸೂರು ಸಂಸ್ಥಾನದಲ್ಲಿ ಬೇಜವಾಬ್ದಾರಿ ಸರ್ಕಾರವಿದ್ದಾಗ, ಮಿರ್ಜಾಸಾಹೇಬರು, ಮಾಧವರಾಯರು ಅಥವ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ದಿವಾನರಾಗಿದ್ದಾಗ, ಮಾಡಿದ್ದರೆ ತಾವೆಲ್ಲ ಏನು ಹೇಳುತ್ತಿದ್ದಿರಿ ಎನ್ನುವುದನ್ನು ಯೋಚನೆ ಮಾಡಬೇಕು. ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಇವೊತ್ತು ದೆಹಲಿಯಲ್ಲಿ ಡೆಪ್ಯುಟಿ ಮಂತ್ರಿಗಳಾಗಿದ್ದಾರೆ. ಇವರು ದಿವಾನ್ ಮಾಧವರಾಯರಿಗೆ, 'ಮದೋನ್ಮತ್ತರಾಗಿರುತ್ತೀರಿ, ಅಧಿಕಾರದಲ್ಲಿರುವುದಕ್ಕೆ ಲಾಯಖ್ ಇಲ್ಲ. ನಾನು ನಿಮ್ಮನ್ನು ಅಧಿಕಾರದಿಂದ ಇಳಿಸುತ್ತೇನೆ' ಎಂದು ಹೇಳಿದ್ದರು. ಪ್ರಜಾಪ್ರಭುತ್ವ ಬಂದು ಹತ್ತು ವರ್ಷಗಳಾದ ಮೇಲೆ ಇಂಥ ದೌರ್ಜನ್ಯ ನಡೆಯಲು ಅವಕಾಶಕೊಟ್ಟಿರುವುದರಿಂದ, ಆಡಳಿತಪಕ್ಷ ಎಷ್ಟು ದೊಡ್ಡದಾಗಿಯೇ ಇರಲಿ, ನೀವು ಅವರನ್ನು ಅಧೀನದಲ್ಲಿ ಇಟ್ಟುಕೊಂಡಿಲ್ಲ, ಅವರನ್ನು ಹದ್ದಿನಲ್ಲಿಟ್ಟಿಲ್ಲ, ಅವರು ಮಾಡತಕ್ಕ ಕೆಲಸ ಕಾರ್ಯಗಳ ಪರಿಚಯ ನಿಮಗಿಲ್ಲ, ಅದರಿಂದಲೇ ದೇಶದಲ್ಲಿ ಇಷ್ಟು ದೌರ್ಜನ್ಯಗಳು ನಡೆಯುತ್ತಿವೆ ಎಂದು ಆಡಳಿತಪಕ್ಷಕ್ಕೆ ತಿಳಿಸುತ್ತೇನೆ. ಅದಕ್ಕೋಸ್ಕರ ನಾನು ಆಡಳಿತ ಪಕ್ಷದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು, ಯಾರ ಕೈಯಲ್ಲಿ ಅರ್ಧ ಸರ್ಕಾರವನ್ನುಕೊಟ್ಟಿದ್ದೀರೋ ಅಂಥವರ ಕೈಯಿಂದ ಇವೊತ್ತಿನ

ದಿವಸ ಅಧಿಕಾರವನ್ನು ವಿಭಾಗ ಮಾಡಬೇಕು. ಕಾನೂನಿನಲ್ಲಿದೆ, ಇದಕ್ಕೆ ಪ್ರಿಸಿಡೆಂಟ್ಸ್ ಇವೆ, ಕನ್ವೆನ್ಷನ್ ಇದೆ. 11ಜನ ಮಂತ್ರಿಗಳಿರತಕ್ಕ ರಾಜ್ಯದಲ್ಲಿ ಅರ್ಧಭಾಗವಿರುವ ಪೋರ್ಟ್‌ಫೋಲಿಯೋಗಳು ಒಬ್ಬರೇ ಮಂತ್ರಿಗಳ ಕೈಯಲ್ಲಿ ಕೊಟ್ಟಮೇಲೆ ಉಳಿದ ಹತ್ತು ಜನ ಮಂತ್ರಿಗಳು ಮಾಡಬೇಕಾದ ಕೆಲಸವೇನೆಂದು ನಾನು ಕೇಳುತ್ತೇನೆ. ಏಕೆಂದರೆ Industries, Police, Military, Jails, Courts, Mines, Transport, ಮುಂತಾದ ಪೋರ್ಟ್‌ಫೋಲಿಯೋಗಳು ಗೃಹಮಂತ್ರಿಗಳಿಗೆ ಇದೆ. ಹೀಗಿರುವಾಗ 11ಜನ ಮಂತ್ರಿಗಳು ಏಕೆ ಇರಬೇಕು ಎಂದು ಕೇಳುತ್ತೇನೆ. ಹನ್ನೊಂದು ಜನ ಮಂತ್ರಿಗಳಿಗೂ ಪೋರ್ಟ್‌ಫೋಲಿಯೋಗಳು ಸಮನಾಗಿ ಹಂಚಿಕೆಯಾಗಬೇಕು. ಎಲ್ಲವನ್ನೂ ನೀವೇ ಹೇಳುತ್ತೀರಿ; Decentralise ಆಗಬೇಕು, ವಿಕೇಂದ್ರೀಕರಣವಾಗಬೇಕು, ಅಧಿಕಾರದ ಕೆಲಸವನ್ನು ಎಲ್ಲರೂ ಕಲಿತುಕೊಳ್ಳಬೇಕು, ಉಪಮಂತ್ರಿಗಳಿರಬೇಕು, ಎಲ್ಲರನ್ನೂ ತಯಾರು ಮಾಡಬೇಕು ಎಂದು ಹೇಳುತ್ತೀರಿ. ಆದರೆ ಅಧಿಕಾರವನ್ನು ಕ್ರೋಡೀಕರಿಸಿ ಒಂದುಕಡೆ ಇಟ್ಟಿದ್ದೀರಿ. ಇದು ನನಗೆ ಅರ್ಥವಾಗುವುದಿಲ್ಲ. ನಿಮ್ಮಗಳ ತಲೆಯಲ್ಲಿ ಬುದ್ಧಿ ಇಲ್ಲವೇ? ನಿಮ್ಮ ತಲೆ bankrupt ಆಗಿದೆಯೇ? ಎಲ್ಲರೂ ಅವರಷ್ಟೆ ಬುದ್ಧಿವಂತರು. ಅದಕ್ಕೋಸ್ಕರ ಹೇಳುತ್ತಿದ್ದೇನೆ, ಇದು ನಿಜವಾಗಿಯೂ ತಲೆ ತಗ್ಗಿಸುವ ವಿಚಾರ. ನೀವುಗಳು ನಿಮ್ಮ ನಾಯಕರನ್ನು ಕುರಿತು ನಮಗೆ ಯೋಗ್ಯತೆ ಇಲ್ಲವೇ, ಎಲ್ಲ ಪೋರ್ಟ್‌ಫೋಲಿಯೋಗಳನ್ನೂ ಸಮವಾಗಿ ಹಂಚಿ ಎಂದು ಕೇಳಬೇಕು.

Sri RAMAKRISHNA HEGDE (Deputy Minister for Planning and Development).—Is he addressing the Minister?

Sri C. J. MUCKANNAPPA.—Yes, I am interested because it is a burden on the State Exchequer. You are drawing your salary as Deputy Minister.

ದೇಶದ ಹಣದಲ್ಲಿ ತಮಗೆ ಎಲ್ಲರಿಗೂ ಯೋಗ್ಯವಾಗಿ ವೇತನಗಳು ಬರುತ್ತಿವೆ. ಇಷ್ಟು ಹಣ ಏಕೆ ವ್ಯಥಾ ವ್ಯಯವಾಗಬೇಕು? ನಾಯಕರು ಮತ್ತು ಅವರ ಜೊತೆಗೆ ಮತ್ತೊಬ್ಬರು ಮಂತ್ರಿಗಳಾಗಿದ್ದರೆ ಸಾಕು. ಉಳಿದ ಎಂಟು ಜನರನ್ನು ಏಕೆ ಇಟ್ಟುಕೊಳ್ಳಬೇಕು? ಹೀಗೆ ಹೇಳಿದರೆ ಇಷ್ಟು ಜನ ಮಂತ್ರಿಗಳಿಗೆ ಕೆಲಸವಿಲ್ಲವೆಂದು ನನ್ನ ಅಭಿಪ್ರಾಯವಲ್ಲ. ಅವರಿಗೂ ಅವಕಾಶಕೊಡಿ. ಅವರೂ ದೇಶಕ್ಕಾಗಿ ಕಷ್ಟಪಟ್ಟಿದ್ದಾರೆ. ಮಾನ್ಯ ವೀರಣ್ಣಗೌಡರು ದೇಶಕ್ಕಾಗಿ ಎಷ್ಟು ಕಷ್ಟಪಟ್ಟಿದ್ದಾರೆ, ಎಷ್ಟು ಕಷ್ಟಪಟ್ಟು ರಾಜ್ಯವನ್ನು ಕಟ್ಟಿದ್ದಾರೆ! ಅವರಿಗೆ ಕೊಡಿ. (ನಗು) 1955ನೆಯ ಇಸವಿಯಲ್ಲಿ ಯಾರು ಟೋಪಿಹಾಕಿಕೊಂಡು ಇಲ್ಲಿಗೆ ಬಂದಿರುತ್ತಾರೋ ಅವರಿಗೆಲ್ಲಾ ಮಂತ್ರಿ ಪದವಿ ಕೊಡಿಎಂದು ಹೇಳುವುದಿಲ್ಲ. ಕಷ್ಟಪಟ್ಟಿದ್ದಾರೆ, ಒದೆ ತಿಂದಿದ್ದಾರೆ, ಮನೆಮಠ ಬಿಟ್ಟು ದೇಶದೇಶ ಅಲೆದಿದ್ದಾರೆ, ಕಾಂಗ್ರೆಸ್ ಸಂಸ್ಥೆ ಕಟ್ಟಿದ್ದಾರೆ, ದೇಶದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪನೆಮಾಡಿದ್ದಾರೆ. ಇಂಥವರಿಗೆ ಪಬ್ಲಿಕ್‌ವರ್ಕ್ಸ್ ಇಲಾಖೆ ಕೊಟ್ಟಿದ್ದೀರಿ. ಮೂರು ಮಕ್ಕರಿ ಜಲ್ಲಿ ಮೇಲೆ ಆರು ತಟ್ಟಿ ಮಣ್ಣು ಹಾಕಿ ಒಂದು ಬಿಲ್ ತಯಾರುಮಾಡುತ್ತಾರೆ. ಅದಕ್ಕೆ ಪ್ರತ್ಯೇಕವಾಗಿ ಒಂದು ಪೋರ್ಟ್‌ಫೋಲಿಯೋ ಇದೆ. ಈ ಮಂತ್ರಿಗಳ ಕೈಯಲ್ಲಿ ಸರಿಯಾದ ಅಧಿಕಾರವಿಲ್ಲ. ಇದು ಏನು ತೋರಿಸುತ್ತದೆಂದರೆ ನಮ್ಮನಾಯಕರಲ್ಲಿ, ಕೆಲವು ಜನ ಮಂತ್ರಿಗಳಲ್ಲಿ ಸರಿಯಾದ ಅಧಿಕಾರವುಳ್ಳ ಮುಖ್ಯ ಖಾತೆಗಳನ್ನಿಟ್ಟರೆ ಎಲ್ಲಿ ಧಕ್ಕೆ ಬರುವುದೋ ಎಂಬಭೀತಿ ಇರುವಂತೆ ಕಾಣುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಮಾನ್ಯ ಸದಸ್ಯರು ಪ್ರಶಂಸೆಯ ಮಾತು ಎಂದು ಹೇಳುತ್ತಿದ್ದಾರೆ. ಪಬ್ಲಿಕ್‌ವರ್ಕ್ಸ್ ಇಲಾಖೆಯ ವಿಷಯದಲ್ಲಿ ಇಷ್ಟು ಲಾಘುವವಾಗಿ ಏಕೆ ತಿಳಿದುಕೊಂಡರೋ ಗೊತ್ತಿಲ್ಲ. ಒಟ್ಟುವೆಚ್ಚವಾಗುವ 40 ಕೋಟಿ ರೂಪಾಯಿಗಳಲ್ಲಿ 20-22 ಕೋಟಿ ರೂಪಾಯಿಗಳು ಖರ್ಚಾಗುವ ಇಲಾಖೆಯ ವಿಷಯದಲ್ಲಿ ಇಷ್ಟು ಸಣ್ಣದಾಗಿ ಮಾತನಾಡಬಾರದು ಎಂದು ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಾನು ಹೇಳುವುದು ಇದು ಸತ್ತ ಇಲಾಖೆ ಎಂದು. ಕೆರೆ ಕಟ್ಟುವುದು, ರಸ್ತೆಮಾಡುವುದು, ಸೇತುವೆ ಹಾಕಿಸುವುದು ಇಷ್ಟೇ ಕೆಲಸ. ಪೋಲಿಸ್ ಇಲಾಖೆಯಲ್ಲಾದರೆ, ಈಗಲೇ ಹೋಗಿ ಮುಕ್ಕಣ್ಣಪ್ಪನನ್ನು 24 ಗಂಟೆಗಳಲ್ಲಿ ಹಿಡಿದುತರಬೇಕು ಎಂದರೆ ಆ ಕೆಲಸ ನಡೆಯುತ್ತದೆ. ಪಬ್ಲಿಕ್‌ವರ್ಕ್ಸ್ ಇಲಾಖೆಯ ಸಬ್ ಓವರ್ಸಿಯರ್ ಕೈಯಿಂದ ಈ ಕೆಲಸ ಸಾಧ್ಯವೇ? ಪೋಲೀಸಿನವರು ಬೇಕಾದರೆ ಎರಡು ಕೈಗಳಿಗೂ ಬೇಡಿಯನ್ನು ತೊಡಿಸುತ್ತಾರೆ. ಅಂಥ ಅಧಿಕಾರ ಮಾನ್ಯ ಮರಾಮತ್ ಶಾಖೆಯ ಮಂತ್ರಿಗಳಿಗೆ ಇದೆಯೇ ಎಂದು ಕೇಳುತ್ತೇನೆ. ಅದಕ್ಕೋಸ್ಕರ uneven ಆಗಿ ಹಂಚಿಕೆಯಾಗಿರುವ ಪೋರ್ಟ್‌ಫೋಲಿಯೋಗಳನ್ನು ಸಮವಾಗಿ ಎಲ್ಲರಿಗೂ ಹಂಚಬೇಕು. ಆಗ ನಿಮಗೂ ಕಾಗದ ಪತ್ರಗಳನ್ನು ನೋಡುವುದಕ್ಕೆ ಅವಕಾಶವಾಗುತ್ತದೆ; ಎಲ್ಲಿ ತಪ್ಪಿದೆ, ಎಲ್ಲಿ ಅಪಘಾತ ನಡೆದಿದೆ, ಎಲ್ಲೆಲ್ಲಿ ಏನೇನು ಮಾಡಬೇಕು, ಯಾವುದನ್ನು ಮಂತ್ರಿಗಳು ಮಾಡುತ್ತಾರೆ, ಯಾವುದನ್ನು ಸರಿಪಡಿಸಬೇಕು ಎಂಬುದು ಎಲ್ಲ ಮಂತ್ರಿಗಳಿಗೂ ಗೊತ್ತಾಗುತ್ತದೆ. ನೂರಾರು ಫೈಲುಗಳು ಬಂದರೂ ಸಹ ಅವನ್ನು ಒಂದು ಲಾಜಾದಲ್ಲಿ ಬೇಕಾದರೆ ನೋಡಿ ರುಜುಹಾಕುತ್ತಾರೆ. ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಒಬ್ಬ ಅಧಿಕಾರಿಗಳು ಡೆಪ್ಯುಟಿ ಕಮಿಷನರಾಗಿದ್ದರು. ಅವರ ಬಳಿ ಕೆಲಸ ಮಾಡುತ್ತಿದ್ದ ಒಬ್ಬ ಗುಮಾಸ್ತ ನೂರಾರು ಕಾಗದಗಳ ಮಧ್ಯೆ ಒಂದು ರಾಜಿನಾಮೆ ಕಾಗದವನ್ನು ಇಟ್ಟಿದ್ದ. ಅಧಿಕಾರಿಗಳು ಇತರ ಕಾಗದಗಳ ಜೊತೆಯಲ್ಲಿದ್ದ ತಮ್ಮ ರಾಜಿನಾಮೆ ಕಾಗದಕ್ಕೂ ರುಜುಹಾಕಿ ಹೋದರು. ಚೀಫ್ ಸೆಕ್ರೆಟರಿಗಳಿಂದ ಅವರಿಗೆ, ರಾಜಿನಾಮೆ ಪತ್ರವನ್ನು ಕಳುಹಿಸಿದ್ದೀರಿ, ಅದಕ್ಕೆ ಏನು ಹೇಳುತ್ತೀರಿ ಎಂದು ನೋಟೀಸ್ ಹೋಯಿತು. ಆ ಅಧಿಕಾರಿಗಳಿಗೆ ಗಾಬರಿಯಾಗಿ ನಾನು ಅಂಥ ಪತ್ರಕ್ಕೆ ರುಜುವನ್ನೇಮಾಡಿಲ್ಲವೆಂದು ತಿಳಿಸಿದರು. ಅಂಥ ಅಧಿಕಾರಿಗಳು ಇವೊತ್ತು ಐ.ಎ.ಎಸ್. ಹುದ್ದೆಯಲ್ಲಿದ್ದಾರೆ. ಹೀಗಾಗಬಾರದು. ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳಿದ್ದಾರೆ. ಅವರು ಟೂರ್‌ಮಾಡುವುದಿಲ್ಲ. ಅವರ ಮೇಜಿನ ಮೇಲೆ ಎರಡುಕಡೆಯೂ ಫೈಲುಗಳ ದೊಡ್ಡ ರಾಶಿ ಇರುತ್ತದೆ. ಅವರು ಅವುಗಳನ್ನೆಲ್ಲ ನೋಡುತ್ತಾರೆ. ಅವರಿಗೆ ಹೊರಗಿನ ವಿಚಾರ ಪ್ರತ್ಯಕ್ಷವಾಗಿ ಗೊತ್ತಿಲ್ಲದೇ ಇದ್ದರೂ ಕಾಗದದಲ್ಲಿ ಏನಿದೆ ಎಂದು ಹೆಚ್ಚಿಗೆ ನೋಡುತ್ತಾರೆ. ಇದು compliment ಎಂದು ತಿಳಿದುಕೊಳ್ಳಬಾರದು. ಕಷ್ಟಪಟ್ಟು ಕೆಲಸ ಮಾಡುತ್ತಾರೆ. ಆ ವಿಚಾರದಲ್ಲಿ ನನಗೆ ಸ್ವಲ್ಪ ಸಂತೋಷವಿದೆ. ಅವರಿಗೆ ಇರುವುದು ಒಂದೇ ಒಂದು ಪೋರ್ಟ್‌

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಫೋಲಿಯೋ. ಯಾವ ಅಮಲ್ದಾರನನ್ನು ಕೆಳಕ್ಕೆ ಹಾಕೋಣ, ಯಾವ ಸಬ್‌ಡಿವಿಷನ್ ಅಧಿಕಾರಿಯನ್ನು ಮೇಲಕ್ಕೆ ಕಳಿಸೋಣ, ಯಾವ ಡೆಪ್ಯುಟಿಕಮೀಷನರನ್ನು ಎಲ್ಲಿಗೆ ವರ್ಗಮಾಡೋಣ, ಯಾರಿಗೆ ಜಮೀನು ಕೊಡಬಹುದು ಎಂದು ಯೋಚಿಸುತ್ತಾರೆ. Land Policy ಏನು ಹೇಳಿರುತ್ತಾರೆಯೋ ಅದನ್ನು ಮರೆತುಬಿಟ್ಟು ಮನೆಗೆಹೋಗಿ ಕುಳಿತುಕೊಳ್ಳುತ್ತಾರೆ. ಅದಕ್ಕೋಸ್ಕರವಾಗಿ ಪೋರ್ಟ್‌ಫೋಲಿಯೋಗಳು ಸಮವಾಗಿ ಹಂಚಿಕೆ ಯಾಗಬೇಕು.

ಇನ್ನೊಂದು ವಿಷಯವನ್ನು ಹೇಳುತ್ತೇನೆ. ವಿದ್ಯಾಶಾಖೆಯ ಮಂತ್ರಿಗಳಿಗೆ ಒಬ್ಬ ಉಪಮಂತ್ರಿಗಳಿದ್ದಾರೆ. ನಮ್ಮ ಸರ್ಕಾರದಲ್ಲಿ ಒಟ್ಟು ಮೂರು ಜನ ಉಪಮಂತ್ರಿಗಳಿದ್ದಾರೆ. ಅವರೆಲ್ಲ ಬಂದು ಈ ಸಭೆಯಲ್ಲಿ ಏಕೆ ಕುಳಿತುಕೊಳ್ಳುವುದಿಲ್ಲವೋ ಗೊತ್ತಿಲ್ಲ. ಅಸೆಂಬ್ಲಿಯು ಅಧಿವೇಶನದಲ್ಲಿರುವಾಗ ಮಂತ್ರಿಗಳು ಪ್ರವಾಸ ಹೋಗುತ್ತಾರೆ. ಮಂತ್ರಿಗಳು ಪ್ರವಾಸ ಹೋದರೂ ಸಹ ಉಪಮಂತ್ರಿಗಳು ಬಂದು ಇಲ್ಲಿ ಕುಳಿತುಕೊಂಡು, ಕೆಲಸವನ್ನು ಕಲಿತುಕೊಂಡು ನಾಳೆಯದಿನ ಮುಂದಿನ ಬೆಂಚುಗಳಲ್ಲಿ ಕುಳಿತುಕೊಂಡು ಆಡಳಿತ ನಡೆಸಲಿಕ್ಕೆ ಅನುಕೂಲವಾಗುತ್ತದೆ. ಪ್ರಾಯಶಃ ಇವರೂ ಪ್ರವಾಸ ಹೋಗುತ್ತಾರೆಂದು ಕಾಣುತ್ತದೆ. 10-12 ದಿನ ಕೈಗಾರಿಕಾಶಾಖೆಯ ಉಪಸಚಿವರು ನನ್ನ ಕಣ್ಣಿಗೆ ಬೀಳಲಿಲ್ಲ, ಅಭಿವೃದ್ಧಿ ಯೋಜನೆಶಾಖೆಯ ಉಪಮಂತ್ರಿಗಳು 3-4 ದಿನ ಕಣ್ಣಿಗೆ ಬೀಳಲಿಲ್ಲ. ವಿದ್ಯಾಶಾಖೆಯ ಉಪಮಂತ್ರಿಗಳನ್ನು ನಾನು ನೋಡಲೇ ಇಲ್ಲ. ಅವರು ಏಕೆ ಈ ಸಭೆಗ ಬರುವುದಿಲ್ಲ, ಅವರು ಕೆಲಸವನ್ನು ಏಕೆ ಕಲಿಯಬಾರದು? ನಿಮ್ಮ ಪಕ್ಷಕ್ಕೆ ಬಹುಮತ ವಿದೆಯೆಂದು ದೇಶದ ಹಣ ಮತ್ತು ಆಡಳಿತ ನಿಮ್ಮ ಕೈಯಲ್ಲಿದೆ ಎಂದು ಹೀಗೆಲ್ಲ ದುಡ್ಡು ಖರ್ಚು ಮಾಡುತ್ತಿದ್ದೀರಿ. ಮಾನ್ಯ ಹಣಕಾಸಿನ ಮಂತ್ರಿಗಳಾದ ಮರಿಯಪ್ಪನವರು ಖಾಯಿಲೆ ಬಿದ್ದಿದ್ದಾಗ್ಯೂ ಸಹ ದೊಡ್ಡದೊಡ್ಡದಾಗಿ ಭಾಗವತವನ್ನು ಬರೆದು ನಮ್ಮಗಳ ಮುಂದೆ ಇಟ್ಟಿದ್ದಾರೆ.

ಕಳ್ಳಭಟ್ಟಿಪರಾಬು ಖಾತೆ ಪೋಲೀಸಿನವರಿಗೆ ಸೇರಿದೆ. ನಾನು ಪೋಲೀಸ್ ಖಾತೆಯ ಮಂತ್ರಿಗಳಿಗೆ, ಕೊಡಗು ಸೌಂದರ್ಯದ ಭೂಮಿ ಎಂದು ಪ್ರಖ್ಯಾತಿಯಾಗಿದೆ, ನಿಮ್ಮ ಕಾಲದಲ್ಲಾದರೂ ನೀವು ಮೈಸೂರನ್ನೂ ಸೌಂದರ್ಯದ ಬೀಡನ್ನಾಗಿ ಮಾಡಿ ಅದರ ಕೀರ್ತಿಯನ್ನು ಬೆಳಗಬೇಕೆಂದು ಕೇಳಿದೆ. ಪಂಡಿತ ನೆಹರೂಅವರು ಸಹ ಕೊಡಗಿನ ಸೌಂದರ್ಯದ ವಿಚಾರವಾಗಿ ಹೊಗಳಿದ್ದಾರೆ. ಈ ಮಂತ್ರಿಗಳ ಕಾಲದಲ್ಲಾದರೂ ಎಲ್ಲ ಸರಿಹೋಗುತ್ತದೆಂದು ನಾನು ತಿಳಿದಿದ್ದೆ. ಲಂಬಾಣಿ ಜನರ ಹೆಂಗಸರು ಹೆಂಡವನ್ನು ಮಾರುತ್ತಾರೆಂದು ಒಬ್ಬ ಪೋಲೀಸ್ ಇನ್ಸ್ಪೆಕ್ಟರು ಆಕೆಯನ್ನು ಕರೆದುಕೊಂಡು ಹೋಗಿ ಮಾನಭಂಗ ಮಾಡಿದರಲ್ಲ ಇದು ಸರಿಯೋ ಎಂದು ಕೇಳುತ್ತೇನೆ. ಇದನ್ನು ನಾನಾಗಲೇ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ತಿಳಿಸಿದ್ದೇನೆ. ಸಿರಾಟೌನ್‌ನಲ್ಲಿ ಒಂದು ಲಾರಿ ಆಕ್ಸಿಡೆಂಟ್‌ಆಯಿತು. ಅದರ ಸಂಬಂಧದಲ್ಲಿ ಸಬ್ ಇನ್ಸ್ಪೆಕ್ಟರು 250 ರೂಪಾಯಿಗಳನ್ನು ತೆಗೆದುಕೊಂಡು ಇವೊತ್ತಿನವರೆಗೂ ಅದನ್ನು ಡಿಟೆಕ್ಟ್‌ಮಾಡಿಲ್ಲ. ಶಿವಪ್ಪನವರು ಕಳುಹಿಸಿದ್ದ ಒಂದು ಇಂಟರ್‌ಪೆಲೇಷನ್ ಮೇಲೆ ಉಪಪ್ರಶ್ನೆಗಳನ್ನು ಕೇಳಿದಾಗ ಆ ವಿಷಯ ಗೊತ್ತಿಲ್ಲವೆಂದು ಸರ್ಕಾರದವರು ಹೇಳಿದರು. ಸಬ್‌ಇನ್ಸ್ಪೆಕ್ಟರು 250 ರೂಪಾಯಿಗಳನ್ನು ತೆಗೆದುಕೊಂಡು ಕೇಸನ್ನು ಪತ್ತೆಹಚ್ಚಿಲ್ಲವೆಂದರೆ ಮುಕ್ಕಣ್ಣಪ್ಪನವರು ಆ ಬಗ್ಗೆ ಒಂದು ಅರ್ಜಿ ಕೊಡಲಿ ಎಂದು ಹೇಳಿದರು. ಶಾಸನಸಭಾ ಸದಸ್ಯರನ್ನೂ petitioner ಮಾಡುತ್ತಾರೆ.

6 P.M.

ನಾವು ಇಷ್ಟು ಅಂಕಿ ಅಂಶಗಳನ್ನು ಮುಂದಿಟ್ಟು ಮಾತನಾಡುವಾಗ ಎಷ್ಟು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇವೆ ಎಂದು ತಿಳಿದುಕೊಳ್ಳಿ. ಮಾತನಾಡಿದ್ದರಲ್ಲಿ ಸುಳ್ಳು ಇದ್ದರೆ ನಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಬರೆಸಿಕೊಳ್ಳಿ. ನಾನು ಕೊಡುವುದಕ್ಕೆ ಸಿದ್ಧನಿದ್ದೇನೆ. ಅಧಿಕಾರಿಗಳ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಸ್ಪೀಕರ್‌ಅವರು ಟೈಂ ಕೊಟ್ಟಿದ್ದಾರೆ, ಮಾತನಾಡಿಕೊಂಡುಹೋಗಲಿ ಎಂದು ನೀವು ಇರಬಹುದು. ಆದರೆ ನಿಮ್ಮ ರಾಜ್ಯದ ಕಟ್ಟಡ ಅಲ್ಲಾಡುತ್ತಿದೆ. ನಿಮಗೆ ಕೀರ್ತಿ ಬರುವುದಿಲ್ಲ; ದೇಶಕ್ಕೆ ಒಳ್ಳೆಯದಾಗುವುದಿಲ್ಲ. ನಮ್ಮ ಊರಿನಲ್ಲ ಪೋಲೀಸಿನವರು ಒಬ್ಬ ಬೊಂಬಾಯಿ ಲಾರಿಯವನ ಮೇಲೆ ಕೇಸ್ ರಿಜಿಸ್ಟರ್ ಮಾಡಿದ್ದರು. ಡೈರಿಯಲ್ಲಿ ಎಂಟರ್ ಮಾಡಿದ್ದರು. ಅರೆಷ್ಟುಮಾಡಿದ್ದರು. ಚಾರ್ಜ್‌ಷೀಟ್ ಫೈಲ್ ಆಯಿತು. ಅವನನ್ನು ಬಿಟ್ಟುಬಿಟ್ಟರು. ಅವನ ಹತ್ತಿರ 85 ರೂಪಾಯಿ ತೆಗೆದುಕೊಂಡಿದ್ದಾರೆ. ಸಿರಾ ತಾಲ್ಲೋಕಿನಲ್ಲಿ ಹನ್ನೊಂದು ತಿಂಗಳಿನಲ್ಲಿ 9½ ಸಾವಿರ ರೂಪಾಯಿ ಲಂಚ ವಸೂಲುಮಾಡಿದ್ದಾರೆ. ಇದರಲ್ಲಿ ಅಸತ್ಯವಿದ್ದರೆ ನನ್ನ ನಾಲಿಗೆ ಕತ್ತರಿಸಬೇಕು. ಡಿ.ಎಸ್.ಪಿ. ಯವರಿಗೆ ಹೇಳಿದರೆ ಅವರು ಡಿ.ಎಸ್.ಪಿ. ಪವರ್ಸ್ ಎಲ್ಲಾ ತೆಗೆದುಬಿಟ್ಟು ಡಿ.ಐ.ಜಿ. ಯವರಿಗೆ ಕೊಟ್ಟಿದ್ದಾರೆ, ' ಅವರಿಗೆ ಹೇಳಿ, ನಮಗೆ ಕಾನೂನು ಇಲ್ಲ' ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಯಾರಿಗೆ ಹೇಳಬೇಕು ?

ಶ್ರೀ ಸಿ. ಎಂ. ಪೂಣಚ್ಚ.—ನನಗೆ ಅದರ ಪಟ್ಟಿ ಕೊಡಿ. 9,500 ರೂಪಾಯಿ ಯಾರು ತೆಗೆದುಕೊಂಡಿದ್ದಾರೆ ಎನ್ನುವುದನ್ನು ಹೇಳಿ. ಖಂಡಿತವಾಗಿ ಪರಿಶೀಲನೆಮಾಡುತ್ತೇನೆ. ಭಾಷಣಕ್ಕೋಸ್ಕರ ಹೀಗೆ ಟೀಕೆ ಮಾಡುವುದಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅರವತ್ತೇಳು ಜನ ಅರವತ್ತೇಳು ಅರ್ಜಿಗಳನ್ನು ಗೃಹಮಂತ್ರಿಗಳಿಗೆ ಕೊಟ್ಟಿದ್ದಾರೆ. ಅವುಗಳೆಲ್ಲಾ ಕೋಲ್ಡ್ ಸ್ಟೋರೇಜ್‌ನಲ್ಲಿ ಇವೆ. ಒಂದರ ಮೇಲೂ ಆಕ್ಷನ್ ತೆಗೆದುಕೊಂಡಿಲ್ಲ. ಯಾವ ಯಾವ ತಾರೀಖಿನಲ್ಲಿ ಕೊಟ್ಟಿದೆ ಎನ್ನುವುದನ್ನು ಹೇಳುತ್ತೇನೆ. ತಾವು ಹೇಳಿದ ಹಾಗೆ ಮಾತನಾಡುವುದಕ್ಕೋಸ್ಕರ ನಾನು ಇಲ್ಲ, ಭಾಷಣ ಮಾಡಿ ನನಗೆ ಸಾಕಾಗಿಬಿಟ್ಟಿದೆ. ದೇಶದಲ್ಲಿ ಎಷ್ಟು ಅತ್ಯಾಚಾರ ಆಗುತ್ತಾ ಇದೆ, ಎನ್ನುವುದನ್ನು ಹೇಳುತ್ತಿದ್ದೇನೆ. ಇದನ್ನು ತಾವು ಮನಗಾಣಬೇಕು.

ಪೋಲೀಸ್ ಇನ್ಸ್‌ಪೆಕ್ಟರನ್ನು ಏತಕ್ಕೆ ಇಟ್ಟಿದ್ದಾರೆ ? ಶಾಂತಿಗೆ ಭಂಗಬಾರದ ರೀತಿಯಲ್ಲಿ ನೋಡಿಕೊಳ್ಳುವುದಕ್ಕೂ ನೆಮ್ಮದಿ ವಾತಾವರಣವನ್ನು ಕಾಪಾಡುವುದಕ್ಕೂ ಗೌರವಸ್ಥರಿಗೆ ಅಗೌರವ ಆಗದ ಹಾಗೆ ನೋಡಿಕೊಳ್ಳುವುದಕ್ಕೂ ಅವರು ಇರುವುದು. ನಮ್ಮ ಊರಿನ ಪೋಲೀಸ್ ಇನ್ಸ್‌ಪೆಕ್ಟರ್‌ಅವರು ಅಮಲ್ದಾರರ ಬಾಡಿಗಾರ್ಡ್ ಆಗಿದ್ದಾರೆ. ಚತುಷ್ಪಾದ, ದ್ವಿಪಾದಗಳ ಕೊಲೆಯಾಗುತ್ತದೆ, ಎಂದರೆ ಅವರು ಇವರು ಹೋಗುತ್ತಾರೆ. ಇಂತಹ ಅತ್ಯಾಚಾರಗಳು ಆಗುತ್ತಾ ಇವೆ. ಪೋಲೀಸ್ ಇನ್ಸ್‌ಪೆಕ್ಟರು, ' ನನಗೆ ಏನು ? ಸಬ್ ಇನ್ಸ್‌ಪೆಕ್ಟರು ತಿಂದರೆ ಅವನು ಸಿಕ್ಕಿಹಾಕಿಕೊಳ್ಳುತ್ತಾನೆ; ಕಾನಸ್‌ಟೇಬಲ್ ತಿಂದರೆ ಕಾನಸ್‌ಟೇಬಲ್

ಮನೆಗೆ ಹೋಗುತ್ತಾನೆ' ಎಂದರೆ ಯಾರಿಗೆ ಹೇಳುವುದು ನಾವು? ಡಿ.ಐ.ಜಿ. ಐ.ಜಿ.ಪಿ., ಎಲ್ಲಾ ಸಿಬ್ಬಂದಿಯೂ ಇದೆ. ವಿಚಾರವಾಡುವವರು ಯಾರು? ಪೋಲೀಸ್ ಆಡಳಿತ ನಿಜವಾಗಿಯೂ ಕೂಡ ಶಿಥಿಲ ವಾದ ಕಾಲದಲ್ಲಿ ನೀವೇನಾದರೂ ಸ್ವಲ್ಪ ರೀಜುವಿನೇಟ್ ಮಾಡಿದ್ದೀರಾ? ಹೋದ ಅಧಿವೇಶನದಲ್ಲಿ ರೀ ಆರ್ಗ ನೈಸ್ ಮಾಡುತ್ತೇನೆ ಎಂದು ಹೇಳಿದಿರಿ. ಇನ್ನೂ ಏನೂ ಒಳ್ಳೆಯದು ಆಗಿಲ್ಲ. ಒಂದು ವರ್ಷವಾಯಿತು. ರೀಜುವಿನೇಷನ್ ಯಾವ ಯಾವ ಬಾಟಲ್‌ನಲ್ಲಿ ಇದೆಯೋ? ಪೋಲೀಸಿನವರು ಅದರ ಸೇವನೆಮಾಡಿದ್ದಾರೋ ಇಲ್ಲವೋ, ಅದನ್ನು ಕಾರ್ಯಗತ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ.

ಇನ್ನೊಂದು ವಿಚಾರ ಹೇಳುತ್ತೇನೆ. ಅದು ಸರಿಯೆ ನೋಡಿ, ಸ್ವಾಮಿ. ಅದು 25 ಸಾವಿರ ರೂಪಾಯಿ ಬೆಲೆಬಾಳತಕ್ಕ ಒಂದು ಆಸ್ತಿಯ ವಿಚಾರ. ಹಿಂದಿನ ಗೃಹ ಸಚಿವರು ದಾಕ್ಷಿಣ್ಯಕ್ಕೆ ಒಳಗಾಗಿ ಮಾಡಿದ ವಿಚಾರ ಅದು. ನೀವು ಬಂದಿರಿ ಏನು ಮಾಡಿದಿರಿ? ನನಗೂ ಆ ಪಾರ್ಟಿಗೂ ಆಗುವುದಿಲ್ಲ ಎನ್ನುವ ವಿಚಾರವಲ್ಲ. ಅವರಿಗೆ ವಿದ್ಯಾಭ್ಯಾಸ ಮಾಡಿಸಿದವನು ನಾನು. ಅವರು ಆ ಸ್ವತ್ತು ಸಂಪಾದಿಸಿಕೊಂಡರೆ ನನಗೆ ದುಃಖವಿಲ್ಲ. ದಾಕ್ಷಿಣ್ಯಕ್ಕೆ ಒಳಗಾಗಿದ್ದೀರೋ ಇಲ್ಲವೋ ಹೇಳಿ.

ಶ್ರೀ ರುದ್ರಪ್ಪನವರು ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಬೇಕು ಎಂದಾಗ ನಾನು ಅವರ ಕಾಲು ಹಿಡಿದುಕೊಂಡೆ. ಕಾಂಗ್ರೆಸ್ಸಿಗಾಗಿ ಕಷ್ಟಪಟ್ಟವರಲ್ಲಿ ನಾನೂ ಒಬ್ಬನು. ನನ್ನ ವಿಷಯದಲ್ಲಿ ತಪ್ಪು ತಿಳಿದು ಕೊಳ್ಳುವುದು ಸರಿಯಲ್ಲ.

ಗೌರಿಬಿದನೂರು ತಾಲ್ಲೋಕು ಮಂಚೇನಹಳ್ಳಿಯಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರನ್ನು ಇಟ್ಟಿದ್ದಾರೆ. ಅವರನ್ನು ಅಲ್ಲಿಂದ ವರ್ಗಮಾಡುತ್ತೇವೆಂದು ನೂರುಸಾರಿ ಆಶ್ವಾಸನ ಕೊಟ್ಟಿರಿ. ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್ ಕೋರ್ಟಿನಲ್ಲಿ, ಹೈಕೋರ್ಟಿನಲ್ಲಿ ಅವರ ಮೇಲೆ ಸ್ಟ್ರಿಕ್ಚರ್ ಪಾಸ್ ಮಾಡಿದ್ದಾರೆ. ಒಬ್ಬ ಐ.ಜಿ.ಪಿ. ಕೂಡ ಅವರನ್ನು ಅಲ್ಲಿ ಇಡಕೂಡದು ಎಂದು ಹೇಳಿದ್ದಾರೆ. This fellow deserves to be dismissed.

ಅವರನ್ನು ಇನ್ನೂ ಅಲ್ಲಿಯೇ ಇಟ್ಟಿದ್ದೀರಿ. ಯಾರ ದಾಕ್ಷಿಣ್ಯಕ್ಕೆ ಒಳಗಾಗಿ ಅವರನ್ನು ಅಲ್ಲಿಂದ ವರ್ಗಾಯಿಸಿಲ್ಲ? ದೇಶದಲ್ಲಿ ಎಲ್ಲಾ ಅಂಗಗಳೂ ಒಂದು ಆದರೆ, ಪೋಲೀಸು ಅಂಗವೇ ಒಂದು. ಭಂಡದನಗಳು ಮೇಯುತ್ತಾ ಇರುವ ಹಾಗೆ ಬೇಲಿಯೇ ಎದ್ದು ಹೊಲ ಮೇಯುತ್ತಾ ಇದೆಯಲ್ಲಾ? ಹೇಗೆ ಮಾಡುವುದು?

ರೂರಲ್ ಇಂಡಸ್ಟ್ರಿಯಲೈಸೇಷನ್ ಸ್ಕೀಂ ಪ್ರಕಾರ ಗ್ರಾಮದಲ್ಲಿ ಇರುವ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಎಂದು ದುಡ್ಡುಕೊಟ್ಟಿರಿ. ಈ ದುಡ್ಡು ಕೊಟ್ಟವರಲ್ಲಿ ಕೆಲವರು ಆಂಧ್ರ ಬಾರ್ಡರ್‌ನಲ್ಲಿ ಕಳ್ಳಬಟ್ಟಿ ಸಾರಾಯಿ ಇಳಿಸುತ್ತಿದ್ದಾರೆ. ಈ ವಿಷಯವನ್ನು ಮಂತ್ರಿಗಳ ಗಮನಕ್ಕೆ ಇಂಟರ್‌ಪೆಲೇಷನ್ ಮುಖಾಂತರ ತಂದರೆ, ವಸೂಲು ಮಾಡುತ್ತೇವೆ ಎಂದು ಹೇಳಿದರು. ದುಡ್ಡು ದುರ್ವಿನಿಯೋಗ ಮಾಡಿದ್ದಕ್ಕೆ ಏನುಮಾಡಿದ್ದೀರಿ ಎಂದು ಕೇಳಿದರೆ, ವಸೂಲುಮಾಡುತ್ತೇವೆ ಎಂದು ಹೇಳುತ್ತಾರೆ. ಯಾವ ಒಂದು ಉದ್ದೇಶಕ್ಕೋಸ್ಕರ ದುಡ್ಡು ಕೊಟ್ಟಿದ್ದು ಅದು ಸಫಲವಾಗದೆ ಹೋದರೆ, ದುಡ್ಡು ತೆಗೆದುಕೊಂಡವನನ್ನು ಪ್ರಾಸಿಕ್ಯೂಟ್ ಮಾಡಬೇಕು; ಪೀನಲೈಸ್ ಮಾಡಬೇಕು; ದಂಡನೆ ಮಾಡಬೇಕು. ಏಕೆಂದರೆ ದೇಶದಲ್ಲಿ ಸರ್ಕಾರದ ಹಣವನ್ನು ತೆಗೆದುಕೊಂಡು ದುರ್ವಿನಿಯೋಗ, ದುರುಪಯೋಗ ಮಾಡಿದವರಿಗೆ, ಈ ರೀತಿಯಲ್ಲಿ ಮಾಡಿ ಒಂದೆರಡು ಉದಾಹರಣೆಗಳನ್ನು ತೋರಿಸಿದರೆ ನಿಜವಾಗಿಯೂ ಇವುಗಳನ್ನು ತಡೆಗಟ್ಟಬಹುದು.

ಸರ್ ಎಂ. ವಿಶ್ವೇಶ್ವರಯ್ಯನವರು ಇಂಟರ್‌ನ್ಯಾಷನಲ್ ಫಿಗರ್. ಅಂಥವರ ಹೆಸರಿಗೆ ಮಸಿ ಬಳಿಯುತ್ತಿದ್ದೀರಲ್ಲಾ ಎಂದು ದುಃಖವಾಗುತ್ತದೆ. ಅವರು ಹೊಲದಲ್ಲಿ ಗೇಯುವ ರೈತನಿಗೆ ಕೆಲಸವಿಲ್ಲವಲ್ಲಾ, ಅವನ ಸಂಪಾದನೆಯನ್ನು ಸಬ್‌ಸಿಡೈಸ್ ಮಾಡೋಣ, ಅವನಿಗೆ ಒಂದು ಕೆಲಸ ಹಚ್ಚೋಣ ಎಂದು ಈ ಯೋಜನೆಯನ್ನು ಮಾಡಿದರು. ಆದರೆ ಇನ್‌ಕಂಟ್ಯಾಕ್ಸ್ ಕೊಡದೆ ಇದ್ದವರಿಗೆ, ಸೇಲ್ಸ್‌ಟ್ಯಾಕ್ಸ್ ಕೊಡದೆ ಇದ್ದವರಿಗೆ ಈ ದುಡ್ಡು ಹೋಗುತ್ತಿದೆ. Rural industrialisation is really a scandal. ಇದನ್ನು ನೋಡಿದರೆ ನಿಜವಾಗಿಯೂ ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಎಷ್ಟು ಮನಸ್ಸು ನೋಯುತ್ತದೆ. ಅವರು ನೂರನೆಯ ವರ್ಷದಲ್ಲಿ ಕಾಲಿಟ್ಟಿದ್ದಾರೆ. ಅವರಿಗೆ ಸಾಯುವ ಹೊತ್ತಿಗೆ ಸಹ ಒಂದು ಸುಖವಾಗುವಹಾಗಿಲ್ಲ. ಇವರ ಹೆಸರಿನಲ್ಲಿ ನಡೆಯುವ ರೂರಲ್ ಇಂಡಸ್ಟ್ರಿಯಲೈಸೇಷನ್ ಸ್ಕೀಂ ಅನ್ನು ವಜಾಮಾಡಿ. ಇಲ್ಲವೇ ಇದನ್ನು ಸರಿಯಾಗಿ ರೀವೈಟಲೈಸ್ ಮಾಡಿ, ರೀ ಓರಿಯಂಟೇಟ್ ಮಾಡಿ. ಎಲ್ಲೆಲ್ಲಿ ತಪ್ಪು ಕಾಣುತ್ತದೆಯೋ ಅಲ್ಲಿ ಅದಕ್ಕೆ ಕಾರಣರಾದವರನ್ನು ಶಿಕ್ಷೆಮಾಡಿ. ಅವರನ್ನು ಬಲಿ ಹೊಡೆಯಿರಿ.

ಮಂತ್ರಿಗಳ ಚೇಂಬರ್ ನೋಡಿದ್ದೇನೆ, ಸ್ಪೀಕರ್ ಚೇಂಬರ್ ನೋಡಿದ್ದೇನೆ, ಗವರ್ನರ್ಸ್ ಚೇಂಬರ್ ನೋಡಿದ್ದೇನೆ; ಈ ರೂರಲ್ ಇಂಡಸ್ಟ್ರೀಸ್ ಡೈರೆಕ್ಟರವರ ಚೇಂಬರ್‌ಗೆ ಹೋಗಿಬಿಟ್ಟರೆ ಅರಮನೆ ಸ್ವಾಮಿ! (ನಗು!) ಅರಮನೆ!! ಏನು ಫರ್ನೀಚರು, ಏನು ಕುರ್ಚಿ, ಏನು ಮೇಜು, ಅದೇನು ಅಟ್ಟಹಾಸ! ಅವರನ್ನು ನೋಡಿ ಜನರು ಏನೆಂದಾರು ಎಂದು ಹೇಳಿ. ನೀವಾದರೂ ಸ್ವಲ್ಪ simplicity ಬೇಕು ಎಂದು ಹೇಳುತ್ತೀರಿ. ಅವರಿಗೆ ಏನೂ ಭಯ ಇಲ್ಲ. ಅವರು ಐ.ಎ.ಎಸ್. ಆಫೀಸರಾಗಿಬಿಟ್ಟಿದ್ದಾರೆ. ಪರಿಸ್ಥಿತಿ ಹೀಗಿದೆ. ಸ್ವಲ್ಪ ರೂರಲ್ ಇಂಡಸ್ಟ್ರೀಸ್ ಮಿನಿಸ್ಟರು ಆ ಡೈರೆಕ್ಟರ ಆಫೀಸಿಗೆ ಹೋಗಿ ಅಲ್ಲಿರುವ ಕುರ್ಚಿ, ಮೇಜು ಇದನ್ನೆಲ್ಲಾ ನೋಡಿಕೊಂಡು ಬಂದರೆ ಅವರಿಗೇ ನಾಚಿಕೆಯಾಗುತ್ತದೆ. ಅಷ್ಟುದೊಡ್ಡ ಸ್ಥಳದಲ್ಲಿದ್ದು, ಭಂಗಿಸೊಪ್ಪು, ರಂ, ಜಿನ್ ಇದನ್ನೆಲ್ಲಾ ನಾನಾ ಕಡೆಯಿಂದ ಅವರೇ ಖುದ್ದು ತರಿಸುತ್ತಾರೆ. (ನಗು!)

ಇಂಡಸ್ಟ್ರೀಸ್ ವಿಚಾರ ಹೇಳುವಾಗ ಭದ್ರಾವತಿ ಕಬ್ಬಿಣದ ಕಾರ್ಖಾನೆಯ ವಿಷಯವನ್ನು ಕೈಗಾರಿಕಾ ಸಚಿವರ ಗಮನಕ್ಕೆ ತರಬೇಕಾಗಿದೆ. ಇಂಡಿಯಾ ಸರ್ಕಾರದವರು ಸ್ಥಾಪನೆಮಾಡಿರುವ ಉಕ್ಕಿನ ಕಾರ್ಖಾನೆಯ ಫಲವಾಗಿ ಈ ಕಾರ್ಖಾನೆಯನ್ನು ಮುಚ್ಚಬೇಕಾಗುತ್ತದೆ. ಇದು ಸಮುದ್ರದ ಅಲೆಗೆ ಎದುರುಬಿದ್ದಹಾಗಾಗುತ್ತದೆ. ಅಲ್ಲಿರುವ ಎರಡು ಕಾಲು ಹೆಗ್ಗಣಗಳನ್ನು ಓಡಿಸಿ ಎಂದು ಕೇಳಿಕೊಂಡರೆ, ನಿಮ್ಮನ್ನೇ ಕಿತ್ತುಹಾಕುವುದಕ್ಕೆ ಪ್ರಯತ್ನ ನಡೆಯುತ್ತಾ ಇದೆ. ಅಲ್ಲಿರುವ ಅಧಿಕಾರಿಯನ್ನು ಬದಲಾವಣೆ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗದೇ ಇದ್ದರೆ ಏನು ಪ್ರಯೋಜನ? ಪರ್ಚೇಸ್ ಮ್ಯಾನೇಜರು ಮಂಚಯ್ಯ ಎಂದು ಇದ್ದಾರೆಯಲ್ಲಾ.........

Mr. SPEAKER.—I will have to call you to order, the names should not be raised on the floor of the House.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಊರಿನಲ್ಲಿ ರಾಜವೈಭವ ಅನುಭವಿಸುತ್ತಿರುವ ಎಷ್ಟೋ ಜನ ಶ್ರೀಮಂತರು ಇದ್ದಾರೆ. ಅವರ ಮನೆಗೆ ಹೋಗಿದ್ದೇನೆ. ಈ ಪರ್ಚೇಸ್ ಮ್ಯಾನೇಜರ ಮನೆಗೆ ಹೋಗಿದ್ದೇನೆ. ಅವರು ಉಪಯೋಗಿಸುತ್ತಿರ ವ ಕಾರ್ಪೆಟ್ಸ್ ಎರಡು ಎರಡೂವರೆ ಮೂರು ಸಾವಿರ ರೂಪಾಯಿ ಬೆಲೆ ಆಗುತ್ತದೆಯಂತೆ. ಅವರೇ ಹೇಳುತ್ತಾರೆ. ಅದಕ್ಕೆ ಸರಿಯಾಗಿ ಈ ಕಾಂಗ್ರೆಸ್ ಮೆಂಬರ್ರು ಅವರಿಗೆ ಬೆಂಬಲವಾಗಿದ್ದಾರೆ. ಹಾಗಿರುವಾಗ ಅವರು ಹೇಳುತ್ತಾರೆ. ನನ್ನನ್ನು ಇಲ್ಲಿಂದ ಕದಲಿಸುವವರು ಯಾರು ಇದ್ದಾರೆ ಎಂದು. ಒಬ್ಬ ಪರ್ಚೇಸ್ ಮ್ಯಾನೇಜರನ್ನು ಅಲ್ಲಿಂದ ಕದಲಿಸುವುದಕ್ಕೆ ಆಗುವುದಿಲ್ಲ ಎಂದರೆ ಅವರದೇನು ಬಲಿಸ್ವರೂಪವೇ ? ವಾಮನ ಸ್ವರೂಪವೇ ಎಂದು ಕೇಳುತ್ತೇನೆ. ಅವರು ಯಾರ ಹಿಡಿತದಲ್ಲಿ ಇರತಕ್ಕದ್ದು ? ಇವೊತ್ತು ಕೈಗಾರಿಕಾ ಸಚಿವರ ಇದ್ದಾರೆಯಲ್ಲಾ ಅವರು ರಾಮ ಮನಸ್ಸು ಮಾಡಿದಹಾಗೆ ಮಾಡಿ ಬೇರೆ ಕಡೆಗೆ ಅವರನ್ನು ನಾಳೆದಿವಸ ಟ್ರಾನ್ಸ್‌ಫರ್ ಮಾಡಬೇಕು. ನನ್ನ ಹಿತಕ್ಕಲ್ಲ, ನಿಮ್ಮ ಕೀರ್ತಿಗೆ. ಅಲ್ಲಿ ವಿ. ಪಿ. ಮೆಥನಾಲ್ ಮತ್ತು ಕ್ರೂಡ್ ಮೆಥನಾಲ್ ಎಂದು ಹೇಳಿ ಎರಡು ವಿಧವಾದ ಸ್ಪಿರಿಟ್ ಏನಿದೆ ಅದಕ್ಕೆ ಬಂದಿರುವ ಲಾಭ ಎಷ್ಟು ಎಂದು ಪ್ರಶ್ನೆ ಕೇಳಿದ್ದೆ. ಇರಲಿ, ಅವರ ಆಸ್ತಿಪಾಸ್ತಿ ಎಷ್ಟು ಎಂಬುದನ್ನು ಎನ್‌ಕ್ವೈರ್‌ಮಾಡಿ. ಅವರಿಗೆ ಹಿಂದೆ ಎಷ್ಟು ಆಸ್ತಿ ಇತ್ತು ಎಂಬುದನ್ನು ಎಂಕ್ವೈರ್ ಮಾಡಿ. ನಾನು ಹೇಳುವುದರಲ್ಲಿ ಯಾವುದಾದರೂ ಸತ್ಯ ಇದ್ದರೆ ಅದನ್ನು ತೆಗೆದುಕೊಳ್ಳಿ. ನಾನು ನಿಮ್ಮ ಮುಂದೆ ಚಿರಂಜೀವಿ. ನೀವೆಲ್ಲಾ ನನಗೆ ಆಶೀರ್ವಾದ ಮಾಡಬೇಕು. ಸುಳ್ಳು ಹೇಳಿದ್ದರೆ, ಸುಳ್ಳುಹೇಳಿದ್ದೀರಿ, ಸತ್ಯವಾಗಿ ಹೇಳಿ ಎಂದು ಹೇಳಿ, ಇಲ್ಲದೆ ಹೋದರೆ ಸರಿಯಾದ ದಾರಿಯಲ್ಲಿ ನಡೆದುಕೊಳ್ಳಿ ಎಂದು ಹೇಳಿ. ಅದೆ ಪರ್ಚೇಸ್ ಮ್ಯಾನೇಜರು ಬೊಂಬಾಯಿನಿಂದ ಬರತಕ್ಕ 50 ಲಕ್ಷ ರೂಪಾಯಿ ಸ್ಕ್ರ್ಯಾಪ್ ಕೊಂಡುಕೊಳ್ಳುತ್ತಾರೆ. ಅದೇನು ಸಕ್ಕರೆಯೇ ? ತುಪ್ಪವೇ ? ತೂತಿನಲ್ಲಿ ಸೋರುತ್ತದೆ ಎಂದರೆ ರೈಲ್ವೇವ್ಯಾಗನ್ ತೂತೇ ? ಪರ್ಚೇಸ್ ಮ್ಯಾನೇಜರ ಕೈತೂತೇ ? ಎಂಬುದನ್ನು ತಾವು ಯೋಚನೆಮಾಡಬೇಕು. ವಿ. ಪಿ. ಮೆಥನಾಲ್‌ನಲ್ಲಿ ಲಕ್ಷಾಂತರ ರೂಪಾಯಿ ಹೊಡೆಯುತ್ತಾರೆ. ಅದನ್ನು ನಿಮಗೆ ತೋರಿಸಿ ಎಂದರೆ ಹೇಗೆ ತೋರಿಸುವುದಕ್ಕಾಗುತ್ತದೆ ? ಗುಡಾರದಲ್ಲಿ ಕುಳಿತುಕೊಂಡು ಹಗ್ಗ ಕುಯ್ಯುವವರು ಇದ್ದಾರೆ. ಹೇಗೆ ತೋರಿಸುವುದು ? ಕಮಿಟಿ ಇದೆ. ಕಮಿಟಿಯ ಮುಂದೆ ರಿಪೋರ್ಟ್ ಇಡುತ್ತಾರೆ. ನೋಡುತ್ತಾರೆ, ಎಲ್ಲಾ ಸರಿಯಾಗಿದೆ ಎಂದು ಒಪ್ಪಿಕೊಳ್ಳುತಾರೆ. ಒಬ್ಬ ಆಫೀಸರನ್ನು ಈ ಬಗ್ಗೆ ತನಿಖೆಮಾಡುವುದಕ್ಕಾಗಿ ಇಡಿ, ತನಿಖೆ ಮಾಡಲಿ, ಆಗ ಗೊತ್ತಾಗುತ್ತದೆ. ಅವೊತ್ತೇ ಹೇಳಿದೆ, 20-25 ಲಕ್ಷ ರೂಪಾಯಿ ಕಟ್ಟಡಕ್ಕೆ ಹಾಕುತ್ತೀರಿ. ಒಬ್ಬ non-technical man bill pass ಮಾಡುತ್ತಾನೆ. ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಎಷ್ಟು ಅನುಭವ ಇರುತ್ತದೆ ? ಚೀಫ್ ಇಂಜಿನಿಯರು, ಅಕೌಂಟೆಂಟ್ಸ್ ಇವರೆಲ್ಲರೂ ಇದ್ದೂ ಕೂಡ ಒಂದು ಬಿಲ್ ಬಂದರೆ ಪಾಸ್ ಮಾಡುವುದಕ್ಕೆ ಕಷ್ಟವಾಗುತ್ತದೆ. ಹೀಗಿರುವಾಗ non-technical man ಗೆ ಇಷ್ಟು ಅಧಿಕಾರ ಕೊಡಬಾರದು. ಆದರಿಂದ ತೊಂದರೆಯಾಗುತ್ತದೆ. ಹಣ ದುರ್‌ವಿನಿಯೋಗವಾಗುತ್ತದೆ. ಅದಕ್ಕೆ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಅವರಿಗೆ ಕೊಟ್ಟಿರುವ ಅಧಿಕಾರವನ್ನು ತಪ್ಪಿಸಿ ಯಾರಾದರೂ ಎಕ್ಸಿಕ್ಯೂಟೀವ್ ಇಂಜಿನಿಯರಿಗೆ 100 ಅಥವಾ 50 ರೂಪಾಯಿ ಜಾಸ್ತಿ ಕೊಟ್ಟು ಅವರಿಂದ ಸ್ಕ್ರೂಟಿನೈಸ್ ಮಾಡಿಸಿ, ಅವರು ಯಾವ ರೀತಿ ತಪ್ಪಿದೆ ಎಂಬುದನ್ನು ಕಂಡುಹಿಡಿಯಲಿ. ಅದನ್ನು ಬಿಟ್ಟು Non-Technical man ಗೆ ಅಧಿಕಾರ ಕೊಡುವುದು ಸರಿಯಲ್ಲ ಎಂದು ಹೇಳುತ್ತೇನೆ.

ಸ್ವಾಮಿ, ಈ ಸ್ಯಾಂಡಲ್ ಸೋಪು, it has become a scandal soap. ಇದರಲ್ಲಿ ಎಷ್ಟು vested interest ಇದೆ ಎಂದರೆ ಅದನ್ನು ನಿಜವಾಗಿಯೂ ಹೇಳುತ್ತಾ ಹೋದರೆ ಮುಗಿಯುವುದೇ ಇಲ್ಲ. ಪಂಪ ರಾಮಾಯಣ ಬರೆದ, ವಾಲ್ಮೀಕಿ ರಾಮಾಯಣ ಬರೆದ, ಕುಮಾರವ್ಯಾಸ ಮಹಾಭಾರತ ಬರೆದು ಮುಗಿಸಿದ, ಇದರಲ್ಲಿ ನಿಮಗಿರತಕ್ಕ ವೆಸ್ಟೆಡ್ ಇಂಟರೆಸ್ಟನ್ನು ಬರೆದು ಮುಗಿಸುವುದಕ್ಕೆ ಎಷ್ಟು ವರ್ಷಗಳಾದರೂ ಆಗುವುದಿಲ್ಲ. ಈಗ ಸ್ಯಾಂಡಲ್ ಸೋಪ್ ಮಾರಾಟ ಮಾಡಲು ಕೊಟ್ಟಿರತಕ್ಕ ಏಜೆನ್ಸಿಯನ್ನು ಎಷ್ಟೋ ವರ್ಷದಿಂದ ಮುಂದುವರಿಸುತ್ತಾ ಇದ್ದೀರಿ. ಇದು ಇನ್ನೊಬ್ಬರ ಕೈಯಲ್ಲಿ ಆಗುವುದಿಲ್ಲವೇ ? ಮೈಸೂರು ಸಾಂಡಲ್ ಸೋಪಿಗೆ ಇರತಕ್ಕ ವಿಶಾಲ ಕೀರ್ತಿಯನ್ನು ಉಳಿಸಬೇಕಾದರೆ ವ್ಯಾಪಾರ ಮಾಡತಕ್ಕ ಮಾರ್ಗದಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕೆಂದು ಈ ಕಾಂಗ್ರೆಸ್ ಮಂತ್ರಿಗಳಿಗೆ ಹೇಳುತ್ತೇನೆ. ನೀವು ಈಗ ಈ ಸ್ಯಾಂಡಲ್ ಸೋಪ್ ಫ್ಯಾಕ್ಟರಿಗೆ ಒಂದು ಕಟ್ಟಡ ಕೊಟ್ಟಿದ್ದೀರಿ. ಯಾರನ್ನು consult ಮಾಡಿದಿರಿ ಎಂದರೆ ಉತ್ತರವಿಲ್ಲ. ಸ್ವಲ್ಪ ಕೋಪವಾಗಿಯೇ ಮಾತನಾಡುವುದಾದರೆ ಈ ಸ್ಯಾಂಡಲ್ ಸೋಪ್ ಫ್ಯಾಕ್ಟರಿಯನ್ನು ಯಾರನ್ನು ಕೇಳಿ ಅಲ್ಲಿಗೆ ತೆಗೆದುಕೊಂಡು ಹೋಗಿ ಹಾಕಿದಿರಿ ? ಅಲ್ಲಿ ಸ್ವಲ್ಪವೂ ಸ್ಥಳ ಇಲ್ಲ. ಇವೊತ್ತೂ ಹೋಗಿ ನೋಡಿಕೊಂಡು ಬಂದೆ. ಕಾಲು ಇಟ್ಟರೆ ಕೈಇಡುವುದಕ್ಕಾಗುವುದಿಲ್ಲ ಕೈಇಟ್ಟರೆ ಕಾಲು ಇಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಎಂ. ಪೂಣಚ್ಚ.—ಮಾಹಿತಿ ಇದ್ದು ಮಾತನಾಡುತ್ತೀರೋ ಸುಮ್ಮನೆ ಮಾತನಾಡುತ್ತಾ ಇದ್ದೀರೋ ? ನೀವು ಹೇಳುವುದನ್ನು ಕೇಳಿದರೆ ಆಶ್ಚರ್ಯವಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾಲ್ಕು ಸಾರಿ ನಾನು ಅಲ್ಲಿಗೆ ಹೋಗಿದ್ದೆ. ನಾನು ನೋಡಿದ್ದೇನೆ. ಎಲ್ಲರೂ ಹೇಳುತ್ತಾರೆ, ಸ್ಥಳ ಸಾಲುವುದಿಲ್ಲ ಎಂದು. ಇಲ್ಲಿಂದ ಅದನ್ನು ಷಿಫ್ಟ್‌ಮಾಡುವಾಗ ಏನೇನಾಯಿತು ಎಂಬುದು ಒಂದು ದೊಡ್ಡ ರಾಮಾಯಣ. ನೀವು ಈ ಇಂಡಸ್ಟ್ರಿಯನ್ನು expand ಮಾಡುವಾಗ ಅದಕ್ಕೆ ಕಟ್ಟಡ ಕಟ್ಟಬೇಕಾದರೆ ಯಾರನ್ನಾದರೂ ನಿಜವಾಗಿಯೂ ಕೇಳಿದ್ದೀರಾ ? ಯಾವುದಾದರೂ ಒಂದು ಪ್ರಶ್ನೆ ಕೇಳಿದರೆ ಪರಿಣತರನ್ನು ಕೇಳಿದ್ದೇವೆ ಎಂದು ಹೇಳುತ್ತೀರಿ. ಇಂಥ ವಿಷಯದಲ್ಲಿ ಪರಿಣತರನ್ನು ಏಕೆ ಕೇಳಬಾರದಾಗಿತ್ತು ಎಂದು ತಮ್ಮ ಮೂಲಕ ಕೇಳುತ್ತೇನೆ.

ಜೈಲು. ನಿನ್ನೆ ನಾನು ಜೈಲಿಗೆ ಹೋಗಿದ್ದೆ ಸ್ವಾಮಿ. (ಸಭೆಯಲ್ಲಿ ನಗು|) ಒಳ್ಳೆಯ ಬೆಡ್‌ಷೀಟ್ ಕೊಂಡುಕೊಳ್ಳೋಣವೆಂದು ಹೋಗಿದ್ದೆ. ಅಲ್ಲಿ ಅವರಿಗೆ ಸರ್ಕಾರದವರು ಕೊಡುವ ತರಕಾರಿ, ತುಪ್ಪ, ಎಣ್ಣೆ, ಕಂಬಳಿ ಮತ್ತು ಅವರಿಂದ ನಡೆಸತಕ್ಕ ಕೈಗಾರಿಗೆ ಇದನ್ನೆಲ್ಲಾ ನೋಡಿದೆ. ನೋಡಿದರೆ, ನೀವೂ ಕೂಡ ನಾನು ಹೇಳುವುದು ಯೋಗ್ಯ ಎಂದು ಅನ್ನುತ್ತೀರಿ, ಅಲ್ಲಿ ಇನ್ನೂ ಸುಧಾರಣೆ ಆಗಬೇಕು ಎನ್ನುತ್ತೀರಿ, ಸಮಾಜದಲ್ಲಿ ಯಾವನು ಬಡವನೋ ಅವನನ್ನು ಅಲ್ಲಿ ಇಟ್ಟು ಅವನು ಮತ್ತೆ ಸಮಾಜದಲ್ಲಿ ಒಬ್ಬ ಸುಧಾರಿತ ವ್ಯಕ್ತಿಯಾಗಿ ಜೀವನ ನಡೆಸಲು ಅವಕಾಶ

ವನ್ನು ಉಂಟುಮಾಡಿಕೊಡಬೇಕಾದ ಜವಾಬ್ದಾರಿ ನಿಮ್ಮ ಮೇಲೆ ಇದೆ. ಅಲ್ಲಿನ ಆಡಳಿತದ ವೈಭವವನ್ನು ನನ್ನ ಸ್ನೇಹಿತರು ಹೇಳಿದರು. ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿಸನ್ಸ್ ಇದ್ದಾರೆಯಲ್ಲಾ ಅವರು ಸರ್ವಾಧಿಕಾರಿ ಅಲ್ಲ. ಅವರನ್ನು ಲೆಂಟ್ ಸರ್ವೀಸ್ ಮೇಲೆ ಮದರಾಸಿನಿಂದ ಇಲ್ಲಿಗೆ ತಂದರು. ಅವರು ಅಮೇರಿಕಾಕ್ಕೆ ಬೇರೆ ಹೋಗಿದ್ದರು, ಅವರ ಹತ್ತಿರ ಮಾತೆತ್ತಿದರೆ ಅಮೆರಿಕಾ, ಇಂಗ್ಲೆಂಡು, ಅದು, ಇದು, ಬರೀ ಅಲ್ಲಿಯದೇ ಮಾತು. ನೀವೇನು ಇಲ್ಲಿ ರಿಫಾರಂಸ್ ಮಾಡಿದ್ದೀರಿ ಎಂದರೆ ಏನೂ ಇಲ್ಲ, ಜೈಲನ್ನು ರಿಫಾರಂ ಮಾಡಿ. ರಿಫಾರ್ಮೇಷನ್ ಮಾಡಲಿಕ್ಕೆ ನಾನು ಏನು ಸಲಹೆ ಕೊಡುತ್ತೇನೆ ಎಂದರೆ ಮೊದಲು ಅವರನ್ನು ರಿಫಾರಂ ಮಾಡಿ. ಮೊದಲು ಇದ್ದದ್ದೆಲ್ಲವನ್ನೂ ಅವರು ಕುಲಗೆಡಿಸಿ ಬಿಟ್ಟಿದ್ದಾರೆ. ಅವರು ಎಷ್ಟು ವರ್ಷ ಇರಬೇಕೆಂದು ಬಂದಿದ್ದರೋ ಅದಕ್ಕಿಂತ ಹೆಚ್ಚಾಗಿ ಮತ್ತೆ ಎಕ್ಸ್‌ಟೆನ್ಷನ್‌ಗೆ ಪ್ರಯತ್ನ ನಡೆಯುತ್ತಇದೆ. ಈ ರೀತಿಯಾಗಿ ಅಂಥವರಿಗೆ ಎಕ್ಸ್‌ಟೆನ್‌ಷನ್ ಕೊಡುವುದು ಏಕೆ? ಬೆಳಗಾಂ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿರುವ ಆಫೀಸರರಿಗೆ 650 ರೂಪಾಯಿ, 1,200 ರೂಪಾಯಿ, 1,400 ರೂಪಾಯಿ ಸಂಬಳವೇಕೆ? ಇದರ ಅರ್ಥವಾಗುವುದಿಲ್ಲ. ಆದ್ದರಿಂದ ಇಂಥ ಅಧಿಕಾರಿಗಳನ್ನು ತೀವ್ರ ಬದಲಾವಣೆ ಮಾಡಬೇಕ . ಸರಕಾರ 28 ಸಾವಿರ ರೂಪಾಯಿ ಕಂಟ್ರಾಕ್ಟನ್ನು ಕೊಡಬೇಡ ಎಂದ ಮೂರು ಸಾರಿ ಹೇಳಿದರು. ಅದನ್ನು ಕೊಡಬೇಕಾದರೆ ಇವರಿಗೆ ಎಷ್ಟು ಧೈರ್ಯ ? ಇದರ ಅರ್ಥವಾಗುವುದಿಲ್ಲ. ಇಂಥ ಬಿಲ್ಲುಗಳ ಪರಿಶೀಲನೆಯಾಗಿ ಅಡ್ವೊಕೇಟ ಜನರಲ್—ಅಕೌಂಟೆಟ್ ಜನರಲ್ ಅವರ ಮನ್ನಣೆ ಪಡೆದು ಹಣ ಕೊಡಬೇಕೋ ಬಿಡಬೇಕೋ ಎಂಬ ಪದ್ಧತಿ ಇದೆ. ಆದರೆ ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ಹಣ ಕೊಡಬೇಕು ಎಂದು ಕಾಗದ ಬಂದಿದೆ. ಎಷ್ಟು ಧೈರ್ಯ ಅವರಿಗೆ? ಚೀಫ್ ಮಿನಿಸ್ಟರ್ ಚೇಂಬರಿನಲ್ಲಿ ಉಪಯೋಗಿಸಲು ನಾಲ್ಕು ಸಾವಿರ ರೂಪಾಯಿ ಬೆಲೆಬಾಳುವ ಬ್ಲಾಂಕೆಟ್ ಕೊಂಡಿದ್ದಾರೆ. ಕಂಟ್ರಾಕ್ಟು ಕೊಡುವಾಗ ತೋರಿಸಿದ ಸಾಂಪಲ್ ಬೇರೆಯಾಗಿತ್ತು, ಸಪ್ಲೈಮಾಡಿದ್ದು ಬೇರೆ. ಈ ರೀತಿ ಸರ್ವಾಧಿಕಾರ ಅವರಿಗೆ ಏಕೆ? ಇಂಥ ವ್ಯವಹಾರಗಳ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷ ಕೊಡಬೇಕು ಎಂದು ತಮ್ಮಲ್ಲಿ ವಿನಯದಿಂದ ಕೇಳಿಕೊಳ್ಳುತ್ತೇನೆ.

ಇನ್ನು ಕೋರ್ಟು ವಿಚಾರ. Separation of Executive from Judiciary ಎಂದಿದೆ. ಆದರೆ ಈ ರೋಗ ಇನ್ನೂ ಇದೆ. ನಾನು ಒಂದು ವಿಷಯವನ್ನು ಬಹಳ ಸಂಕಟದಿಂದ ಹೇಳಬೇಕಾಗಿದೆ. ಅದನ್ನು ಮಾನ್ಯ ಸಚಿವರಾದ ಶ್ರೀಮಾನ್ ವೀರಣ್ಣಗೌಡರಿಗೆ ಅವರ ಚೇಂಬರಿನಲ್ಲಿ ತಿಳಿಸಿದ್ದೇನೆ. ಈಗ ಆ ಮ್ಯಾಜಿಸ್ಟ್ರೇಟನ್ನು ಟ್ರಾನ್ಸಫರ್ ಮಾಡಬೇಕೆಂದು ಯೋಚನೆ ಮಾಡಿದ್ದಾರೆ. ಸಾಕ್ಷಿ ಕೊಡುವುದಕ್ಕೆ ಬೇಕಾದಷ್ಟು material ಇದೆ.

Sri C. M. POONACHA.—Transfer of judicial officers in the State is done by the High Court and I wonder whether my friend is trying to cast reflection on the Hon'ble High Court.

Sri C. J. MUCKANNAPPA.—My humble submission is that the High Court will consult the State Government.

Mr. SPEAKER.—All the same it is the High Court that makes transfers. Nothing should be said against the High Court

Sri C. J. MUCKANNAPPA.—I am not making any remarks against the High Court. I am very careful when I make a remark against the courts.

Mr. SPEAKER.—The High Court may be consulting the Government. But ultimately decision will have to be taken by the High Court and any remark which involves the name of the High Court should not be made here. Hon'ble Member should be very careful about that.

Sri Y. VEERAPPA (Hole-Narasipura).—May I know whether the High Court is consulted in this respect ?

Sri C. M. POONACHA.—Transfer and promotion of judicial officers are matters that are dealt with by the High Court. The High Court send their recommendation and on the basis of that Government Order is issued.

Mr. SPEAKER.—Then it means Government is transferring.

Sri C. M POONACHA.—Yes.

Mr. SPEAKER.—On the recommendation of the High Court ?

Sri C. M. POONACHA.—Yes.

Mr. SPEAKER.—The Hon'ble Member will have to close.

Sri C. J. MUCKANNAPPA.—I will stop at 6-30.

ನ್ಯಾಯಾಲಯದ ವಿಚಾರದಲ್ಲಿ ನಾವು ಬಹಳ ಎಚ್ಚರಿಕೆಯಿಂದ ಇರಬೇಕು, ಈ ವಿಷಯವನ್ನು ಬೇಡಿಕೆಯ ಕಾಲದಲ್ಲಿ ಹೆಚ್ಚಾಗಿ ಹೇಳುತ್ತೇನೆ. ಸರಕಾರಕ್ಕೆ ಒಂದು ಸೂಚನೆ ಮಾಡುವುದು ಏನೆಂದರೆ ಆಡಳಿತ ಯಂತ್ರ ಶಿಥಿಲವಾಗಿದೆ. ಈ ಶಿಥಿಲವಾಗಿರತಕ್ಕಂಥ ಆಡಳಿತ ಯಂತ್ರವನ್ನು rejuvenate ಮಾಡಬೇಕು. ಆಗ ದೇಶಕ್ಕೆ ಒಳ್ಳೆಯದು ಆಗುತ್ತದೆ. ಅಧಿಕಾರದಲ್ಲಿ ಇರತಕ್ಕ ಮಂತ್ರಿಗಳು ಆಡಳಿತ ಪಕ್ಷದಲ್ಲಿರುವ ನನ್ನ ಸ್ನೇಹಿತರು ಎಲ್ಲರೂ ಮನಸ್ಸು ಮಾಡಿ, ದೇಶದಲ್ಲಿರತಕ್ಕ ಲೋಪದೋಷಗಳು ಏನು ಯಾವ ಯಾವ ಡಿಪಾರ್ಟ್‌ಮೆಂಟಿನಲ್ಲಿ ಇದೆ, ಯಾವ ಅಧಿಕಾರಿಯಲ್ಲಿ ಮನೆ ಮಾಡಿಕೊಂಡಿದೆ ಎಂಬುದನ್ನು ಪರಿಶೀಲಿಸಿ, ಅದನ್ನು ಸರಿಪಡಿಸುವುದಕ್ಕೆ ಒಂದು ಸೂಕ್ತ ಕಾರ್ಯಕ್ರಮ ಕೈಕೊಂಡು ದೇಶದ ಕೀರ್ತಿಯನ್ನು ಮೈಸೂರಿನ ಒಳ್ಳೆಯ ಹೆಸರನ್ನು ಉಳಿಸಿಕೊಳ್ಳಬೇಕು ಎಂದು ಹೇಳುತ್ತೇನೆ. ನಮ್ಮ ಮುಂದೆ ಇಟ್ಟಿರತಕ್ಕಂಥ ಬಡ್ಜೆಟ್ಟಿನ ಅಂಕಿ ಅಂಶಗಳನ್ನು ನೋಡಿದರೆ, ನನ್ನ ಸ್ನೇಹಿತರು ಹೇಳದ ಹಾಗೆ ಇದು ನಿಜವಾಗಿಯೂ ಖೋತಾ ಬಡ್ಜೆಟ್ ಆಗಿದೆ.

(Sri C. J. Muckannappa)

ಕೇಂದ್ರ ಸರಕಾರದಿಂದ ಬರತಕ್ಕ ಹಣವನ್ನು ಆದಾಯವೆಂದು ತೋರಿಸಿ ಇದು 14 ಲಕ್ಷ ರೂಪಾಯಿಗಳ ಉಳಿತಾಯ ಬಡ್ಜೆಟ್ ಎಂದು ತೋರಿಸಲಾಗಿದೆ. ಈ ಬಡ್ಜೆಟ್ಟಿನಲ್ಲಿ ದೇಶದ ಸರ್ವತೋಮುಖವಾದ ಅಭಿವೃದ್ಧಿ ಕಾರ್ಯಗಳಿಗೋಸ್ಕರ ಏನೇನೂಇಲ್ಲ. ಇದು ನಿಜವಾಗಿ ಖೋತಾ ಬಡ್ಜೆಟ್ ಅಗಿದೆ. ನೌಕರ ಸಂಬಳ ಸಾರಿಗೆಗೋಸ್ಕರ ಹೆಚ್ಚಾಗಿ ಖರ್ಚು ಇದೆ.

ಆರು ಕೋಟಿ ರೂಪಾಯಿ ಇಂಡಿಯಾ ಸರ್ಕಾರದ ಕಡೆಯಿಂದ ಬರುವುದೆಂದು ಒಪ್ಪಿಕೊಂಡಿದ್ದೀರಿ, ಅದರೆ ಇಂಡಿಯಾ ಸರ್ಕಾರ ಕೊಡುವುದು ನಮ್ಮದೇ. ಶ್ರೀ ಮಾರ್ಕ ವೆಂಕಾಜಿರಾಯರ ಬ್ಯಾಂಕಿನಲ್ಲಿ ಹಣವಿದ್ದರೆ ಅದು ನಮ್ಮದೇ. ಇದೆಲ್ಲಾ ನೋಡಿ ಸರಿಯಾದ ವ್ಯವಸ್ಥೆ ಮಾಡಿಲ್ಲ. ಇಂಥ ಬಡ್ಜೆಟ್ ನಮ್ಮ ಮುಂದೆ ಇಡಬಾರದು. ಇದರಿಂದ ದೇಶ ಉದ್ಧಾರವಾಗುವುದಿಲ್ಲ, ಬಡವರು ಉದ್ಧಾರವಾಗುವುದಿಲ್ಲ. ಇನ್ನು ಮುಂದಾದರೂ ಸರಿಯಾದ ಬಡ್ಜೆಟ್ ತಯಾರಿಸಲು ದೇವರು ಬುದ್ಧಿಯನ್ನು ಕೊಟ್ಟು ಒಳ್ಳೆಯದನ್ನು ಮಾಡಲಿ ಎಂದು ಹೇಳಿ ಈ ಬಡ್ಜೆಟ್ಟನ್ನು ವಿರೋಧಿಸುತ್ತೇನೆ.

Mr. SPEAKER.—The House will now rise and meet tomorrow at 1 P.M.

The House adjourned at Thirty-two Minutes past Six of the Clock to meet at One of the Clock on Thursday, the 3rd April 1958.